
Osmania University Library Series No. 1

A DESCRIPTIVE CATALOGUE OF THE KANNADA MANUSCRIPTS IN THE OSMANIA UNIVERSITY LIBRARY

Editors :

B. Ramachandra Rao, M. A., Ph. D.,
Lecturer, Dept. of Kannada, Osmania University.

T. V. Venkatachala Sastry, M. A.,
Lecturer, Dept. of Kannada, Osmania University.





OSMANIA UNIVERSITY
HYDERABAD
1966

Osmania University Library Series No. 1

A DESCRIPTIVE CATALOGUE
OF
THE KANNADA MANUSCRIPTS
IN THE
OSMANIA UNIVERSITY LIBRARY

Editors :

B. Ramachandra Rao, M. A., Ph. D.,
Lecturer, Dept. of Kannada, Osmania University.

T. V. Venkatachala Sastry, M. A.,
Lecturer, Dept. of Kannada, Osmania University.



OSMANIA UNIVERSITY
HYDERABAD
1966

Price : Rs. 7-50

Printed at Sadhana Printery, Narayanaguda, Hyderabad.

PREFACE

The present work contains descriptive notices of 295 Kannada manuscripts preserved in the Osmania University Library, Hyderabad. The whole work is arranged in two parts: palm-leaf manuscripts are described in Part I and paper manuscripts, in Part II. Appendices to Parts I and II describe the Sanskrit manuscripts found in Kannada character.

The cataloguing work of these manuscripts was entrusted to Mr. K. Krishnacharya, and it was completed in May 1954 under the guidance of Prof. D.K. Bhimsen Rao, the then Head of the Department of Kannada

In 1964 Dr. G. S. Shivarudrappa, when he was the Head of the Department of Kannada, decided to publish this work and approached the U.G.C. for financial help. The U.G.C. accepted the proposal and sanctioned the entire amount required for this purpose. Thereupon the editing work of this catalogue was entrusted to the present editors. We the editors have verified all the entries with the original and carried out all the the necessary corrections. We have included portions of the original texts and titles of several works which we felt were useful. We have also revised the remarks column of the catalogue and have added remarks in Kannada also. In addition to this, we have also given a general index to this work.

We are thankful to the U.G.C. for sanctioning the funds. We are also grateful to the following for their kind help, co-operation and encouragement :

Dr. D.S. Reddi, The Vice-Chancellor,
Osmania University,

Dr. G.S. Shivarudrappa, former Head of the Dept. of Kannada, O.U. (1963-65),

Prof. D.K. Bhimsen Rao, Retd. Prof. and Head Dept. of Kannada, O.U.,

Prof. Aryendra Sharma, Principal, University College of Arts and Commerce, O.U.,

Shri Masood Yazdani, Librarian, O.U ,

Shri D. Hanumanth Rao, Co-ordinating Officer, U.G.C. unit. O.U.,

Shri B.P. Shenoy, Asst. Librarian, O.U.

Thanks are also due to Mrs. Leela Pranesha-charya, Proprietor, Sadhana Printery, Narayan guda, for the speedy execution of the printing of this work with special care and neatness.

Hyderabad,
7th March, 1966.

B. R.
T.V.V.S.

ABBREVIATION

K.K. ... Karṇāṭaka Kavicarite.

CONTENTS

GENERAL INDEX

The numbers refer to the pages.

PART I

PALM-LEAF MANUSCRIPTS

Sl. No. 1. ಅಕ್ಷರಾಂಕನಗದ್ಯ
AKṢARAṄKANAGADYA

MS. No. 1116 (R). Author : Pālkurike Sōmanātha. Form : Vṛitta, kanda. Substance : Palm-leaf. Size : 7¾" × 2". Character : Kannaḍa. Folios : 6 . Lines on a Page : 10. Letters in a line : 40. Appearance . Old. Condition : Good. Complete or incomplete : Complete.

Beginning : folio 87/2

ಕಂದ॥ ಶ್ರೀಯುತ ನಮಃ ಶಿವಾಯೆ
ತ್ಯಾಯುತ ಪಂಚಾಕ್ಷರ ಪ್ರಣವು ಶಂಭೂತ॥
ಸ್ವಾಯುತ ಭಾವಂ ನಕ್ಷರ
ಕಾಯುಸ್ತ್ರನೆ ನಿಮ್ಮ ಪೊಗಳ್ವೆನಾಂ ಬಸವೇಶಾ ॥೧॥

ವೃತ್ತ॥ ಶ್ರೀ ತುಹಿನಾದ್ರಿ ಜಾಧಿಪ ಆಕಾರ ಉಕಾರ ಮಕಾರ ಬಿಂದು ನಾ।
ದಾತಿಶಯಾತ್ಮಕ ಪ್ರಣವು ಪೂರ್ವ ಸಮಾಕಲಿತೋಂ ನಮಃಶಿವಾ।
ಯೇತಿ ಭವೋನ್ನತೋದ್ಭವ ಷಡಕ್ಷರ ಸಾಂಭವ ತದ್ವಿಲೀನ ವಿ।
ಖ್ಯಾತ ವರ ಸ್ವರಾದ್ಯಖಿಲ ವರ್ಣನುತಾಂ ಬಸವೇಶ ಪಾಹಿಮಾಂ
॥೨॥

End : folio 92

ಕಂದ॥ ಶಿವಮಸ್ತು ಭಕ್ತಿವಿಭವೋ
ದ್ಭವಮಸ್ತ್ವಕ್ಷರಾಂಕ ಪಠಣಶ್ರವಣ
ಸ್ತವನಾಸಕ್ತರಿಗೆ ಮಹೋ
ತ್ಸವಮಸ್ತು ವಾಕ್ಸಿದ್ಧಿರಸ್ತು ಶಿವ ಬಸವೇಶಾ ॥೪೦॥

Remarks :

ಇದು ಬಸವ ಸ್ತೋತ್ರ. 41 ಪದ್ಯಗಳಿವೆ. ಪ್ರತಿ ಪದ್ಯವೂ 'ಬಸವೇಶಪಾಹಿಮಾಂ' ಎಂದು ಮುಗಿಯುತ್ತದೆ. ಪದ್ಯಗಳು 2 ರಿಂದ 38 ರವರೆಗೆ ಸಂಸ್ಕೃತ ; ಪದ್ಯ 1 ಹಾಗೂ 39,40,41 ನೆಯ ಪದ್ಯಗಳು ಕನ್ನಡ. ಪದ್ಯ 39 ರಲ್ಲಿ ಈ ಬಸವಸ್ತೋತ್ರವನ್ನು ಉಮಾಪತಿಗೆ ಅಂಕಿತಮಾಡಿದಂತೆ ತಿಳಿಸಿದೆ.

This is a Basavastōtra in 41 stanzas. Every stanza ends with 'ಬಸವೇಶ ಪಾಹಿಮಾಂ.'

Sl. No. 2. ಅನುಭವಾಮೃತ

ANUBHAVĀMṚITA

Ms. No. 1184. Author: Mahaliṅga. Form: Ṣaṭpadi. Substance: Palm-leaf. Size: 14″ × 2″ Character: Kannaḍa. Folios: 85. Lines on a Page: 8. Letters in a line: 56. Appearance: Old. Condition: Good. Complete or incomplete: Complete. See K. K. Vol. II, p. 490.

Beginning: folio 2

ಹಿಂದೆ ಮಾಡಿದ ಸಕಲಪಾತಕ
ಬೆಂದು ಹೋಹುದು ಬ್ರಹ್ಮಚಿಂತೆಯೊ
ಳೊಂದು ನಿಮಿಷದಲಿರ್ದಡರಿದೇ ಹೇಳಲೇನದನು।
ತಂದೆತಾಯಿಗಳು ದ್ವಯಿನ್ಯರಾತನ
ಬಂಧುಗಳು ಕುಲವೆಲ್ಲ ಪಾವನ
ಬಂದು ನಿಂದಡೆಯಲ್ಲಿ ಪುಣ್ಯಕ್ಷೇತ್ರವೆನಿಸುವದು ॥೧೦॥

End: folio 86

ಸರ್ವಲೋಕಾಧ್ಯಕ್ಷ ಜಯಜಯ
ಸರ್ವಲೋಕಾಧಾರ ಜಯಜಯ
ಸರ್ವಮಂಗಳೆಯರಸ ಜಯಜಯ ಸರ್ವ ಸರ್ವೇಶಾ।
ಗರ್ವಿತಾಸುರ ಮಥನ ಜಯಜಯ
ದುರ್ವಿದಗ್ಧದುರಾದ ಜಯಜಯ
ಸರ್ವತ್ರಾಧಿಪ ಮಲ್ಲಿಕಾರ್ಜುನದೇವ ಜಯಜಯತು ॥೩೯॥
ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ
ಪಾದಕಮಲ ಭೃಂಗಾಯಮಾನ ಸಹವಾಸಿ ಮಹಲಿಂಗರಂಗ
ವಿರಚಿತ ಅನುಭವಾಮೃತವೆಂಬ ಗ್ರಂಥದಲ್ಲಿ ನಿರ್ಗುಣಾರಾಧನೆಯು
ಮಲ್ಲಿಕಾರ್ಜುನಸ್ತುತಿ ಸಂಪೂರ್ಣಂ. (ಲಿಖಿತವರ್ಷ ೧೭೨೩
ಪ್ಲವಸಂವತ್ಸರ.)

Remarks :

ಈ ಗ್ರಂಥದಲ್ಲಿ ವೈರಾಗ್ಯ, ಜೀವನ್ಮುಕ್ತಿ, ಜೀವತ್ರಯ ಮುಂತಾದ ವೇದಾಂತಕ್ಕೆ ಸಂಬಂಧಿಸಿದ ಸಂಗತಿಗಳನ್ನು ಪ್ರತಿಪಾದಿಸಿದೆ.

This work deals with philosophical doctrines such as Renunciation, Salvation and Jīvatraya etc. The MS. is copied in 1723 Plavanāma samvatsara.

Sl. No. 3 ಅಷ್ಟಾವರಣದ ತ್ರಿವಿಧಿ
AṢṬĀVARAṆADA TRIVIDHI

MS. No. 1116 (I). Author: Siddharāma. Form: Stōtra. Substance : Palm-leaf. Size : $7\frac{3}{4}'' \times 2''$ Character : Kannaḍa. Folios : 12. Lines on a page : 10. Letters in a line : 40. Appearance : Old. Condition : Good. Complete or incomplete : Complete. See K.K. Vol. I, p. 185.

Beginning : folio 37

ಶ್ರೀ ಗುರುವೆ ಶ್ರೀಗುರುವೆ ಭವಪಾಶದೂರನೆ
ಶ್ರೀಗುರುವೆ ಆದಿ ಅಂತಃಶೂನ್ಯನೆ।
ಶ್ರೀಗುರುವೆ ಆನಂದಮಯ ರೂಪ ಗತಿಯೆಂದು
ತಾನ ತವನೆಯುದ್ಧವನು ಯೋಗಿನಾಥಾ।

ಪರವೆ ಪರಬ್ರಹ್ಮವೇ ಗುರುವೆ ಪರತತ್ತ್ವವೇ
ನಿರುತ ನಿರ್ಮಲಜ್ಞಾನ ನಿತ್ಯರೂಪಾ।
ನಿರತಿಶಯ ನಿರವಧಿಕ ನಿರ್ಭಿನ್ನ ನಿರ್ದ್ವಂದ್ವ
ಗುರುವೆ ರಕ್ಷಿಸು ಪರವೆ ಯೋಗಿನಾಥಾ ।

End : folio 48

ಕುಂಭಿನಿಯ ಮಸ್ತಕದ ಇಂಬಪ್ಪ ಅಕ್ಷರವ
ಶಂಭು ಕಂಡನು ತನ್ನ ಅಂತರದಲ್ಲಿ
ಕರಿಯಕೂಪದ ಒಳಗೆ ಬಿಳಿಯ ಜಲ ಪ್ರಜ್ವಲಿಸಿ

ಆದ ಕಂಡು ಮುಕ್ತನ್ನೈ ಯೋಗಿನಾಥಾ
ಮಂತ್ರ ಮನವಾವರಿಸೆ ಭ್ರಾಂತು ಗೆಟ್ಟುದು ನೋಡಾ
ಶಾಂತಿಸಲಿಲದೆ ಯೆಂನ ವ್ಯೈನನದುದೂ
ಕಂತುಕಾಲಂನೊದೆದು ಮಹಂತ ಮರಣವಗೆಲಿದುನಿ ।
ಶ್ರೀಂತ ಸುಖಿಯಾನಾದೆ ಯೋಗಿನಾಥಾ.

Remarks :

This is one of the three 'Trividhis' by Siddharāma which is also a 'S'ivastōtra.' The work contains 142 stanzas each ending with 'ಯೋಗಿನಾಥಾ'. According to Karṇāṭaka Kavicarite this work has 144 stanzas.

Sl. No. 4 ಅಷ್ಟಾವರಣದ ತ್ರಿವಿಧಿ
AṢṬĀVARAṆADA TRIVIDHI

MS. No. 1159 (K). Author : Siddharāma. Form: Stōtra. Substance : Palm-leaf. Size : 8″ × 2″. Character : Kannaḍa. Folios : 11. Lines on a page: 10. Letters in a line : 40. Appearance : Old. Condition : Fair. Complete or incomplete : Complete.

Beginning : folio 49

ಅಷ್ಟಾವರಣದ ತ್ರಿವಿಧಿ ।
ಶ್ರೀ ಗುರುವೇ ಶ್ರೀ ಗುರುವೆ ಭವಪಾಶದೂರನೆ
ಶ್ರೀ ಗುರು ಆದಿ ಅಂತರ ಶೂನ್ಯನೆ ।
ಶ್ರೀ ಗುರುವೆ ಆನಂದಮಯರೂಪನೆ
ಗತಿಯೆಂದಾನತ ನೆಯ್ದಿದನು ಯೋಗಿನಾಥಾ ॥೧॥

End : folio 59

ಭಸಿತ ರುದ್ರಾಕ್ಷಿಯನು । ಎಸೆವ ಪಂಚಾಕ್ಷರಿಯ
ಅಸಮಾಕ್ಷ ಗುರುಲಿಂಗ ಜಂಗಮವಾನು
ಅತಿಶಯದ ಪಾದೋದಕಪ್ರಸಾದವನರಿಹಿ ಕೊಟ್ಟ

ಬಸವ ಶ್ರೀಗುರುವಿನ ಪಾದಕ್ಕೆ ಶರಣೆಂದು
ಹರಣ ಹಾರಿತು ಗುರುವೆ ಯೋಗಿನಾಥಾ ॥೧೪೨॥
ಅಷ್ಟಾವರಣದ ತ್ರಿವಿಧಿ ಸಮಾಪ್ತ:

Remarks :

'ಯೋಗಿನಾಥಾ' ಎಂದು ಮುಗಿಯುವ 142 ಪದ್ಯಗಳಿವೆ. See Sl. No. 3.

Sl. No. 5. ಅಸಂಖ್ಯಾತರಗಳೆ
ASAṄKHYĀTA RAGAḶE

MS. No. 1116 (E). Author: Gubbiya Mallaṇarya. (?) Form: Ragaḷe. Substance: Palm-leaf. Size: $7\frac{3}{4}'' \times 2''$. Character: Kannaḍa. Folios: 7. Lines on a page: 10. Lettres in a line: 36. Appearance: Old. Condition: Good. Complete or Incomplete: Complete. See K.K. Vol. III, p. 284.

Beginning: folio 11

। ವೃತ್ತ । ಶ್ರೀಗಿರಿಜೇಶನಂ ಬಯಸಿ ಬಾಯಾಜಿದರ್ಚಿಸಿಕೊಂಡು ಸ್ನೇಹದಿಂ।
ಸಾಧಿಸಿ ನಚ್ಚುಮಚ್ಚುವೊಡೆದೋಹಿಲನುದ್ಭಟನಾದಿಯಾದಕ್ಕೆ ।
ವಾಗಮ ಸಿದ್ಧರಂ ಸುಖದ ಸೀಮೆಯೊಳಂ ನಿಜಭಕ್ತಿಯುಕ್ತರಂ।
ರಾಗದೊಳೊಲ್ದು ಬಣ್ಣಿಪುದನೀವುದು ಸದ್ಗುರುವೆ ಪುರದ
ಮಲ್ಲಿಕಾರ್ಜುನಾ ॥

। ರಗಳೆ । ಶ್ರೀಗುರುವೆ ಪುರದ ಮಲ್ಲಯ್ಯ ಕೇಳೆನ್ನುವನು।
ರಾಗದಿಂ ನಿಮ್ಮ ನೆನೆವರ ಬಂಟನೆಂದೆನಿಸಯ್ಯ ॥೧॥

End: folio 17

। ರಗಳೆ । ಇಂತು ನಾನಾ ತೆಐದಿಂ ನಿಮ್ಮನರ್ಚಿಸಿ ಭಕ್ತಿ ।
ಯಂ ತಾಳ್ದು ಭಕ್ತರಾದವರ ಮಗ ನಾನಯ್ಯ ॥೧೫೧॥
ಕಂತುಹರ ಗುರುಪುರದ ಮಲ್ಲಯ್ಯ ನಿಮ್ಮನೇ ।
ರಂತು ಬೇಡುವೆನು ತಂದೆ ಕರುಣಿಪುದೆನಗಯ್ಯ ॥೧೫೨॥

। ಕಂದ । ಕೇಳಯ್ಯ ನಿಮ್ಮ ಭಕ್ತಿಯೆ । ಬಾಳೆನಿಸಿ ಧರಿತ್ರಿಯಲಿ ತೊಳಗಿ
ಬೆಳಗುವ ಗಂಗಾ । ವಾಳುಕ ಸಮಾರುದ್ರರ ಮನೆ । ಯಾಳೆ
ನಿಸಯ್ಯ ಗುರುಪುರದ ಮಲ್ಲಿನಾಥ ಪ್ರಭುವೇ ||

Remarks :

ಪ್ರಾರಂಭದಲ್ಲಿ 'ಅಸಂಖ್ಯಾತರಗಳೆ' ಯೆಂದೂ ಅಂತ್ಯದಲ್ಲಿ 'ಅಸಂಖ್ಯಾತರ ಮಹಾ ರಾತರರಗಳೆ' ಯೆಂದೂ ಇದೆ. ಕರ್ಣಾಟಕ ಕವಿಚರಿತೆಯಲ್ಲಿ 'ಪುರಾತನರಗಳೆ' ಎಂಬ ಕೃತಿ ಇದೆ. ಪ್ರಾಯಶಃ ಅದು ಇದೇ ಕೃತಿಯಾಗಿರಬೇಕು.

It seems Kar*ṇāṭ*aka Kavicarite knows the name of the work and not the work.

Sl. No. 6. ಅಸಂಖ್ಯಾತರಗಳೆ
ASAṄKHYĀTA RAGAḶE

MS. No. 456 (E). Author : Gubbiyya Malla*ṇ*a (?) Form: Raga*ḷ*e. Substance: Palm-leaf. Size: $8\frac{1}{2}'' \times 1\frac{3}{4}''$. Character: Kanna*ḍ*a. Folios: 13. Lines on a page: 7. Letters in a line: 30. Appearance: Old. Condition: Good. Complete or incomplete: Complete.

Beginning : folio : 32/2

। ವೃತ್ತ । ಶ್ರೀಗಿರಿಜೇಶನಂ ಬಯಸಿ ಬಾಯೊರತರ್ಚಿಸಿಕೊಂಡು ಸ್ನೇಹದಿಂ।
ಸಾಗಿಸಿ ನಚ್ಚುಮೆಚ್ಚುಪಡೆದೋಹಿಲನುದ್ಭಟನಾದಿಯಾದಿಶ್ಶೈ ।
ವಾಗಮ ಸಿದ್ಧರಂ ಸುಖದ ಸೀಮೆಯೊಳಂ ನಿಜಭಕ್ತಿಯುಕ್ತರಂ
ರಾಗದೊಳೊಲ್ದು ಬಣ್ಣಿಪುದನೀವುದು ಸದ್ಗುರು
ಮಲ್ಲಿಕಾರ್ಜುನಾ ॥

। ರಗಳೆ । ಶ್ರೀಗುರುವೆ ಪುರದ ಮಲ್ಲಯ್ಯ ಕೇಳೆನ್ನುವಂ ।
ರಾಗದಿಂ ನಿಮ್ಮವರ ಬಂಟನೆಂದೆನಿಸಯ್ಯ ॥ ೧ ॥

End : folio 45/2.

ಕಂತುಮದಹರ ಗುರುಪುರದ ಮಲ್ಲ ನಿಮ್ಮನೋ ।
ರಂತೆ ಬೇಡುವೆ ತಂದೆ ಕರುಣಿಪುದು ದಯದಿಂದ ॥ ೧೫೧ ॥

। ಕಂದ । ಕೇಳೈಯ್ಯ ನಿಮ್ಮ ಭಕ್ತಿಯು
ಬೆಳೆಯಿಸಿ ಧರಿತ್ರಿಯ ತೊಳಗೆ ಬೆಳಗುವ ಗಂಗಾ ||
ವಾಳುಕಸಮಾರುದ್ರರ ಮನೆ ।
ಯಾಳೆಂದೆನಿಸಯ್ಯ ಪುರದ ಮಲ್ಲಿನಾಥ ಪ್ರಭುವೇ ॥
ಅಸಂಖ್ಯಾತರಗಳೆ ಸಮಾಪ್ತ ಮಂಗಳ ಮಹಾ ಶ್ರೀ

Remarks :

1116 (E) ನಂಬರಿನ ಪ್ರತಿ ಇದೇ ಕೃತಿಯನ್ನೊಳಗೊಂಡಿದೆ.
See Sl. No. 5.

Sl. No. 7. ಆಚರಣ ಸಂಬಂಧದ ವಚನ

ĀCARAṆA SAMBANDHADA VACANA

MS. No. 1082 (B). Author : Sampādaneya Muddayya. Form : Vacana. Substance : Palm-leaf. Size : $9\frac{1}{2}'' \times 1\frac{3}{4}''$. Character : Kannaḍa. Folios : 31. Lines on a page : 9. Letters in a line : 48. Appearance: Old. Condition: Good. Complete or incomplete : Complete (?).

Beginning :

ಯುಗದುತ್ಸಾಹವನೋಡಿರೆ ಆಱು ಶಕ್ತಿಗಳಿಗಾಱು
ಪ್ರಧಾನರುಂಟು ।
ಅವಱಾಗುಹೋಗನು ಶರಣರು ಬಲ್ಲರು । ಆಱುದರುಶನಕ್ಕೆ
ಯಾಚಕರಲ್ಲ ।
ಮೂರುದರುಶನಕ್ಕೆ ಮುಯ್ಯಾನುವರಲ್ಲ।ಅದೇಕಂದಡೆ ಅವಱಂಗದ
ಮೇಲೆ ಗುರುಲಿಂಗ ಜಂಗಮವಿಲ್ಲ । ಪಾದ ತೀರ್ಥ ಪ್ರಸಾದವಿಲ್ಲದ
ಭಾಷಿ । ಆ ಗುರು ಲಿಂಗ ಜಂಗಮ ಪಾದ ತೀರ್ಥ ಪ್ರಸಾದ
ಬಸವಣ್ಣನಲ್ಲಿ
ಏಕವಾದ ಕಾರಣ । ಪಂಚತಂಡದ ಪ್ರಾಣಿಗಳೆಲ್ಲರೂ ಜಯಾ
ಜಿಯ್ಯಾ ಎನುತಿರ್ದರು……

End :

ಸೂರ್ಯಂಗೆ ಶೀತರುಚಿಗಳು ತೋಱಿದಡೆ । ಚಂದ್ರಂಗೆ
ಉಷ್ಣ ರುಚಿಗಳು
ತೋಱಿದೊಡಂ। ಅಗ್ನಿ ತಲೆ ಕೆಳಗಾಗಿ ಉರಿದೊಡಂ । ತೋಱುವ
ನಾನಾ ಕರ್ಮಂಗಳೆಲ್ಲ ಮಾಯಾ ವಿಲಾಸವೆಂದಱಿದ ಶರಣಂಗೆ
ವಂದಾಶ್ಚ......ಮತೋಱದಾಗಿ ಆತನಿಜಗುರು
ಸ್ವತಂತ್ರ ಸಿದ್ಧ ಲಿಂಗೇಶ್ವರನ ಅಱಿವಿನೊಳಡಗಿಹನು ॥

Remarks :

ಈ ಕೃತಿಯು ಪುರಾತನ ವಚನಕಾರರ ೨೧೦ ವಚನಗಳ ಆಧಾರದ ಮೇಲೆ ರಚಿತವಾಗಿದೆ. ಪುಟ ೧-೩೧ ರಲ್ಲಿ ಇದು ಅಡಕವಾಗಿದೆ. ಕವಿಯ ಹೆಸರು "ಸಂಪಾದನೆಯ ಮುದೆಯ" ಎಂದಿದೆ. ರೂಢಿಯಲ್ಲಿ 'ಮುದ್ದಯ್ಯ' ಎಂಬ ಹೆಸರಿರುವುದರಿಂದ 'ಮುದೆಯ' ಎಂಬುದನ್ನು 'ಮುದ್ದಯ್ಯ' ಎಂಬುದಾಗಿ ಕೊಡಲಾಗಿದೆ.

The work is composed with the help of 210 Vachanas by different ancient Vacana-kāras.

Sl. No. 8. ಆತ್ಮಲಿಂಗ ಪ್ರಣವ ಸಂಯೋಗ ಸ್ಥಲದ ತ್ರಿವಿಧಿ
ĀTMALIṄGA PRAṆAVA SAMYŌGA STHALADA TRIVIDHI

MS. No. 559. Author : S'īlavantayya. Form : ? Substance : Palm-leaf. Size : $15\frac{1}{2}'' \times 1\frac{1}{2}''$. Character: Kannaḍa. Folios : 146. Lines on a page : 4. Letters in a line : 60. Appearance : Old. Condition : Good. Complete or incomplete : Complete. See K. K. Vol. I, p. 199.

Beginning :

। ಕಂದ । ನಮವಾತ್ಮಲಿಂಗ ಶಿವಾಯೊನ । ಲಮಲಶರದ
ಸಂಗ । ಆಯುಗಳೆರಡಾರ್ನಂ ಚಿದ್ರವುಣ ಲಿಂಗಾಂಗ ಸಂಗಂ ।
ಕ್ರಮವಾತ್ಮ ಸುಲಿಂಗ ಪ್ರಣವು ಸಂಯೋಗವಿದಂ ॥

End :

ಶರಣು ಶಂಕರ ಲಿಂಗ ಕರುಣಿ ಶಂಕರ ಲಿಂಗ ಶರಣು ಶರಣಾರ್ತಿ
ಶರಣಾರ್ತಿ ಶಂಕರ ಲಿಂಗ ॥ ೧೨೮ ॥
। ಕಂದ । ಜನನಕಾಲ ದೊಳೊಂದಿ... ಘನ ಯೌವನದಲ್ಲಿ ನಿಮಗೆ ವಂದಿಸಿ
ನಾಂ. ಮುಪ್ಪಿನಲಿ ವಂದಿಸಿ ...... ಮನಸಿಗೆ ತಾರದಿರು
ಶಂಕರ ಲಿಂಗಾ [ಮನೋ ವಿಕಾರ ನಿರಸನ ರಗಳೆ]

Remarks :

ಇದರಲ್ಲಿ ವೀರಶೈವ ಧರ್ಮಕ್ಕೆ ಸಂಬಂಧಿಸಿದ ವಿಷಯಗಳು ಪ್ರತಿಪಾದಿತವಾಗಿವೆ. ಇದರಲ್ಲಿ ಪದ್ಯಗಳೂ ಪದ್ಯಗಳಿಗೆ ಅರ್ಥ ವಿವರಣೆಗಳೂ ಇವೆ. ‘ಆತ್ಮಲಿಂಗ ಪ್ರಣವ ಸಂಯೋಗ ಸ್ಥಲದ ತ್ರಿವಿಧಿ’ ಯಾದ ಮೇಲೆ ‘ಗುರುರಗಳೆ’ ‘ಮನೋವಿಕಾರ ನಿರಸನ ರಗಳೆ’ ಇತ್ಯಾದಿಗಳೂ ಸೇರಿಕೊಂಡಿವೆ.

The manuscript is a work pertaining to the Vīraśaiva Religion.

Sl. No. 9 ಉದ್ಧರಣೆಯ ವಾಚ್ಯ
UDDHARAṆEYA VĀCYA

MS. No. 1069. Author : ? Form : Prose. Substance : Palm-leaf. Size : 7″ × 2″. Character : Kannaḍa. Folios : 52. Lines on a Page : 11. Letters in a line : 35. Appearance : old. Condition : Good. Complete or incomplete : Complete. See K.K. Vol. III, p. 294.

Beginning : folio 1

ಶ್ರೀ ವೀರಶೈವ ಸಿದ್ಧಾಂತ ಸ್ಥಾಪನಾಚಾರ್ಯರಪ್ಪ ಆದ್ಯರ ಅನುಮತದಿಂದುದ್ಧರಿಸಿದ ಕುಟಿಲ ಕುಹಕದ ಮಂತ್ರಂಗಳಲ್ಲದ ಶಿವಜ್ಞಾನಸಾಧನವಪ್ಪ ಶಿವಮಂತ್ರನ್ಯಾಸ ಶಿವತತ್ತ್ವಸ್ಥಾಪಿತ ಶಿವಲಿಂಗಾಂಗಸಂಬಂಧ ಪ್ರತಿಪಾದಕರಾಗಮ ಗ್ರಂಥಾರ್ಥವಾಕ್ಯಂಗಳಿಂ ಕೆಲವು ವಚನಂಗಳಿಂ ಸಂಗ್ರಹಿಸಿದ ಉದ್ಧರಣೆಯ ಪಟಲವಿದು......

End : folio 52

...ಈ ಪ್ರಕಾರದಲ್ಲಿ । ಆಚಾರಲಿಂಗದೊಳಗಣ । ಆಚಾರಲಿಂಗದಲ್ಲಿಯು । ಆಚಾರಲಿಂಗವಾದಿಯಾಗಿ । ಮಹಾಲಿಂಗದೊಳಗಣ । ಮಹಾಲಿಂಗದಲ್ಲಿಯು । ಮಹಾಲಿಂಗಾಂತ್ಯವಾಗಿ ಇನ್ನೂರ ಹದಿನಾರು ಲಿಂಗಕ್ಕೆ ಅಷ್ಟವಿಧ ಸಕೀಲ ಸಾವಿರದ ಏಳ ನೂರಿಪ್ಪತ್ತೆಂಟು । ಇಂತೀ ಕಾಯಾರ್ಪಣ । ಭಾವಾರ್ಪಣ । ತ್ರಿವಿಧ ಅಷ್ಟವಿಧ ಸಕೀಲ । ಎರಡುಸಾವಿರ ಅರವತ್ತುನಾಲ್ಕು ಮಿಶ್ರಾರ್ಪಣ । ಸಮಾಪ್ತಂ ಮಂಗಳಂ ಮಹಾ.

Remarks :

ಪ್ರಾಚೀನ ವೀರಶೈವ ವಚನಕಾರರ ವಚನಗಳನ್ನು ಆರಿಸಿದೆ. ಶಿವಲಿಂಗಾಂಗ ಸಾಮರಸ್ಯವನ್ನು ಚರ್ಚಿಸಲಾಗಿದೆ. ಕವಿಚರಿತೆಯಲ್ಲಿ ಅಜ್ಞಾತಕರ್ತೃಕ ಕೃತಿಗಳ ಸಾಲಿನಲ್ಲಿ ಈ ಗ್ರಂಥದ ಉಲ್ಲೇಖವಿದೆ. (ಸಂ. III) ಕೊನೆಗೆ ಇವರ್ಗಡಿ ಮುರಿಗಾಸ್ವಾಮಿಗಳು ನಿರೂಪಿಸಿದ 'ಶಿವಲಿಂಗಮಹಿಮಾಷಟ್ಪದ ಟೀಕೆ'ಯು ಎರಡು ಓಲೆಗಳು ಈ ಕಟ್ಟಿನಲ್ಲಿ ಸೇರಿಕೊಂಡಿವೆ.

Some of the ancient Vacanas of S'iva-s'araṇas are selected here. The work discusses the relation between S'iva, Liṅga and Aṅga. The work is written in prose. The author of this work is not known.

Sl. No. 10. ಎಲ್ಲ ಪುರಾತನರ ವಚನ

ELLA PURĀTANARA VACANA

MS. No. 1082 (D). Author: Kuntūra Mahādēvaru. Form: Vacana. Substance: Palm-leaf. Character: Kannaḍa. Size: $9\frac{1}{2}'' \times \frac{3}{4}''$. Folios: 18 Lines on a page: 9. Letters in a line: 48. Appearance: old. Condition: Good. Complete or incomplete: Incomplete.

Beginning:

ವಿಕಾರಂ ವಿಷಯಂ ದೂರಂ ರಕಾರಂ ರಾಗವರ್ಜಿತಂ ।
ತಕಾರಂ ತ್ರಿಗುಣಂ ನಾಸ್ತಿ ವಿರಕ್ತಸ್ಯ ವಿ(ಹಿ)ಚ್ಯತೆ ॥೧॥
ವಿವೇಕಿನೋ ವಿರಕ್ತಸ್ಯ ವಿಷಯೋಶ್ಚಿತ್ರರಾಗಿಣಃ ।
ಸಂಸಾರ ದುಃಖ ವಿಶ್ಚೇದಂ ಹಿತುವಾ ಬುದ್ಧಿ ಪ್ರವರ್ತತೆ ।
ದ್ಯೂನಶ್ಚೈವ ತಥಾಜ್ಞಾನಂ ಭಿಶ್ಚೈಕಾಂತ ಶೀಲತಃ ।
ಏತೇಚಾತ್ಪರಿ ಕರ್ಮಾಣಿ । ಕುಂಚಮೂವಿಹಂ......

End:

ಕುಂಜರ ಮೇಲುವಾಯುದು ಸೀಳುಗೆ । ಮೇಣು ಎತ್ತಿ ಕೊಳ್ಗೆ ಎತ್ತಿಕೊಂಡರೆ ಮನ ವಿಶ್ಚಂದವಾಗ ಡೊಂದೆಯುಂದದಲಿಪ್ಪಂತಪ್ಪ ನಿಸ್ಮೃದೊಂದು ಸಮತಾಗುಣ ಎನ್ನನೆಂದು ಬಂದು ಪೊರ್ದಿರ್ಪುದು ಹೇಳಾಕಪಿಲಸಿದ್ಧ ಮಲಿಕಾರ್ಜುನಾ ॥೧೪೩॥

Remarks:

ಪುಟ 41–62. ಮಧ್ಯದಲ್ಲಿ 4 ಓಲೆಗಳು ಕಳೆದು ಹೋಗಿವೆ. ಇದು ಪುರಾತನ ಬೇರೆ ಬೇರೆ ವಚನಕಾರರ ವಚನಗಳ ಸಂಕಲನ ವಾಗಿದೆ. ಕೃತಿ ಅಸಮಗ್ರ. 14ನೆಯ ವಚನಕ್ಕೆ ನಿಲುತ್ತದೆ.

This is a Collection of various Vacanas by various ancient Vacanakāras.

Sl. No. 11. ಐರಾವತದ ಪ್ರಸಂಗ
AIRĀVATADA PRASAṄGA

MS. No. 1048 (C). Author : Celuvayya (?) Form: Yakṣagāna. Substance : Palm-leaf. Size : 11″×2″ Character : Kannaḍa. Folios : 42. Lines on a page : 8. Letters in a line : 45. Appearance : Modern. Condition : Good. Complete or incomplete : Complete.

Beginning :

ಶರಣು ಸುರೇಂದ್ರನಂದನ । ಶರಣುಸುರಗಣಸೇವಿತ ।
ಶರಣು ಸಕಲಭೀಷ್ಟದಾಯಕ । ಶರಣು ಸುರಗಣನಾಯಕ ।
ಶರಣು ಶರಣು ॥೧॥
ಹೇಮಖಚಿತಕಿರೀಟಕುಂಡಲಕಾಮಿತಫಲದಾಯಕಾ
ಭೀಮಬಲ ಹೇರಂಭಪುಣ್ಯನಾಮ ವಿದ್ಯಾಶಾರದೆ ॥೨॥

End :

ಈ ಪರಿಯ । ಐರಾವತವದೀಗಲೆ ಯೆಂದೊರೆದ ವೈಶಂಪಾಯ ಮುನಿ । ಇದನು ಕೇಳಿದವರಿಗೆ ಹೇಳಿದವರಿಗೆ ಕಣ್ವಪುರದ ಶ್ರೀ ಗೋಪಾಲಕೃಷ್ಣ ಕರುಣಿಸುವನು । ಅರಿಯೆ ಲಕ್ಷಣ ಕಂದ ಪದ್ಯ ವರ್ಧಿಪ ಶ್ಲೋಕಗಳು । ರಾಗಾವೆಂದೆನಗೆ ತಿಳಿಯದು । ಜರಿಯಲಾಗದು ಬಲ್ಲವರು.

Remarks :

"ಭಾರತಾಮೃತಶರಧಿಯೆಂಬ ಕಥೆಯೊಳಗೆ ವಿಸ್ತಾರವಾಗಿರುವ ಐರಾವತದ ಪ್ರಸಂಗ" ಇದರಲ್ಲಿ ಹೇಳಿದೆ. ಕೃತಿ ಕಂದ, ವಾರ್ಧಕಷಟ್ಪದ ಮತ್ತು ಬೇರೆಬೇರೆ ರಾಗಗಳಲ್ಲಿ ರಚಿತವಾಗಿದೆ. ಒಮ್ಮೆ ಗಾಂಧಾರಿ ಮಣ್ಣಿನ ಐರಾವತವನ್ನು ಇರಿಸಿಕೊಂಡು ಐರಾವತ ಪೂಜೆಯನ್ನು ಮಾಡಿದಳು. ಈ ಸಂದರ್ಭದಲ್ಲಿ ಆಕೆ ಕುಂತಿಯನ್ನು ಉದ್ದೇಶಪೂರ್ವಕವಾಗಿ ಆಮಂತ್ರಿಸಿರಲಿಲ್ಲ. ಇದನ್ನು ಕಂಡು ಅರ್ಜುನನು ಸ್ವರ್ಗದಿಂದ ಇಂದ್ರನ ಐರಾವತವನ್ನೇ

ತಂದು ತಾಯಿಯನ್ನು ಸಂತೋಷ ಪಡಿಸಿದನು ಎಂಬುದು ಕಥಾವಸ್ತು.

ಈ ಕೃತಿ ಕಣ್ವಪುರದ ಗೋಪಾಲಕೃಷ್ಣದೇವರಿಗೆ ಅರ್ಪಿತವಾಗಿದೆ. ಗ್ರಂಥದ ಕೊನೆಯಲ್ಲಿ "ಗ್ರಾಮದ ನಾರಣಪ್ಪಯ್ಯನವರ ಮಗನು ಚೆಲುವಯ್ಯನು ಇದನು ಬರದಾತ ।... ಶೆಟ್ಟಿಯ ಮಗ ಊರ್ಮಿಯ ಶೆಟ್ಟಿಗೆ ಬರದು ಕೊಟ್ಟ ಐರಾವತ ಮಾತೃಕೆ ಸಂಪೂರ್ಣ" ಎಂದಿರುವುದರಿಂದ ಕವಿಯ ಹೆಸರು 'ಚೆಲುವಯ್ಯ'ನೆಂದು ತಿಳಿದುಬರುತ್ತದೆ. ಇದರಲ್ಲಿ ಒಟ್ಟು 1073 ಪದ್ಯಗಳಿವೆ.

The story of 'ಐರಾವತ ಪ್ರಸಂಗ' which occurs in Bhārata is told in the form of Yakṣagāna. The work is dedicated to God Gōpālakṛiṣṇa of Kaṇvapura (ಕಣ್ವಪುರ). Karṇāṭaka Kavicarite does not mention this work.

Sl. No. 12 ಔಷಧಯಂತ್ರ
AUṢADHA YANTRA

MS. No. 1105. **Author** : ? **Form** : Prose. **Substance** : Palm-leaf. **Size** : 8″ × 1¼″. **Character** : Kannaḍa. **Folios** : 80. **Lines on a page** : 5. **Letters in a line** : 35. **Appearance** : old. **Condition** : Good. **Complete or incomplete** : Incomplete.

Beginning :

ನಾಗಲಿಕನ ಬೇರಂ ಸಣ್ಣನಾಗಿ ಅರದು ಮೈಯಿಗೆ ಪೂಸಿ ।
ಬಂಡೀಗಾಲಿಯು ಕೊಡೆಯಾಗಿ ಹಿಡಿಯುಬಹುದು ೧=೧ ।
ಸಿದ್ಧಾಂತ । ವಿಶಾಖಾ ನಕ್ಷತ್ರದಲ್ಲು ಮಾವಿನ ಬದನಿಕೆಯ ತಂದು
ಕಣಜದಲ್ಲು ಇರಿಸಲು ಧಾನ್ಯ ಹೆಚ್ಚುವದು ।

ಸ್ವಾತೀನಕ್ಷತ್ರದಲ್ಲಿ ಬೆಲ್ಲವಂತ್ರನ ಬದನಿಕೆಯು ತಂದು ಕೈಯುಲ್ಲು ಯಿರಲು
ರಾಜವೈಶ್ಯ ೧=೧ ಅಶ್ವಿನೀ ನಕ್ಷತ್ರದಲ್ಲು ಹಿರೇಮರದ ಬದನಿಕೆಯಂ
ತಂದು ಕೈಯುಲ್ಲು ಯಿರಲು ರಾಜವೈಶ್ಯ ೧=೧.

End :

ಶರೀರ ಪುಷ್ಟಿಯಾಗುವ ಪ್ರಯೋಗ । ಅಂಗೂರದ ಗಡೆ
ಯುನ್ನು ತರಿಸಿ ಸಣ್ಣನಾಗಿ ಹೆಚ್ಚಿಸಿ ೨ ಮಾ ಕೊಂಡು ಆದನ್ನು
ಆಕಳಹಾಲಲ್ಲಿ ಸಣ್ಣನಾಗಿ ರುಬ್ಬಿ ಕಾಕುರಳ ತೊಳೆಹಾಕಿ
ಆದರ ಮೊಲಗಡಿಗೆ ಒಳಗೆ ಸೇ ೨ ಆಕಳ ತುಪ್ಪಹಾಕಿ
ಒಳಿತಾಗಿ ಕಾದ ವ್ಯೆಯಿ...ಕ್ಕಹಾಕಿ ಕೆಂಪು ಆಗುವ ಪರ್ಯಂತ...

Remarks :

ಮೂರು ಓಲೆಗಳು ಮುರಿದಿವೆ. ಮಧ್ಯದಲ್ಲಿ ಕೆಲವು ಓಲೆಗಳು ಕಳೆದು ಹೋಗಿವೆ.

ಇದರಲ್ಲಿ ಬೇರೆ ಬೇರೆ ಔಷಧಗಳ ತಯಾರಿಕೆ ಮತ್ತು ಅವುಗಳ ಪ್ರಯೋಗ ಹೇಳಿದೆ. ಅಲ್ಲದೆ ಬೇರೆ ಬೇರೆ ರೋಗಗಳಿಗೆ ಯಂತ್ರಗಳ ಮೂಲಕ ಚಿಕಿತ್ಸೆಯನ್ನೂ ಅವುಗಳ ಸಿದ್ಧಿಯನ್ನೂ ಹೇಳಿದೆ.

The work deals with the preparation and use of medicines. Cure for different diseases through various 'yantras' and their 'siddhi' is given.

Sl. No. 13. ಕಂದನಾಂದ್ಯ
KANDA NĀNDYA

MS. No. 1134 (w). Author : Guru Siddha (?). Form : Kanda. Substance : Palm-leaf. Size : 10″ × 2″. Character: Kannaḍa. Folios: 3. Lines on a page: 11. Letters in a line : 52. Appearance : Old. Condition : Good. Complete or incomplete : Complete. K.K. Vol. II, p. 575.

Beginning : folio 87

ಸ್ರ ॥ ಶ್ರೀಮತ್ಕಲ್ಯಾಣಭೂಭೃನ್ನುತಸುಕರಪದಂ ದಿವ್ಯಗಂಗಾಬಿಕಾಸ
ತ್ಪ್ರೇಮಾಲಸಂ ಗಣೇಂದ್ರಾನ್ವಿತನುರು ಮಹಿಮಾಧಾರನಶ್ರಾಂತ ಸತ್ವಾ
ರಾಮಂ ಭೂತಿಪ್ರಯುಕ್ತಂ ಪ್ರಣಮರುಚಿಸರಾನಂದಧರ್ಮಂ ಸ್ವಲೀಲೋ
ದ್ದಾಮಂ ರಕ್ಷಿಪ್ಪುದೆಮ್ಮಂ ಬಿಡದನವರತ ನಂದಿಕೇಶಂ ಮಹೇಶಂ ॥೧॥

ಗಂಗಾರಂಗತ್ತರಂಗಪ್ರಭವಕಣಗಣಸ್ಫಾರತಾರಾಪರೀತ
ಸ್ವಾಂಗಾರ್ಧೇಂದು ದ್ಯುತಿಪ್ರೋನ್ಮಿಳಿತ ನಿಜಜಟಾಜೂಟ ವಿಭ್ರಾಜಮಾನಂ
ಶೃಂಗಾರಾಸಾರ ಗೌರೀಕಬಳಿತ ಕಲಿತಾರ್ಧಾಂಗನುದ್ಯದ್ದಯಾರ್ದ್ರಾ
ಪಾಂಗಂ ಮಾಂಗಲ್ಯಸಾಕಲ್ಯಮನೆಮಗೊಲವಿಂ ಮಾಳ್ಕೆನಿಚ್ಚಂ ತ್ರಿಣೇತ್ರಂ ॥೨॥

End : folio 89

ಕಂದ ॥ ಶ್ರೀಮದಜಭಾಮಿನಿನುತ
ಹೈಮವತಿ ಮಧುರಗಾನ ನವರಸಲೋಲಂ ॥
ಸೋಮಕಳಾಧರನತುಳಕ
ಳಾಮಂದಿರನೀಗೆ ಸೌಖ್ಯಮಂ ಶಿವಲಿಂಗಂ ॥೪೩॥
ಶ್ರೀ ಶಾಂಭವೀ ಶುಭಾಂಗನಿ
ವೇಶಿತವಾಮಾಂಗನಂಗಜಾಹಿತನುರಗಾ
ಧೀಶನತುಳಗುಣನಿಧಿ
ಕೋಶಂ ಕೊಡುಗೆಮಗೆ ಭಕ್ತಿಯಂ ಶಿವಲಿಂಗಂ ॥೪೪॥

Remarks :

ಕರ್ತೃವಿನ ಹೆಸರು ತಿಳಿಯುವುದಿಲ್ಲ. ಕವಿಚರಿತೆಯಲ್ಲಿ ಗುರುಸಿದ್ಧನೆಂಬಾತನು ಶಿವಲಿಂಗಸಾಂದ್ಯವನ್ನು ಬರೆದಂತೆ ಒಂದೆಡೆ ಹೇಳಿದೆ (ಸಂ II–313); ಇದೇ ಸಾಂದ್ಯದ ಕೆಲವು ಪದ್ಯಗಳನ್ನು ಇನ್ನೊಂದೆಡೆ ಕೊಟ್ಟಿವೆ (ಸಂ II-576). ಆ ಪದ್ಯಗಳ ಶೈಲಿ

ಈ 'ಕಂದ ನಾಂದ್ಯ'ದ ಪದ್ಯಗಳ ಶೈಲಿಯನ್ನು ಹೋಲುತ್ತದೆ. ಆದುದರಿಂದ ಈ ಕಂದನಾಂದ್ಯವೇ ಶಿವಲಿಂಗನಾಂದ್ಯವಾಗಿರ ಬಹುದು.

The poet's name is not definitely known. According to Kavicarite's reference it may be guessed that this work is the same as 'Śivaliṅga Nāndya', written by 'Guru Siddha'.

Sl. No. 14 ಕಪ್ಪಿನ ನಂಜಯ್ಯ ಮಾಡಿದ ನಾಂದ್ಯ
KAPPINA NAÑJAYYA MĀḌIDA NĀNDYA

MS. No. 1134 (D) Author : Kappina Nañjayya. Form : Ṣaṭpadi. Substance : Palm-leaf. Size : 10″×2″. Character : Kannaḍa. Folios : 2. Lines on a page : 11. Letters in a line : 55. Appearence : Old. Condition : Good. Complete or incomplete : Complete. See K.K. Vol. II, p. 574.

Beginning : folio 13/2

ವಾ.ಷ॥ ಶ್ರೀಮದಮರೇಂದ್ರ ವೈಕುಂಠ ವಿಧಿಕ್ಷೆ ಮಹಿಮ
ಭೂಮಿಭೃದ್ವರತನುಜೆಯಧಾಂಗ ಯುವಿಜನ
ಪ್ರೇಮಧೂಮಧ್ವಜಹಿಮಾಂಶುದಿನಕರವಿಲೋಚನ ಸಾಂದ್ರ
ಮಹಿಮ ಸುಗುಣ ।
ಸ್ತೋಮ ಪೂರ್ವಾಮರ ಶಿರೋಮಾಲೆದಳೆದಪರ
ಕಾಮಾಂಗದಹನ ಭಸಿತ ವಿಲೇಪಕಾಯ ಮ
ತ್ಸ್ವಾಮಿ ರಕ್ಷಿಸು ಮಹೋಕ್ಷಗ ಶಾಂತವೀರೇಶನರಗಿಷ್ಟದಾತ
ಮುದದಿಂ ॥೧॥

End : folio 15/2

ವರಹರಸ್ತುತಿಗಳನಿದಂ ಮಿಗೆ
ಬರೆದು ನಿಚ್ಚಂ ಪಠಿಸಿದರ್ಗಂ

ದುರಿತಸಂಕುಳಮರ್ದನಾಭಯಕರವದಕರನು ।
ಚಿರತರಾಯುಃಶ್ರೀಯುಮಂ ಸ
ದ್ಗುರು ಚರಾಮಳಲಿಂಗಭಕ್ತಿಯ
ನಿರವೆ ಕರುಣಿಸಿ ಸಲಹುವಂ ಶ್ರೀಶಾಂತವೀರೇಶ ॥೫॥

Remarks :

13 ವಾರ್ಧಕ, 5 ಪರಿವರ್ಧಿನಿ, 7 ಭಾಮಿನಿ-ಹೀಗೆ ಒಟ್ಟು 25 ಷಟ್ಪದಿಪದ್ಯಗಳಿವೆ. ಇದು ಮುರಿಗೆ ಶಾಂತವೀರನ ಸ್ತುತಿ ರೂಪವಾದ ನಾಂದ್ಯ.

The work contains 25 stanzas in *Ṣaṭpadi* metre. This is a *nāndya* work in praise of Murige *Śāntavīra*.

Sl. No. 15. ಕಪೋತಪಕ್ಷಿಯ ಕಥೆ
KAPŌTAPAKṢIYA KATHE

MS. No. 20. Author : Nañja. Form : Sāṅgatya. Substance : Palm-leaf. Size : 6″ × 1″. Character : Kannaḍa. Folios : 65. Lines on a page : 4. Letters in a line : 24. Appearance : Not very old. Condition: Damaged at the beginning. Complete or incomplete: Incomplete. See K.K. Vol. II, p. 549.

Beginning :

ಹತ್ತು ತಲೆಯುವನಮಾತ್ಯನವು.. ..... ।
ಪುತ್ರಿಯನಲ್ಲನೆಂದೆನಿಸಿ ॥
ಹೆತ್ತಾತ ಮಗನಿಂದ ವರಮಾಕೆ ಕೊಲಿಸಿದ ।
....ಹುವೆನೂ ॥೧॥ ಪ್ರಥಮ ಭಾಗ

End :

ಸುತನ ಕೈವಿಡಿಕೊಂಡು ಅತಿವೇಗದಲಿಬಂದನು ।
ಮತಿವಂತ ಸಪ...... ಡಿಗೆ ॥
ಅತಿಹರುಷದಿ ತನ್ನ ಸುತನ ಕೈಯಲಿ ಕೊಟ್ಟು
ವ್ರತವ ಹೇಳಿದ ವಿಪ್ರನೊಲಿದು ॥೨೭॥ ೭ನೇ ಅ.

Remarks :

ಪ್ರಾರಂಭದ ಕೆಲವು ಓಲೆಗಳು ಮುರಿದಿವೆ. ಲಿಪಿ ಸ್ಪಷ್ಟವಾಗಿದೆ. ಸಾಂಗತ್ಯದಲ್ಲಿ ಕಪೋತ ಪಕ್ಷಿಯ ಕಥೆ ಹೇಳಿದೆ. ಕಥೆ ಅಸಂಪೂರ್ಣ. ಏಳನೆಯ ಆಶ್ವಾಸದ 27 ನೆಯ ಪದ್ಯಕ್ಕೆ ಕಥೆ ನಿಲ್ಲುತ್ತದೆ. ಮಧ್ಯದ ಒಂಬತ್ತು ಓಲೆಗಳು ಕಳೆದು ಹೋಗಿವೆ. ಕೃತಿಕರ್ತನು ಪ್ರಾರಂಭದಲ್ಲಿ ವೀರಶೈವ ಪ್ರಮುಖರನ್ನು ಸ್ತುತಿಸುತ್ತಾನೆ. ಆದುದರಿಂದ ಕವಿ ವೀರಶೈವನಿರಬೇಕು.

The story of 'Kapōta' bird is narrated in S*ān*gatya metre.

Sl. No. 16. ಕರಣಹಸಿಗೆಯ ವಾಚ್ಯ (?)

KARA*N*AHASIGEYA VĀCYA

MS. No. 1156. Author : ? Form : prose. Substance : Palm-leaf. Size : 13″×2″. Character : Kanna*d*a. Folios : 46. Lines on a page : 11. Letters in a line : 67. Appearance : Old. Condition : Good. Complete or incomplete : Complete.

Beginning : folio 20

ಕರಣಹಸಿಗೆಯ ವಾಚ್ಯ । ಶ್ರೀ ಷಡ್ಗುಣೈಶ್ವರ್ಯವನುಳ್ಳ ಗುರು ಮುಕ್ತಿ
ಪ್ರದಾಯಕನಾದ ಬಕಾರವೇ ಗುರು, ಸಕಾರವೇ ಲಿಂಗ, ವಕಾರವೇ ಜಂಗಮ,
ಇಂತು ಗುರುಲಿಂಗ ಜಂಗಮ ಸ್ವರೂಪವಾದ । ಶ್ರೀ ಗುರುವಿಂಗೋಸ್ಕರ ನಮಃ
ನಮಸ್ಕಾರವು ಎಂದು ಈ ಶಾಸ್ತ್ರದ ಪ್ರಥಮ, ಪ್ರಾರಂಭದಲ್ಲಿ ಆಚಾರ್ಯರು ।
ಗುರುನಮಸ್ಕಾರಮಾಡಿ ಉದ್ಧರಿಸಿರಾದ ಕಾರಣ...

End : folio

ಆ ಸಮಾಧಿಯ ಶಿವಾಲಯದ ತ್ರಿಕೋಣವಾವೇ ಗರ್ಭಗೃಹ । ಅಲ್ಲಿ ಸ್ಥಾಪಿಸಿದ
ಶಿವಶರಣನ ದೇಹವೇ ಲಿಂಗವೆಂದು ಕಲ್ಪಿಸಿ ಶ್ರೀ ಸಮಾಧಿಯ ವೃತ್ತಿ ಸಮಾಪ್ತಿಯ

ಮಾಡಿ । ಆ ಸಮಾಧಿಯ ಮೇಲೆ ವೇದಿಕೆಯ ಕಲ್ಪಿಸಿ ಸಂಭ್ರಮದೊಳು ಗಣಪರ್ವವ

ಮಾಡಿ ಸುಖದಲ್ಲಿಯಿಪ್ಪುದು ಭಕ್ತಮಾಹೇಶ್ವರರು ॥ ಸಮಾಧಿ ಕ್ರಿಯದ ವಾಚ್ಯ

ಸಮಾಪ್ತ......

Remarks :

ವೀರಶೈವಧರ್ಮದ ವಿವಿಧಮಂತ್ರಗಳನ್ನು ವ್ಯಾಖ್ಯೆಸಹಿತವಾಗಿ ಕೊಟ್ಟಿದೆ ಗ್ರಂಥದ ಕೊನೆಗೆ 'ಸಮಾಧಿಕ್ರಿಯದ ವಾಚ್ಯ ಸಮಾಪ್ತಂ'–ಎಂದು ಮುಗಿಯುತ್ತದೆ.

The work consists various kinds of Mantras pertaining to Vīras'aivism with commentary.

Sl. No 17. ಕರ್ನಾಟಕ ಛಂದಸ್ಸು
KARNĀṬAKA CHANDASSU

MS. No. 1098 (B). Author : Nāgavarma. Form : Different metres. Substance : Palm-leaf. Size : 7″×2″. Character : Kannaḍa. Folios: 38. Lines on a page : 9. Letters in a line : 35. Appearance : Old. Condition: Good. See K.K. Vol. I, p. 56. Complete or incomplete : Complete.

Beginning :

ಶ್ರೀ ಮ ಧು ಮಂ ಪಯೋಧಿಮಥನೋದ್ಭವವಸ್ತುಸಮೂಹದೊಳ್ಮಹಾ

ದೇವಸಮೇತಮಿರ್ದಸುರರುಂ ಸುರರುಂ ಕುಡೆ ತನ್ನ (ನ) ಚ್ಚುಗೊಂ ।

ಡಾವನಶೇಷಭೂಭುವನಮಂಡಲವಲ್ಲಭನಾದ ದೇವನೀ

ಗಾವಗಲೆನ್ನು ಬೇಳ್ಪ ವರಮಂ ದಯೆಯಿಂ ಮುಕುಂದವಲ್ಲಭಂ ॥೧॥

End :

ಇದು ಸಕಲಸುರಾಸುರೇಂದ್ರಮಕುಟತಟಘಟಿತ
ಭಗವದ್ಭವಾನಿವಲ್ಲಭಪಾದಾರವಿಂದದ್ವಂದ್ವಮಕ
ರಂದಮತ್ತಮಧುಕರಾಯಮಾನವಿಬುಧಜನ
ಮನಃ ಪದ್ಮಿನೀರಾಜಹಂಸಂನಾಗವರ್ಮವಿರಚಿತ
ಮಪ್ಪ ಛಂದೋಂಬುರಾಶಿಯೊಳ್......

Remarks :

ಪ್ರತಿ ಉತ್ತಮವಾಗಿದೆ.

This is a manuscript of Nāgavasma's 'Chandōmbudhi'. The manuscript is in good condition.

Sl· No· 18. ಕವಿಜಿಹ್ವಾಬಂಧನ
KAVIJIHVĀBANDHANA

MS. No. 1098 (C). Author : *Īs'vara Kavi*. Form: Kanda. Substance : Palm-leaf. Size : 7″ × 2″. Character : Kanna*d*a. Folios : 19. Lines on a page : 9· Letters in a line : 32. Appearance : Old. Condition : Good. Complete or incomplete : Incomplete. See K.K. Vol. II, p. 151.

Beginning :

ಶ್ರೀಮದ್ಗಂಗಾತರಂಗಾಂಕಿತ ಕಪಿಲಜಟಾಜೂಟ ಭಾರಾವತಂಸಂ
ವಾ ಮಾಂ ಗಾ ಲಿಂ ಗ ಸಂ ಗ ಪ್ರವರಗಿರಿಸುತಾಲೋಲಲೀಲಾ
ವಿಲಾಸಂ
ಕಾಮಂ ನಿರ್ನಾಮ ಭೀಮ ಜ್ವಲಿತ ಚಟುಲ ಭಾಳಪ್ರತಾಪಾಗ್ನಿ
ಯುಕ್ತಂ
ಪ್ರೇಮಂ ಪರ್ವಿಕ್ಕೆಮೆಮ್ಮೊಳ್ ನಿ ಡು ವ ಣೆ ಗೊ ಡೆ ಯಂ
ಕಲ್ಲಿನಾಥಾಖ್ಯಲಿಂಗಂ ॥೧॥

End :

ಪಳಂಕು ಗಾಢಸ್ಪರ್ಶನೆ । ಹಲಕು ವೃಕ್ಷಾರೋಹೇ । ಶರೀರಾಂಗ ಭೇದೇಚ ।
ಉಲುಕು ಶರೀರ ಸ್ಫುರಣೆ । ಮುಲುಕು ಪ್ರಸವನ ಕ್ರಿಯಾಯಾಂ।
ಕುಲುಕು ಗಾಢಾಪೂರಣೆ । ತೊಡಕು ತೊಡಂಕು ವಿಪರ್ಯಾಸೆ ।
ಕೊಂಕು ಬಂಕು ಕೌಟಿಲ್ಯೆ । ತುಡುಕು ತುಡುಂಕು ಸತ್ವರಗ್ರಸನೆ।
ಪುಡುಕು ಪುಡುಂಕು ಕರಾನ್ವೇಷಣೆ.

Remarks :

ಇದು ಪ್ರಧಾನವಾಗಿ ಛಂದಶ್ಶಾಸ್ತ್ರವನ್ನು ಹೇಳುವ ಗ್ರಂಥ. ಕವಿ ಈ ಗ್ರಂಥವನ್ನು ನಿಡುವಣಿಯ ಕಲ್ಲಿನಾಥ ದೇವರಿಗೆ ಅರ್ಪಿಸಿದ್ದಾನೆ. "ಇದು ಸಮಸ್ತ ಕವೀಂದ್ರವೃಂದಹೃತ್ಕಮಲ ವಿಕಸಿತ ಪ್ರಭಾಕರ ಸಕಲ ಕರ್ನಾಟ ಲಕ್ಷಣಾಚಾರ್ಯವರ್ಯ ವಾಗ್ದೇವತಾಸುಪ್ರಸನ್ನ ಕವಿತಾಸಿರಿ ಸಂಪನ್ನ ಅಭಿನವ ಕೇಶಿರಾಜ ವಿರಚಿತಮಪ್ಪ" ಎಂಬುದಾಗಿ ಕವಿ ಸಂಧಿಗಳ ಕೊನೆಯಲ್ಲಿ ಹೇಳಿಕೊಂಡಿದ್ದಾನೆ.

This work discusses mainly about prosody and in one page about Karnaṭa Dhatu (ಕರ್ನಾಟ ಧಾತು) which is incomplete.

Sl. No. 19. ಕರಣಾಗಮದ ವಾರ್ಧಕನಾಂದ್ಯ

KARAṆĀGAMADA VĀRDHAKANĀNDYA

MS. No. 1134 (H). Author : Kalyaṇada Svami. Form : Ṣaṭpadi. Substance: Palm-leaf. Size: 10″ × 2″. Character : Kannaḍa. Folios : 2. Lines on a page : 12. Letters in a line : 55. Appearance : Old. Condition : Good. Complete or incomplete : Complete. See K.K. Vol. II, p. 172.

Beginning : folio 21/2

ವಾ. ಷ|| ಶ್ರೀಮದಗನಂದನೆಗೆ ಸೋಮಶೇಖರನೊರೆದ
ನಾ ಮಹಾಕಾರಣಾಗಮದಿ ಜಂಗಮದಿರವ
ಪ್ರೇಮದಿಂದದನು ಕನ್ನಡಿಸುವೆನು ಸಜ್ಜನರ್ಕ್ಷೇಮದಿಂ
ಲಾಲಿಸುವದು ||ಪಲ್ಲ||

ಸಕಲಲೋಕಾರಾಧ್ಯ ಸುಕರನಿಗಮಾಭೇದ್ಯ
ಮಕರಕೇತನ ವೈರಿ ಮನುಮಯ ಮಹಾಶೂರಿ
ನಿಕರ ಸನ್ನುತಿಪಾತ್ರ ನಿರ್ಮಲಕೃತಗಾತ್ರನವ್ಯ ಫಣಿಯಜ್ಞ
ಸೂತ್ರ ।
ಅಕುಟಿಲ ಜನಪ್ರೇಮ ಸಮಾಕ್ಷವರ ಸೋಮ
ಸಕಲ ಭೂಷಿತಮೌಳಿ ಶರಣಗಣ ಪರಿಪಾಲಿ
ಪ್ರಕಟ ಮಹಿಮೋತ್ತುಂಗ ಪರಮಕರುಣಾಪಾಂಗ ಪಾಹಿಮಾಂ
ಇಷ್ಟಲಿಂಗಾ ||೧||

End : folio 23/2

ಇಂತನಾದಿಯ ಜಂಗಮದ ಲಕ್ಷಣಂಗಳನು
ಕಂತುಹರನೊಲಿದುಮಾಕಾಂತೆಯೊಡನುಸಿರ್ದನಿದ
ಸಂತೋಷದಿಂದೋದಿದವರು ಕೇಳ್ದವರು ನಿಶ್ಚಿಂತೆಯಿಂ ಪರಿ
ಸಿದವರು ।

ಮುಂತೆ ನಿತ್ಯಾನಂದಶರಧಿಯೊಳಗೋಲಾಡಿ
ಅಂತ್ಯದೊಳು ಶಿವಪದವನೈದುವರು ಸತ್ಯವಿದು
ಇಂತಿದರ ಪರಿಗಣನೆ ಪಂಚವಿಂಶತಿಪದಗಳಿಂ ತೋರುತಿಹುದೊಲ
ವಿನಿಂ ||೨೫||

Remarks :

ಶಿವಾಗಮಗಳಲ್ಲಿ ಒಂದಾದ ಕಾರಣಾಗಮವನ್ನು ಶಿವನು ಉಮೆಗೆ ಹೇಳಿದ ನಂತರಲೂ ಅದನ್ನು ಇಲ್ಲಿ ಕನ್ನಡಿಸಿರುವಂತೆಯೂ ಕವಿಯು ಮಾತು. ಇದರಲ್ಲಿ ವಾರ್ಧಕಷಟ್ಪದಿಯ 25 ಪದ್ಯಗಳಿವೆ.

The work contains 25 stanzas in *Ṣaṭ-padi* metre. *Kāraṇāgama* wich is one of the *Śivāgamas* has been translated by the poet into Kannaḍa.

Sl. No. 20. ಕ್ಷೇತ್ರರಾಜ ಪ್ರಭಾವ (ಗರಳಪುರ ಮಹಾತ್ಮೆ)

KṢĒTRARĀJA PRABHĀVA

MS. No. 126 (C). Author: Nañjarāja. Form: Prose. Substance: Palm-leaf. Size: 10″ × 2″. Character: Kannaḍa. Folios: 28. Lines on a page: 11. Letters in a line: 50. Appearance: Not very old. Condition: Good. Complete or incomplete: Incomplete. See K.K. Vol. III, p. 46.

Beginning: folio 3

ಸಕಲ ಮುನೀಶ್ವರರು ಜಡೆಗಳನ್ನೂ ನಾರುವಸ್ತ್ರಗಳನ್ನೂ
ಧರಿಸಿರುವ ರುದ್ರಾಕ್ಷಮಾಲಾಭರಣನಾದ...

End:

ಈ ವಿಷಯದಲ್ಲಿ ಎನಗೆ ಪ್ರಾಯಶ್ಚಿತ್ತಮಂ ಪೇಳಿದನು ।
ನೀ ಮಾಡಿದ ಪಾಪಪರಿಹಾರಾರ್ಥವಾಗಿ ಈ ಕರ್ಮಭೂಮಿಯಲ್ಲಿ
ಯಾತ್ರೆಯ ಮಾಡು । ಆಗ ದಕ್ಷಿಣದೇಶದಲ್ಲಿರುವ ಶಿವನು

Remarks:

ಈ ಪ್ರತಿಯಲ್ಲಿ ಕಥೆಯ ಆದಿ ಅಂತ್ಯಗಳಿಲ್ಲ. ಭಾಷೆ ಆಧುನಿಕ. ಸ್ಕಾಂದಪುರಾಣದಲ್ಲಿ 'ಗರಳಪುರ ಮಹಿಮಾದರ್ಶ' ಎಂಬ ಕಥೆ ಪದ್ಯದಲ್ಲಿದೆ. ಈ ಕೃತಿ ಗದ್ಯದಲ್ಲಿ ರಚಿತವಾದ 'ಗರಳಪುರ ಮಹಿಮಾದರ್ಶ'ದ ಸಂಗ್ರಹ.

In 'Skāndapurāṇa' the story of 'Garaḷapura Mahimādarśa' is told in poetry. This work is the summary of 'Garaḷapura Mahimādarśa' in prose. The Language of the mannuscript is modern.

Sl No. 21. ಗಂಗೆಗಿರಿಜೆ ಸಂವಾದ ಮತ್ತು ಇತರ (?)

GAṄGEGIRIJE SAMVĀDA

MS. No. 436. Author: ? Form: Stōtra. Substance: Palm-leaf. Size: 6″×1½″. Character: Kannaḍa. Folios: 119. Lines on a page: 8. Letters in a line: 28. Appearance: Not old. Condition: Good. Complete or incomplete: Complete.

Beginning:

ಮಹಾ ಕಲ್ಯಾಣವೆಂಬ ಪಟ್ಟಣದಲ್ಲಿ ಪರಮಗೈವ ಶಕ್ತಿಯಹಂತಾಲೋಚನೆ ತಾನಪುರಸ ಬಸವೇಶ್ವರ ದೇವರಿಗೆ ನಿರೂಪಿಸಿದ ಗಂಗೆ ಗಿರಿಜೆ ಸಂವಾದ । ಪುಸ್ತಕಕ್ಕೆ ಸುಖಮಸ್ತು ಸೊಬಮಸ್ತು ಆಯುರಾರೋಗ್ಯ ಐಶ್ವರ್ಯಮಸ್ತು ॥ಕಂದ॥

ಅಂ ಬರೆದ ಗಂಗೆಯಂ ನ ॥ ಬೊಂಬೆ ರೂಪನೆಮಾಡಿ । ಅಂಬಿಗ ಶರಣರ

ಆತ್ಮಜೆಯೆನಿಸುತ । ಕುಂಬಿನಿಗೆ ಚೋದ್ಯವೆಂದೆನಿಪ ಸಿವಗಂಗೆಯನು

ಹಿಂಬಾಲಿಸಿ ತಂದ ಹರುಶಬ್ದಿ ಕತೆಯಂ.. ...

End:

ಗಂಗೆ ಗಿರಿಜೆ ಜಗಳ ಕೇಳಿ ಜನವೆಲ್ಲಾ । ನಮ್ಮ ಸಂಗಮೇಶ್ವರ ಕೇಳುತಿರ್ದ

ನಗುತೆಲ್ಲಾ । ಸಂತಿಯು ನಿಲ್ಲರಂತ್ನವೆನಿಸಿ ಎಲೆಹೆನ್ಯೇ । ನಿನ್ನ ಮಾತಿಗೆ

ಮಂಗಳಾತ್ಮಕ ಸಿವನು ಯೆಲೆ ಹೆಣ್ಯೇ । ಕಂ । ಗಂಗೆ ಗೌರಿ ಜಗಳ ಂಲೆ ಹೆಣ್ಯೇ ।

Remarks:

'ಗಂಗೆ ಗಿರಿಜೆ ಸಂವಾದ'ದ ಪ್ರಸಿದ್ಧವಾದ ಉಪಾಖ್ಯಾನದೊಂದಿಗೆ ಇತರ ಸ್ತೋತ್ರಗಳೂ ವಚನಗಳೂ ಬೆರೆತುಕೊಂಡು ಇರುವಂತೆ ಕಾಣುತ್ತದೆ. ಪುಟಗಳು ಅನುಕ್ರಮವಾಗಿಲ್ಲ.

Along with 'Gaṅge Girije Samvāda' other Stōtras and Vacanas are mixed up in this manuscript. Pages are not in order.

Sl. No. 22. ಗಣಸಹಸ್ರನಾಮ

GAṆASAHASRANĀMA

MS. No. 36. Author: Mallikarjuna (?) Form: Stōtra. Substance: Palm-leaf. Size: 3″×2″. Character: Kannaḍa. Folios: 30. Lines on a page: 11. Letters in a Line: 14. Appearance: Old. Condition: Fair. Complete or incomplete: Complete.

Beginning: folio 1

ಸಹಸ್ರಗಣನಾಮದ ಪೀಠಿಕೆ ।
ಓಂ ಅಸ್ಯ ಶ್ರೀ ಶಿವಗಣಸಹಸ್ರ ನಾಮಮಾಲಾ ಮಹಾ
ಮಂತ್ರಸ್ಯ ಭೃಂಗಿಋಷಿಃ ನಾನಾಛಂದಾಂಸಿ
ಶ್ರೀ ಸದಾಶಿವೋದೇವತಾ । ಓಂ ಬೀಜಂ । ಹ್ರೀಂ ಶಕ್ತಿಃ
ಕ್ರೌಂ ಕೀಲಕಂ । ಮಮ ಸಕಲ ಮನೋರಥ ಸಿದ್ಧ್ಯರ್ಥೇ
ಜಪೇ ವಿನಿಯೋಗಃ । ...

End: folio 30

ಕಂದ । ಸುರುತರುವಂ ಸುರಧೇನುವಂ
ವರ ಚಿಂತಾಮಣಿಗಳೆಂದು ಪೆಸರಂ ಪೇಳ್ವವರು
ಹರಗಣನಾಮವ ಜಪಿಸಲು
ಭರದಿಂದಂ ಸಿದ್ಧಿಯಕ್ಕು ಶಿವಬಸವೇಶಾ ॥ (?)
ಗಣಸಹಸ್ರನಾಮ ಸಂಪೂರ್ಣಂ ಮಂಗಳಂ ಮಹಾ ॥

Remarks:

ಪಾಲ್ಕುರಿಕೆ ಸೋಮನಾಥನು ಸಂಸ್ಕೃತದಲ್ಲಿ ಶಿವಸಹಸ್ರನಾಮ ಮಾಲೆಯನ್ನು ಬರೆದಿದ್ದಾನೆ. ಅದನ್ನು ಕನ್ನಡದಲ್ಲಿ ಬರೆದು

ದಾಗಿ ಕವಿ ಹೇಳಿಕೊಂಡಿದ್ದಾನೆ (ಪು 3, ಕಂದಪದ್ಯ). ಶಿವಗಣದ ಸಹಸ್ರನಾಮವನ್ನು ಇಲ್ಲಿ ಕಿಗೆದುಕೊಂಡಿದೆ.

This is a work in praise of S'iva. Thousand names of S'iva is eulogized here.

Sl. No. 23. [ಗದ್ಯಗಳು] (?)
[GADYAGAḶU]

MS. No. 1067 (B). Author: Pālkurike Sōmanātha. Form: Vṛitta. Substance: Palm-leaf. Size: $11\frac{1}{2}'' \times 2\frac{1}{4}''$. Character: Kannaḍa. Folios: 23. Lines on a page: 14. Letters in a line: 58. Appearance: Old. Condition: Good. Complete or incomplete: Complete.

Beginning:

॥ ಮಾಲಿನೀವೃತ್ತ ॥

ಜಯ ಜಯ ಬಸವಾಖ್ಯ ಸ್ವಾನುಭೂತ್ಯೈಕಸೌಖ್ಯ ।
ಪ್ರಮಥಗಣ ಪವಿತ್ರ ಪ್ರಸ್ಫುರದ್ಭಕ್ತಿಗೋತ್ರ
ಪ್ರಣಮಿತ ಬುಧವರ್ಯ ಸ್ಫಾರದೈಶ್ವರ್ಯಧುರ್ಯ ।
ಘ್ರುತಿತ ವೃಷಭರೂಪ ಭ್ರಾಜಮಾನ ಪ್ರತಾಪಾ ॥

End:

ಶಿವಮಸ್ತು ಭಕ್ತಿವಿಭವೋದ್ಭವಮಸ್ತುವಕ್ಷರಾಂಕ
ಪಠಣಶ್ರವಣ । ಸ್ತವನಾಸಕ್ತರಿಗೆ ಮಹೋ । ತ್ಸವಮಸ್ತು
ವಾಕ್ಸಿದ್ಧಿರಸ್ತು ಶಿವಬಸವೇಶ ॥

Remarks:

ಪುಟ 69-70. (1) ಅಕ್ಷರಾಂಕಮಾಲಿಕಾಗದ್ಯ. ಕವಿ ಇದನ್ನು ಸ್ತೋತ್ರವಾಗಿ 'ಅಕಾರಾದಿ ಕ್ಷಕಾರಾಂತ ಕೃಪಾನಿಧಿ ಬಸವೇಶ' ಎಂಬುದಾಗಿ ರಚಿಸಿದ್ದಾನೆ.

ಪುಟ 70–73. (2) ನಮಸ್ಕಾರಗದ್ಯ. ಇದರಲ್ಲಿ ಕವಿ 'ಬಸವ' ಪದದ 'ಬ'ಕಾರ, 'ಸ'ಕಾರ ಮತ್ತು 'ವ'ಕಾರ ಗಳಿಗೆ ಅನುಕ್ರಮವಾಗಿ ಮೂರು ಬಾರಿ ನಮಸ್ಕರಿಸುತ್ತಾನೆ. ಇದರಲ್ಲಿ 7 ಪದ್ಯಗಳಿವೆ.

ಪುಟ 73–77. (3) ಪಂಚಪ್ರಕಾರದಗದ್ಯ. ಬಸವನ ಸ್ತುತಿ ರೂಪವಾದ 11 ಪದ್ಯಗಳಿವೆ.

ಪುಟ 77–82. (4) ಉದಾಹರಣಗದ್ಯ. ಇದು ಬಸವಸ್ತೋತ್ರ.

ಪುಟ 82–91 (5) ಅಕ್ಷರಾಂಕಗದ್ಯ. ಬಸವನನ್ನು ಕುರಿತು 41 ಪದ್ಯಗಳಿವೆ.

ಎಲ್ಲ ಗದ್ಯಗಳಲ್ಲಿಯೂ ಪ್ರತಿ ಒಂದು ಪದ್ಯವಾದ ಮೇಲೆ ವ್ಯಾಖ್ಯಾನಗಳಿವೆ. ಅಕ್ಷರಾಂಕಗದ್ಯದ ಕೊನೆಗೆ ವಿಷಯಾಂತರವುಳ್ಳ 8 ಓಲೆಗಳಿವೆ.

This work is a collection of Stōtras with their commentary.

Sl. No. 24. ಗಿರಿಜಾಕಲ್ಯಾಣ

GIRIJĀKALYĀṆA

MS. No. 882 (F). Author : Hariharadēva. Form: Campu. Substance : Palm-leaf. Size : 13″×2″. Character : Kannaḍa. Folios : 86. Lines on a page : 12. Letters in a line : 70. Appearance : Old. Condition : Good. Complete or incomplete : Complete. See K.K. Vol. I, p. 227.

Beginning :

ಕಥಾಗರ್ಭಗದ್ಯ ।

ಸ್ವಸ್ತಿ ಸಮಸ್ತಸಮುದ್ರಮುದ್ರಿತಧರಿತ್ರೀಕಾಂತನಾಭಿ
ಕಮಲಮಧ್ಯಸ್ಥಿತ ಕನ್ನಿಕೆಯಂತಿರ್ಪ ಮೇರುವಿನ ದಕ್ಷಿಣ
ದಿಕ್ಕಿನಲ್ಲಿ ಪೂರ್ವಜಲಧಿಯಿಂ ಪಶ್ಚಿಮವಾರ್ಧಿಪರ್ಯಂತಂ

ಪರ್ವಿಡ ಪರ್ವತಾಧೀಶಂಗೆ ಗಿರಿಜಾರಾಜನೆಂಬ ನಾಮದಿಂದೋ
ಷಧಿಪ್ರಸ್ತವೆಂಬ ಪುರದೊಳಿರ್ದು ಪಿತೃಗಳ ಮನದೊಳ್
ಪುಟ್ಟಿದ...

End :

ಇದು ಸಮಸ್ತಸುರನಿಕರಮುಕುಟಖಚಿತ ದಿನಕರಾದಿತ್ಯಮಾಣಿಕ್ಯ
ಪ್ರಭಾಪುಂಜರಂಜಿತ ಸಂಪಚ್ಚರಣನೆನಿಪ ಪಂಪಾವಿರೂಪಾಕ್ಷಶ್ರೀ
ಪಾದಕಮಲಮಕರಂದಮಧುಕರಾಯಮಾನಂ ಸತ್ಯವೀಶ್ವರಂ
ಹಂಪೆಯ ಹರಿಹರದೇವ ವಿರಚಿತಮಪ್ಪ ಶ್ರೀಗಿರಿಜಾಕಲ್ಯಾಣ ಮ
ಹಾಪ್ರಬಂಧ ದೊಳು ಪಾರ್ವತೀಪರಮೇಶ್ವರ ವಿವಾಹವರ್ಣನಂ

Remarks :

ಇದು ಹರಿಹರನ ಗಿರಿಜಾ ಕಲ್ಯಾಣದ ಸಮಗ್ರಪ್ರತಿ.
ಇದರಲ್ಲಿ 10 ಆಶ್ವಾಸಗಳಿವೆ. ಒಟ್ಟು 10 4 ಪದ್ಯಗಳಿವೆ.
ಪಾರ್ವತೀ ಪರಮೇಶ್ವರರ ವಿವಾಹ ವರ್ಣನೆಯೇ ಕಥಾವಸ್ತು.

The story about the marriage between S'iva and Pārvati is narrated in Campu form.

Sl. No. 25. ಗಿರಿಜಾಕಲ್ಯಾಣ

GIRIJĀKALYĀṆA

MS. No. 1187 (D). Author: Hariharadēva. Form: Campu. Substance: Palm-leaf. Size: 20″×2″. Character: Kannaḍa. Folios: 33. Lines on a page: 13. Lettres in a line: 115. Appearance: Old. Condition: Good. Complete or incomplete: Complete. See K.K. Vol. I, p. 227.

Beginning : folio 123

See Sl. No. 24.

End : folio 155

See Sl. No. 24.

ಪ್ರತಿಮಾಡಿದ ಕಾಲ : ಶಾಲಿವಾಹನ ಶಕೆ 1738, ಯುವನಾಮ
ಸಂವತ್ಸರ ಭಾದ್ರಪದ ಶುದ್ಧ ಪಾಡ್ಯ
ಶುಕ್ರವಾರ.

Remarks :

See Sl. No. 24.

Sl. No. 26. ಗಿರಿಜೆಗಂಗೆ ಸಂವಾದ ವರ್ಣ ಸಾಂಗತ್ಯ
GIRIJEGAṄGE SAMVĀDA VARNA SĀṄGATYA

MS. No. 1109 (A). Author: Tarala Carapati. Form: Sāngatya. Substance : Palm-leaf. Size : 13″ × 2″. Character : Kannaḍa. Folios : 47. Lines on a Page : 10. Letters in a line : 70. Appearance : Old. Condition : Good. Complete or incomplete : Complete. See K.K. Vol. III, p. 97.

Beginning :

। ಕಂದ । ಅಂಬರದ ಗಂಗೆಯನು ಬೊಂಬೆರೂಹನೆಮಾಡಿ ಅಂಬಿಗರ
ಶರಣರಾತ್ಮಜೆ ಯೆಂದೆನಿಸುತಂ......ಗಂಗೆಯನು ಹಂಬಲಿಸಿ
ತಂದ । ಹರುಷಾಬ್ಧಿ ಕಥೆಯಂ ॥೧॥
ಆಕಾಶದ ಗಂಗೆಯನು ಯೇಣರೂಹನೆ ಮಾಡಿ । ವರ ರತ್ನಗಿರಿ
ಯೊಳಿರ್ದ ।
ಗಿರಿಸುತೆಯಂ । ಹರ...... ಶಿವ । ಜೋಗಿ ರೂಪನೆ ತಾಳಿ ।
ಬೇಕೆಂದು ತಂದ ಶ್ರೀಗಂಗೆ ಕಥೆಯಂ ॥೨॥

। ವೃತ್ತ । ಗಂಗೆ ತಂದ ವಚನಕೇಳಿ ಹಿಂದಾದ ಭಕ್ತ ಮಹೇಶ್ವರ ।
ಶಿವಶರಣ ಗಣಂಗಳಂ । ಭೃಂಗಕುಂತಳೆ ಗಿರಿಜೆ । ಗಂಗೆಯರ
ಸಂವಾದ ಸಾಂಗತ್ಯಕ್ಕೆ ಸಂತೈಸಿ ಸಲಹಿದನು ಸಂಗನಬಸವೇಶ್ವರ
ಶಿವನು । ಸರ್ವಜನಕೇಳಿ ।

End :

folio 46

ತರಳಚರಸತಿಪೇಳ್ದನು ॥೪॥ ಜಯತು ಜಯತು ಗುರುವೆ ನೀನೆನ್ನ ಭವಭವವ ಪರಿಹರಿಪನೆ ನಯನ ಪಂಚೇಂದ್ರಿಯಗಳ ಕಾರ್ಯಾದಿ ದ್ರೋಹಗಳ ಭಯವ ಭೀತಿಯನಳಿಪನೆ । ನಯವಾಗಿ ಕರಸ್ಥಲದಲಿ ನಿಂತೆನ್ನ ಯಾಯಪಾನವಕಂಡಿ .. ಸಿದ್ಧಿಯ ಕರುಣ ಕೃಪೆಯಿಟ್ಟು ರಕ್ಷಿಸಿ .. ...

Remarks :

ಈ ಪುಸ್ತಕವನ್ನು ಬರೆದಾತ ಗೌಜದ ಬ್ರಹ್ಮಯ್ಯ, ಪಡೆದಾತ ಶಿಕಾರಿಪುರದ ಗಾಣಿಗರ ಮಲಶೆಟ್ಟಿ ಹೊಳೆಯಪ್ಪ. ಶಿವನು ಆಕಾಶ ಗಂಗೆಗೆ ಸ್ತ್ರೀರೂಪವನ್ನು ಕೊಟ್ಟು ಮನೆಗೆ ಕರೆದುಕೊಂಡು ಬರುತ್ತಾನೆ. ಮನೆಯಲ್ಲಿ ಮೊದಲನೆಯ ಹೆಂಡತಿಯಾದ ಪಾರ್ವತಿಗೂ ಎರಡನೆಯ ಹೆಂಡತಿಯಾದ ಗಂಗೆಗೂ ಜಗಳ ವಾಗುತ್ತದೆ. ಇವರಿಬ್ಬರ ಜಗಳದ ಕಥೆಯು 960 ಪದ್ಯಗಳಲ್ಲಿ ಈ ಕೃತಿಯಲ್ಲಿ ವರ್ಣಿತವಾಗಿದೆ.

The God S'iva gives the form of a woman to the River of Sky (Gaṅga) and brings her home. There is a Quarrel between the first wife Pārvati and the second wife Gaṅge. This story is depicted in 960 stanzas.

Sl. No. 27. ಗಿರಿಜೆ ಗಂಗೆ ಸಂವಾದ ಸಾಂಗತ್ಯ
GIRIJE-GAṄGE SAMVĀDA SĀṄGATYA

MS. No. 1118 (A). Author : Tharula Cērapati. Form : Sāṅgtya. Substance : Palm-leaf. Size : 8″ × 1¾″. Character : Kannaḍa. Folios : 58 . Lineson a Page : 10. Letters in a line: 46. Appearance Modern. Condition : Defective. Complete or incomplete : Complete.

Beginning: folio 1

...ನೀಲಲೋಚನೆ । ತಮ್ಮ ಪುರುಷ ಬಸವೇಶ್ವರ
ದೇವ ಗೆ ನಿರೂಪಿಸಿದ ಗಂಗೆಗಿರಿಜೆ ಸಂವಾದವ । ಅರುಹೆಂಬ
ಗುರುವಿಂಗೆ ಜ್ಞಾನವೆಂಬ ಶಿಷ್ಯನು ಬಿನ್ನಹವಮಾಡಿ ಪೇಳ್ದ ತ್ರಿವರ್ಣದ
ಸಾಂಗತ್ಯಕ್ಕೆ ನಿರ್ವಿಘ್ನಮಸ್ತು ।

ಕಂದ । ಅಂಬರ ಗಂಗೆಯನು ಬೊಂಬೆ
ರೂಪನೆ ಮಾಡಿ ಅಂಬಿಗ ಶರಣರಾತ್ಮಜೆಯೆನಿಸುತುಂ
ಕುಂಭಿನಿಗೆ ಚೋದ್ಯವೆಂದೆನಿಪ ಶಿವಗಂಗೆಯನು
ಹಂಬಲಿಸಿ ತಂದ ಹರುಷಾಬ್ಧಿ ಕತೆಯುಂ ॥೧॥ (?)

End : folio 58

ಜಯಜಯತು ಗುರುರಾಯಗೆ । ನೀ ಎನ್ನ ಭಯವ ಪರಿಹರಿಪ ಗುರುವೆ ।
ನಯನ ಪಂಚೇಂದ್ರಿಯ ಕರ್ಮದ್ರೋಹಂಗಳ ಭಯದ ಭೀತಿಯ ಪರಿಹರಿಪನೆ ।
ಸ್ವಯವಾಗಿ ಕರಸ್ಥಲದಲ್ಲಿ ನಿಂತೆನ್ನ ಮಾಯಾಪಾಶವ ಖಂಡಿಸಿ ದಯಕರುಣ
ಕೃಪೆಯಿಟ್ಟು ರಕ್ಷಿಸುವ ಗುರುರಾಯ ಜಯಜಯತು ಗುರುವೆ.
ಶ್ಲೋಕ ॥ ಸರ್ವಕಾರ್ಯ ವಿನಿರ್ಮುಕ್ತಂ । ಸರ್ವಸಂಗ ವಿವರ್ಜಿತಂ
ಸರ್ವದೇವಮಯಂ ಶಾಂತ।ಪಾಹಿ ಮದ್ಗುರು ದೇವಯೋ: ॥೧॥

Remarks :

ಇದು ಸಾಂಗತ್ಯಕೃತಿಯಾದರೂ ವಿವರವಚನಗಳೂ ರಾಗಗಳೂ ಹೇಳಲ್ಪಟ್ಟಿವೆ. 58ನೆಯ ಓಲೆಯ 4ನೆಯ ಪದ್ಯದ ಆಧಾರ ದಿಂದ ಕೃತಿಕರ್ತ 'ತರುಳ ಚೇರಪತಿ' ಎಂದು ತಿಳಿಯಬಹುದಾಗಿದೆ. (ಗುರುಚರಣ ಕಮಲಸೇವಕನ । ಸೇವಕನಾದ ತರುಳ ಚೇರಪತಿ ಪೇಳ್ದನು.). 1109(B) ನಂ. ತಾಳೆಯೋಲೆಯ ಪ್ರತಿಯು ಇದೇ

ಕೃತಿಯಾಗಿದ್ದು, ಆದರಲ್ಲಿ 960 ಪದ್ಯಗಳಿದ್ದು ಕೃತಿ ಸಮಗ್ರ ವಾಗಿದೆ. ಇಲ್ಲಿ 859 ಪದ್ಯಗಳಿವೆ.

This work has Vivara Vacanas and various Rāgas also apart from its being a Sāṅgatya work. The author of this work may be Tarula Cērapati (folio 58, stanza 4).

See Sl. No. 26.

Sl. No. 28 ಗುಮ್ಮಟಯ್ಯಗಳ ಶತಕ (ಅರ್ಧೇಂದುಮೌಳಿಸ್ತವ)

GUMMAṬAYYAGAḶA S'ATAKA (ARDHĒNDUMAUḶI STAVA)

MS. No. 1116. (V). Author : Gummaṭāya. Form : Vṛitta. Substance : Palm-leaf. Size : 7¾″ × 2″. Character : Kannaḍa. Folios : 12. Lines on a page : 11. Letters in a line : 38. Appearance: Old. Condition : Good. Complete or incomplete : Complete. See K. K. Vol. II, p. 170.

Beginning : folio 124

ಶ್ರೀಮತ್ಸರ್ವೇಶ ಲೋಕತ್ರಯ ಜನಕ ಜಗನ್ನಾಥ ಚಿದ್ರೂಪನಿತ್ಯ
ವ್ಯೋಮಾಕಾರ ತ್ವದೀಯೋನ್ನತಿಯನನುದಿನಂ ಬಣ್ಣಿಸುತ್ತುಂತ
ಮೆಯ್ವಲ್
ತಾಮಾರಕೋಟಿಕಲ್ಪಂಗಳೊಳಮರಫಣೀಂದ್ರರ್ಕಳೆಂಬಂ
ನರನ್ಯ
ಸಾಮಾನ್ಯಮರ್ತ್ಯರೇಂ ಬಣ್ಣಿಪರತಿಮುದದಿಂ ನಿಮ್ಮನ
ರ್ಧೇಂದು ಮೌಳೀ ॥೧॥

ಶ್ರುತಿಗಳುಂ ನೆಯ್ದುವೆನ್ನೀ ವಚನತತಿಗಳೆಂತೆಯ್ದುಗುಂ ತಾಂಗ
ತೀತಂ
ಸ್ತುತಿಯಿಪ್ಪಾಂ ಗಾಂಪನೆಂದೇಳಿಸದಿರಭವ ಚಿಟ್ಟಚ್ಚರೊಲ್ತಪ್ಪ
ದೇಂ (?) ನಾ

ಡಿತೆ ಸತ್ಯಂ (?) ನಿಮ್ಮ ನಾಮಗ್ರಹಣಸಹಿತಮೇನೆಂದೊಡಂ ದೇವ ತತ್ಪ್ರೋ
ಚ್ಚಿತಮಕ್ಕುಂ ನಿಮ್ಮ ಸರ್ವಾತ್ಮತೆಯೆಸಕದ ಪೆಂಪಂದವ ರ್ಧೇಂದುಮೌಳೀ ॥೨॥ (?)

End : folio 136

ಬರಯಿಪ್ಪಾನಂದದಿಂದಂ ಬರಯಿಸಿದುದನೋಲ್ದೋದು ವೋದುತ್ತೆ ಲೋಕ
ಕ್ಕೆ ರಹಸ್ಯಾರ್ಥಂಗಳಂ ಬೀರುವ ಮನದಲಡಂ ಕೇಳ್ವುದಾರುಕ್ತಿ ಯಿಂದಾ
ದರದಿಂ ಕೈಮಿಕ್ಕು ಕೀರ್ತಿಪ್ಪಖಿಲ ಬುಧಜನಕ್ಕಾಯುರಾರೋಗ್ಯ ಸೌಖ್ಯೋ
ತ್ಕರಸೌಭಾಗ್ಯಪ್ರಭಾವಂಗಳನನುದಿನವೊಲ್ದೀವುದತ್ಯಂತಶುದ್ಧಾ ॥೧೦೭॥

ಸೌರಾಷ್ಟ್ರಂ ಸೋಮನಾದಂ ಪ್ರಭುಗಿರಿಶಪದಕ್ಷೇಪಿತಂ ಚಿತ್ತಭಕ್ತಿ
ಶ್ರೀರಾಮಂ ಗುಮ್ಮಟಾರ್ಯಂ ವಿರಚಿತಮೆನಿಪರ್ಧೇಂದುಮೌಳಿ ಸ್ತವಾಖ್ಯಂ
ಶೌರಂ ಶೈವಾಗಮೋಕ್ತಂ ಶಮದಮನಿಯತಾರ್ಥಪ್ರದಂ ಭಕ್ತಿ ಯಿಂದೊ
ಲ್ದಾರಾನುಂ ನಿಚ್ಚ ನಿಚ್ಚಂ ಪಠಿಯಿಸಿದವರ್ಗಕ್ಕುಂ ವಿಶಿಷ್ಟಾರ್ಥ ಸೌಖ್ಯಂ ॥೧೦೮॥

Remarks :

ಸಾಮಾನ್ಯವಾಗಿ 'ಅತ್ಯಂತಶುದ್ಧಾ' ಎಂದೂ ಕೆಲವೆಡೆಗಳಲ್ಲಿ 'ಅರ್ಧೇಂದುಮೌಳಿ' ಎಂದೂ ಮುಗಿಯುವ 108 ಶಿವಸ್ತುತಿ ಪರವಾದ ಪದ್ಯಗಳು ಈ ಕೃತಿಯಲ್ಲಿವೆ.

This is a S'tōtra, having 108 stanzas, most of which ending with 'ಅತ್ಯಂತಶುದ್ಧಾ' and rarely with 'ಅರ್ಧೇಂದು ಮೌಳೀ'.

Sl. No. 29. ಗುರುರಗಳೆ

GURURAGAḶE

MS. No. 1116 (A). Author: Tribhuvanatāta. Form: Ragaḷe. Substance: Palm-leaf. Size: 7¾″ × 2″. Character: Kannaḍa. Folios: 2. Lines on a page: 10. Letters in a line: 44. Appearance: Old. Condition: Good. Complete or incomplete: Complete. K.K. Vol. III, pp. 285, 375.

Beginning: folio 1

ಇರುಳುಹಗಲೆಂಬುದನರಿಯದೆ ।
ಗುರುಚರಣವ ಭಜಿಸು ಮನವೇ ಸಂಚಲವಿಲ್ಲದೆ ।
ಪರಮಾರ್ಥದಿಂದುಲಿದು ಬಗೆವುದು
ಹರನೆ ಗುರುಮೂರ್ತಿ ಸಲಹು ಗುರುವಿಶ್ವೇಶ ॥೧॥ (?)
ಸ್ವಸ್ತಿಶ್ರೀನಿಜ ಪರಮ ಪ್ರತ್ಯಕ್ಷ ಗುರುಶರಣು ।೧।
ಭಕ್ತಿಶಮದಮದಮೃತವಿತ್ತ ಶ್ರೀಗುರುಶರಣು ।೨।

End: folio 2

ಆರೈದು ನಿಮ್ಮ ಸೊಮ್ಮಿನೊಳಗಿರಿಸಯ್ಯ ಗುರುಶರಣು ॥೫೮॥
ಹಾರೈಸಿ ಚಮಪದನ ಚಿತ್ತೈಸಿ ಗುರುಶರಣು ॥೫೯॥
ಮಾರಾರಿಯೆನಿಪ ಗುರುವಿಶ್ವೇಶ ಗುರುಶರಣು ॥೬೦॥

। ಕಂದ । ಆದಿ ಅನಾದಿಗಳೆಂಬಿವ ।
ಭೇದಿಸಿ ತಂದು ಯೋಗಸಾಧ್ಯದೊಳಿರಿಸಿ ।
ಬೋಧಿಸಿ ಗುರು ಸುಜ್ಞಾನದ ।
ಹಾದಿಯ ತೋರಿಸಿದನೆಮ್ಮಯ ಗುರು ವಿಶ್ವೇಶಾ ॥

Remarks:

ಇದರಲ್ಲಿ ಕವಿ ತನ್ನ ಹೆಸರನ್ನು ಸೂಚಿಸಿಲ್ಲ. ಕವಿಯ ಹೆಸರು 'ತ್ರಿಭುವನತಾತ' ಎಂಬುದಾಗಿ ಕರ್ಣಾಟಕ ಕವಿಚರಿತೆಯಿಂದ ತಿಳಿದುಬರುತ್ತದೆ. ಇದರಲ್ಲಿ 60 ರಗಳೆಯ ಪಾದಗಳಿವೆ. ಪ್ರತಿ

ಪಾದವೂ 'ಗುರುಶರಣು' ಎಂಬುದಾಗಿ ಅಂತ್ಯವಾಗುತ್ತದೆ. ಆರಂಭದಲ್ಲಿ ಮತ್ತು ಅಂತ್ಯದಲ್ಲಿ ಒಂದೊಂದು ಕಂದಪದ್ಯಗಳಿವೆ. 'ಗುರುವಿಶ್ವೇಶ'ನಿಗೆ ಈ ಕೃತಿ ಅರ್ಪಿತವಾಗಿದೆ.

The work is in 60 lines of Raga*ḷ*e, each of which ends with 'ಗುರುಶರಣು'. The work is dedicated to 'Guru Vis'vēs'a'.

Sl. No. 30 ಗುರುರಗಳೆ

GURURAGAḶE

MS. No. 456 (A). Author : Tribhuvanatāta. Form : Raga*ḷ*e. Substance : Palm-leaf. Size : 8½″ × 1¾″. Character : Kanna*ḍ*a. Folios : 5. Lines on a page: 6. Letters in a line : 25. Appearance : Old. Condition : Good. Complete or incomplete : Complete. See K.K. Vol. III, p. 375.

Beginning : folio 1

ಇರುಳುಹಗಲೆಂಬುದನರಿಯದೆ ।
ಗುರುಚರಣವ ಭಜಿಸು ಮನವೆ ಸಂಚಲವಿಲ್ಲದೆ ॥
ಪರಮಾರ್ಥದಿಂದೊಲಿದು ಬಗೆವುದು ।
ಹರನೆ ಗುರುಮೂರ್ತಿ ಸಲಹು ಗುರುವಿಶ್ವೇಶ ॥೧॥ (?)
। ಕಂದ । ಸ್ವಸ್ತಿಶ್ರೀನಿಜಪರಮ ಪ್ರತ್ಯಕ್ಷ ಗುರುಶರಣು ।೧।
ಭಕ್ತಿಭಯದಯದಮೃತವಿತ್ತ ಶ್ರೀಗುರುಶರಣು ॥೨॥

End : folio 5

। ರಗಳೆ । ಆರೈದು ನಿಮ್ಮ ಸೊಮ್ಮಿನೊಳಗಿರಿಸಯ್ಯ ಗುರುಶರಣು ॥೫೫॥
ಹಾರೈಸಿ ಚೌಪದನ ಚಿತ್ತೈಸಿ ಗುರುಶರಣು ॥೫೬॥
। ಕಂದ । ಆದಿಯನಾದಿಗಳೆಂಬಿವ ।
ಭೇದಿಸಿ ತಂದು ಯೋಗ ಶಿವಸಾಧ್ಯದೊಳಿರಿಸಿ ।
ಬೋಧಿಸಿ ಗುರು ಸುಜ್ಞಾನದ

ಹಾದಿಯ ತೋರಿಸಿದನೆಮ್ಮ ಗುರುವಿಶ್ವೇಶ ॥ (?).
ಗುರುರಗಳೆ ಸಮಾಪ್ತಿ ಮಂಗಳ ಮಹಾಶ್ರೀ ॥

Remarks :

ಕವಿಯ ಹೆಸರು ಕಂಡುಬರುವುದಿಲ್ಲ. ಕವಿಚರಿತೆಯಲ್ಲಿ ತ್ರಿಭುವನತಾತ ಎಂದಿದೆ. ಈ ಕೃತಿ ರಗಳೆಯ 57 ಸಾಲುಗಳಿಂದ ರಚಿತವಾಗಿದೆ. ಪ್ರತಿ ಒಂದು ಸಾಲೂ 'ಗುರುಶರಣು' ಎಂಬುದಾಗಿ ಮುಗಿಯುತ್ತದೆ. 1116 (A) ನಂಬರಿನ ಹಸ್ತಪ್ರತಿ ಇದೇ ಕೃತಿಯನ್ನೊಳಗೊಂಡಿದೆ.

The work is in 57 lines of Raga*l*e, each of which ends with 'ಗುರುಶರಣು'.

See Sl. No. 29.

Sl. No. 31. ಗುರುರಗಳೆ
GURURAGA*L*E

MS. No. 1178. Author: Tribhuvanat*a*ta. **Form :** Raga*l*e. Substance : Palm-leaf. Size : 7½″ × 1¾″. Character : Kanna*d*a. Folios : 2. Lines on a page : 9. Letters in a line : 40. Appearance : old. Condition : Good. Complete or incomplete : Complete.

Beginning: folio 1

ಕಂದ । ಇರುಳು ಹಗಲೆಂಬುದನರಿಯದೆ
ಗುರುಚರಣವ ಭಜಿಸು ಮನವೆ ಸಂಚಲವಿಲ್ಲದೆ ॥
ಪರಮಾರ್ಥಗತಿಯನೀವುದು
ಹರನೆ ಗುರುಮೂರ್ತಿ ಸಲಹು ಶರಣು ಗುರುವಿಶ್ವೇಶ ॥೧॥ (?)

ರಗಳೆ । ಸ್ವಸ್ತಿಶ್ರೀ ನಿಜಪರಮಪ್ರತ್ಯಕ್ಷ ಗುರುಶರಣು
ಭಕ್ತಿಭಯುದಯದಮೃತವಿತ್ತ ಶ್ರೀಗುರುಶರಣು ॥೨॥

End : folio 2

। ರಗಳೆ । ನಿಮ್ಮ ಪಾದದ್ವಯದಿ ಸಲಹೆನ್ನ ಗುರುಶರಣು ।೬೦।
ಆರೈದು ನಿಮ್ಮ ಸೊಮ್ಮಿನೊಳಗಿರಿಸಯ್ಯ ಗುರುಶರಣು ।೬೧।
ಹಾರೈಸಿ ಚೌಪದನ ಚಿತ್ತೈಸಿ ಗುರುಶರಣು ।೬೨।
ಸಾರಾಯ ಪರಮಾರ್ಥ ಪದವಿತ್ತ ಗುರುಶರಣು ।೬೩।
ಮಾರಾರಿಯೆನಿಪ ಗುರುವಿಶ್ವೇಶ ಗುರುಶರಣು ।೬೪।

। ಕಂದ । ಆದಿ ಅನಾದಿಗಳೆಂಬಿವ
ಭೇದಿಸಿ ತಂದು ಯೋಗಸಾಧ್ಯದೊಳಗಿರಿಸಿ ।
ಬೋಧಿಸಿ ಗುರು ಸುಜ್ಞಾನದ
ಹಾದಿಯ ತೋರಿಸಿದನೆಮ್ಮಯ ಗುರುವಿಶ್ವೇಶಾ ।೬೫॥ (?)

Remarks :

ವೀರಶೈವ ಧರ್ಮದಲ್ಲಿ ಗುರುವಿನ ಸ್ಥಾನ ಮತ್ತು ಪ್ರಾಮುಖ್ಯ ಇವನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

ಇದೇ ಕಟ್ಟಿನಲ್ಲಿ 'ಗುರುರಗಳೆ'ಯಾದ ಮೇಲೆ ಈ ಕೆಳಗೆ ಕಂಡ ಗ್ರಂಥಗಳೂ ಸೇರಿವೆ: ಷಡಾಕ್ಷರಿಯ ರಗಳೆ (folio 3), ಶರಣುಬಸವರಗಳೆ (folio 7), ಪುನರ್ದೀಕ್ಷೆಯ ರಗಳೆ (folio 11), ಮನೋವಿಕಾರನಿರಸನರಗಳೆ (folio 19), ಭಕ್ತಿಬಿನ್ನಹದರಗಳೆ (folio 26), ವೀರಶೈವರಗಳೆ (folio 32), ಬಸವತ್ರಿವಿಧಿ (folio 41), ಮಿಶ್ರಸ್ತೋತ್ರದ ತ್ರಿವಿಧಿ (folio 53), ಅಷ್ಟಾವರಣದ ತ್ರಿವಿಧಿ (folio 62), ಶೀಲವಂತಯ್ಯನ ತ್ರಿವಿಧಿ (folio 75), ಮಾಗದ್ವೈತನಿರಸನ ತ್ರಿವಿಧಿ (folio 82), ಏಕೋದೇವಪ್ರತಿಷ್ಠದ ತ್ರಿವಿಧಿ (folio 93), ಶಂಕರ ಸ್ವಾಮಿಗಳು ನಿರೂಪಿಸಿದ ಕಂದ (folio 100), ಎಳಮಲೆಯ ಗುರುಶಾಂತದೇವರು ಸೇರಿಸಿದ ಷಡಾಕ್ಷರಿಯ ಕಂದ (folio 108), ಮರುಳದೇವರ ಕಂದ (folio 117), ಮುರಿಗೆಸ್ವಾಮಿಗಳು ನಿರೂಪಿಸಿದ ಪ್ರಭುಲಿಂಗರಾಜ ಕಂದ (folio 129), ಪಾಲ್ಕುರಿಕೆ ಸೋಮಾರಾಧ್ಯರು ನಿರೂಪಿಸಿದ ಅಕ್ಷರಮಾಲಿಕಾಗದ್ಯ (folio 133), ನಮಸ್ಕಾರಗದ್ಯ (folio 133), ಪಂಚಪ್ರಕಾರಗದ್ಯ (folio 136), ಅಷ್ಟೋತ್ತರಶತನಾಮಗದ್ಯ

(folio 139), ಷಟ್ಸ್ಥಲದ ಗದ್ಯ (folio 142), ಉದಾಹರಣಗದ್ಯ (folio 145), ಅಕ್ಷರಾಂಕನಗದ್ಯ (folio 149), ಶಿವಾಧವಶತಕ (folio 155), ಶಿವಾವಲ್ಲಭಶತಕ (folio 168), ಮಹದೈಪುರೀಶ್ವರಶತಕ (folio 182), ಮಲ್ಲಣಸ್ತೋತ್ರ (folio 198), ಮಲಯರಾಜಸ್ತೋತ್ರ (folio 201), ಅನಾಮಯಸ್ತೋತ್ರ (folio 207), ಹಲಾಯುಧಸ್ತೋತ್ರ (folio 211), ಮಹಿಮ್ನಾಸ್ತೋತ್ರ (folio 218).

This work explains the place and importance of Guru according to Vīraśaiva System. The work is in Ragaḷe metre.

In addition to this work, the Ms. contains many other works of religious importance. See Sl. No. 29.

Sl. No. 32. ಗುರುರಗಳೆ
GURURAGALE

Ms. No. 1159 (A). Author : Tribhuvanatāta Form : Ragḷe. Substance : Palm-leaf. Size : 8″×2″. Character : Kannaḍa. Folios : 2. Lines on a Page : 10. Letters in a line : 40. Appearance : Old. Condition : Good. Complete or incomplete : Complete.

Beginning : folio 1

ಕಂದ || ಇರುಳು ಹಗಲೆಂಬುದನರಿಯದೆ
ಗುರುಚರಣವ ಭಜಿಸು ಮನವೆ ಸಂಚಲವಿಲದೆ ।
ಪರಮಾರ್ಥಗತಿಯನೀವುದು ಹರನೆ
ಗುರುಮೂರ್ತಿ ಸಲಹು ಶರಣು ಗುರುವಿಶ್ವೇಶಾ ॥೧॥ (?)

End : folio 2

ಕಂದ ॥ ಆದಿಯನಾದಿಗಳೆಂಬಿವ
ನಾದರದಿಂ ತಂದು ಯೋಗಸಾಧ್ಯದೊಳರಿಸಿ
ಬೋಧಿಸಿ ಗುರು ಸುಜ್ಞಾನದ
ಹಾದಿಯ ತೋರಿಸಿದನೆಮ್ಮಯ ಗುರುವಿಶ್ವೇಶಾ ॥ (?)

Remarks :

'ಗುರುವಿಶ್ವೇಶಾ' ಎಂದು ಮುಗಿಯುವ ಎರಡು ಆದ್ಯಂತ ಕಂದ ಪದ್ಯಗಳಿವೆ ; ರಗಳೆಯ ಪ್ರತಿಪಾದವೂ 'ಗುರುಶರಣು' ಎಂದು ಮುಗಿಯುತ್ತದೆ.

This is a work in Ragaḷe metre in which each line ends with 'ಗುರುಶರಣು'. The author of this work is 'Tribhuvanatata'. See Sl. No. 29.

Sl. No. 33. ಗುರುರಾಜಚಾರಿತ್ರ್ಯದ ನಾಂದಿ GURURĀJACĀRITRYADA NĀNDI

MS. No. 1134(P). Author: Sivakavi Siddhanañjēs'a. Form: Ṣaṭpadi. Substance: Palm-leaf. Size: 10″ × 2″ Character: Kannaḍa. Folios: 3. Lines on a page: 11. Letters in a line: 53. Appearance: Old. Condition: Good. Complete or incomplete: Complete. See K. K. Vol. II, p. 385.

Beginning : folio 41

ಷಾ. ಷ ॥ ಶ್ರೀ ಶಿವಮಹೇಶ ಶುಭಲೇಶ ವೃಷಭಾರೂಢ
ಕೇಶವಾರ್ಚಿತಪಾದ ಶೇಷಕೃತಭೂಷ ಕೀ
ನಾಶಮದನಾಶ ಸರ್ವೇಶ ಕೈಲಾಸಪುರವಾಸ ಸುರಪಥಸುಕೇಶ ।
ಈಶ ಮೃತ್ಯುಂಜಯ ಗಣೇಶ ವರಶಶಿಕಳಾ
ಭೂಷ ಭಕ್ತಿಪ್ರಿಯ ಪಾಶಹರ ಶಾರದಾ
ಧೀಶಶಿರಕರ ಪಾರ್ವತೀಶ ಗುರುಸಿದ್ಧನಂಜೇಶ ಜಯಸುಪ್ರಕಾಶ ॥೧॥

End : folio 43/2

(ಸುರುಚಿರ)ಧಾತ್ರಿಗುತ್ತಮು(ವೆತ್ತು)ನೆನಿಪ ಪೂವಲ್ಲಿ ಪುರಕಧಿಪ(?)
ಚಿತ್ರಗುರು ಪಂಚವಣ್ಣಿಗೆ ಸಿದ್ಧನಂಜೇಶ
ಪುತ್ರ ಶಿವಕವಿಕುಲ ಸ್ತೋತ್ರ ಶ್ರೀಶೈಲ ನೈರುತ್ಯಭಾಗದೊಳೊಪ್ಪುವಾ
ಕ್ಷೇತ್ರನದ ನಂದಿ ಮಂಡಲದ ಸಿಂಹಾಸನಕೆ
ಧಾತ್ರಿ ಶಿವಕವಿ ಸಿದ್ಧನಂಜೇಶಕೃತ ದಿವ್ಯ
ಸ್ತೋತ್ರ ಗುರುರಾಜಚಾರಿತ್ರದೊಳು ನೂತನರ ಕತೆಗೆ ಹದಿನಾರು ಸಂಧಿ ॥೨೩॥

Remarks :

ವಾರ್ಧಕಷಟ್ಪದಿಯಲ್ಲಿ ರಚಿತವಾದ ಸಿದ್ಧನಂಜೇಶಕೃತ ಗುರುರಾಜ ಚಾರಿತ್ರದಿಂದ ಈ ೨೩ ಪದ್ಯಗಳನ್ನು ತೆಗೆದುಕೊಟ್ಟಿದೆ.

The work Contains 23 stanzas in Ṣaṭpadi metre. These stanzas are taken from 'Gururājacāritra', written by Siddhanañjēśa.

Sl. No. 34. ಗುರುಸ್ತೋತ್ರದ ನಾಂದ್ಯ GURUSTŌTRADA NĀNDYA

MS. No. 1134(C). Author : Lōcana Siddhaliṅga. Form : Ṣaṭpadi. Substance : Palm-leaf. Size : 10″×2″. Charac : Kannaḍa. Folios : 2. Lines on a page : 11. Letters in a line : 48. Appearance: Old. Condition: Good. Complete or Incomplete : Complete.

Beginning : folio 9/2

ಭಾ. ಷ॥ ಶ್ರೀವರನ ನಯುನಾಬ್ಜ ಪಾದನೆ
ಶ್ರೀವರನ ತನುಜಾತದಹನನೆ
ಶ್ರೀವರನಹಿತನಾಸ್ಯಪಾತ್ರೆಯು ಕರದಿ ಪಿಡಿದವನೆ।

ಶ್ರೀವರಗೆ ಸ್ತ್ರೀರೂಪವಿತ್ತನೆ
ಶ್ರೀವರನ ದೇವರನ ತಳೆದನೆ
ಶ್ರೀವರನ ಪಾಲಿಸುವ ಲೋಚನದೇವ ಮಾಂ ತ್ರಾಹಿ ॥

End : folio 11/2

ಕರಣಗಳೆಲ್ಲರ ಸಂಚಲವಳಿದರು
ಗುರುನುತಿಯಂ ಶುಭಮತಿಯಿಂ ಪಠಿಪರು
ಕರದೊಳಗಿಹ ಮಹಾಂತೇಷ್ಟದೊಳೈಕ್ಯವನೆಯ್ದುವರಿದು ದಿಟವು।
ಗುರುವಿಂದಧಿಕವು ಪರವಿಲ್ಲೆನುತಲಿ
ವರಶ್ರುತಿ ನಗರೋರಧಿಕವೆನುತ್ತಿದೆ
ಗುರುಸ್ತೋತ್ರವನದರಿಂದಿದನವಧಪಾತಗೆ ಶರಣೆಂಬೆಂ ॥೨೫॥

Remarks :

ಭಾಮಿನಿ ಮತ್ತು ವಾರ್ಧಕಷಟ್ಪದಿಗಳಲ್ಲಿ ಒಟ್ಟು 25 ಪದ್ಯಗಳಿವೆ. ಕವಿಚರಿತೆಯಲ್ಲಿ ಕೃತಿನಾಮವಾಗಲಿ ಕರ್ತೃನಾಮವಾಗಲಿ ಹೇಳಿಲ್ಲ.

The work contains 25 stanzas. Karṇāṭaka Kavicarite gives neither the name of the work nor its author.

Sl. No. 35. ಘಟ್ಟಿನುಡಿ ತುಣುಕುನುಡಿ
GHAṬṬINUḌI TUṆUKUNUḌI

MS. No. 1142. Author : (?) Form : Prose. Substance: Palm-leaf. Size : 13″ × 2″. Character : Kannaḍa. Folios : 130. Lines on a page : 13. Letters in a line : 95. Appearance : Old. Condition : Good. Complete or incomplete : Complete.

Beginning : folio 1

ವಿತತ ಪ್ರಸಿದ್ಧವಾದ।ಗುರು ದೀಕ್ಷಾಗುರು ಶಿಕ್ಷಾಗುರು ಜ್ಞಾನಗುರು
ಸ್ಥಲ । ಲಿಂಗ ಕ್ರಿಯಾಲಿಂಗ ಭಾವಲಿಂಗ ಜ್ಞಾನಲಿಂಗಸ್ಥಲ । ಚರ
ಸ್ವಯ
ಚರ ಪರಸ್ಥಲ । ಶಿಷ್ಯ ಶಿಷ್ಯವೃಷ್ಯಸೇವ್ಯಸ್ಥಲ......

End : folio 130

ಕಾಲ ಯಮನುಳ್ಳಂಥ । ಪರಶಿವನ ಲೀಲಾವಿಲಾಸದಲ್ಲಿ । ಆದರ
ಪ್ರೀತಿಯನ್ನುಳ್ಳಂಥ । ಪ್ರಸನ್ನ ಹುಟ್ಟಿಸಲ್ತಕ್ಕ । ಶುಭ ಶೋಭನ
ವನು ।

ದಾಯಿನಿ ಕೊಡುತಿರ್ದಂಥ ।

ಘಟ್ಟಿನುಡಿ ತುಣುಕುನುಡಿ ಸಮಾಪ್ತಿ......

Remarks :

ಬೇರೆ ಬೇರೆ ಕವಿಗಳ ಕೃತಿಗಳಲ್ಲಿಯ ನಾಂದ್ಯಪದ್ಯಗಳ ಕ್ಲಿಷ್ಟ ಪದಗಳಿಗೆ ಶಬ್ದಾರ್ಥವಿವರಣೆಯನ್ನು ಕೊಟ್ಟಿದೆ. ಕವಿಚರಿತೆಯಲ್ಲಿ ಗ್ರಂಥನಾಮವು ಈ ರೀತಿಯಾಗಿಲ್ಲ. ಕರ್ತೃನಾಮವು ಹೇಳಿಲ್ಲದ 'ವೃಷಭೇಂದ್ರವಿಜಯ ಶಬರಶಂಕರವಿಲಾಸಗಳ ಘಟ್ಟಿ ಪದ್ಯದ ಟೀಕೆ' ಎಂಬ ಮಾತುಂಟು (ಸಂ. III-ಪು. 430). ಆದೂ ಇದೂ ಒಂದೇ ಇರಬಹುದು. ಈ ಗ್ರಂಥದಲ್ಲಿ ಬಂದಿರುವ ನಾಂದ್ಯಗಳು: 1. ನೀಲಮ್ಮನ ನಾಂದ್ಯದ ನುಡಿ 2. ಸಿದ್ಧೇಶ್ವರನ ವಾರ್ಧಕದ ನುಡಿ 3. ಮುರುಳಯ್ಯನವರ ನಾಂದ್ಯದನುಡಿ 4. ಕಪ್ಪಿನ ನಂಜಯ್ಯನ ನಾಂದ್ಯದನುಡಿ 5. ಶಿವಲಿಂಗ ನಾಂದ್ಯದ ನುಡಿ 6. ಬಸವೇಶ್ವರನ ವರ್ನಕಪುರಾಣದ ನಾಂದ್ಯದ ನುಡಿ 7. ಹಾಲಾಸ್ಯ ಪುರಾಣದ ನುಡಿ 8. ದೇವೀನಾಂದ್ಯದ ನುಡಿ 9. ಶಂಕರಸಂಹಿತೆಯ ನುಡಿ 10. ಚೆನ್ನಬಸವೇಶ್ವರ ಪುರಾಣದ ನಾಂದ್ಯದ ನುಡಿ 11. ಚೇರಮಾಂಕನ ಕಾವ್ಯದ ನುಡಿ 12. ಮುರಿಗಾಸ್ವಾಮಿಗಳ ನಾಂದ್ಯದ ನುಡಿ 13. ಪ್ರಭುದೇವರ ನಾಂದ್ಯದ ನುಡಿ 14. ನೀಲಮ್ಮನವರ ನಾಂದ್ಯದ ನುಡಿ 15. ಷಡ್ವಕ್ತ್ರದ ನುಡಿ 16. ಲಲಿತನಾಂದ್ಯದ ನುಡಿ 17. ಲಿಂಗಸ್ತೋತ್ರ ಷಟ್ಪದಿಯ ನುಡಿ 18. ಶಿವಲಿಂಗಷಟ್ಪದ ನುಡಿ 19. ಮಹಿಮಾ ಷಟ್ಪದಿಯ ನುಡಿ 20. ಭಿಕ್ಷಾಟನಕಾವ್ಯದ ನುಡಿ 21. ಭೈರವೇಶ್ವರನ ಕಾವ್ಯದ ನುಡಿ 22. ಶಬರಶಂಕರವಿಲಾಸದ ನುಡಿ 23. ಭಾವಚಿಂತಾರತ್ನದ ನುಡಿ 24. ಹವಿಸ್ಮಾರಕಾವ್ಯದ ನುಡಿ 25. ವೃಷಭೇಂದ್ರವಿಜಯವಿಲಾಸದ ನುಡಿ [ಇಂತೀ ಪಂಚವಿಂಶತಿಲೀಲೆಗಳು].

The work is a verbatic explanation for the difficult diction of Nāndya padyas. In addition to this work there are few other Nāndyal works also. This work seems to be rare and useful.

Sl. No. 36. ಚತುರಾಸ್ಯ ನಿಘಂಟು
CATURĀSYA NIGHAṆṬU

MS. No. 1098(E). Author : Caturānana. Form: Kanda. Substance : Palm-leaf. Size : 7″×2″. Character: Kannaḍa. Folios: 14. Lines on a page: 9. Letters in a line: 32. Appearance: Old. Condition: Good. Complete or incomplete: Complete. K.K. Vol. II, p. 92.

Beginning :

ಶ್ರೀಮದಗಜಾಲಸನ್ಮುಖ ।
ತಾಮರಸಮಧುಪ್ರಮೋದಭೃಂಗ ದೇವಲ ।
ಲಾಮಂ ಕೃಪೆಯಿಂದೀಗೆ ಮ ।
ನೋಮುದಮನೊಲ್ದು ಸಂಪೆಯಾಳ್ದನಗನವರತಂ ॥ (?)

End :

ಜಾತಿಯನುಸುರ್ದನೆ ಕವಿ ರಸ ।
ವಾತಿನಲೋದುವನೆ ಗಮಕಿ ಪರರೊಡ್ಡಣೆಯಂ ॥
ಘಾತಿಪನೆ ವಾದಿ ಜಾಣ್ನುಡಿ– ।
ವಾತನೆ ತಾಂ ವಾಗ್ಮಿಯಪ್ಪುದೆಲೆ ಚತುರಾಸ್ಯ ॥೧೨೩॥

Remarks :

ಇದರಲ್ಲಿ ಪದಗಳಿಗೆ ಅರ್ಥ, ಅರ್ಥವಿವರಣೆ ಕೊಡಲಾಗಿದೆ. ಪ್ರತಿಒಂದು ಕಂದವೂ 'ಚತುರಾಸ್ಯ' ಎಂಬುದಾಗಿ ಅಂತ್ಯವಾಗುತ್ತದೆ. ಒಟ್ಟು 123 ಪದ್ಯಗಳಿವೆ. 'ಸಿಂಗರ' ವಂಶದ ಹನುಮ

ರಸನ ಮಗ ಬೊಮ್ಮರಸನ ಅಜ್ಞೆಯ ಮೇರೆಗೆ ತಾನು ಈ ಕೃತಿಯನ್ನು ರಚಿಸಿದ್ದೇನೆ ಎಂಬುದಾಗಿ ಕವಿಯು ಮೂರನೆಯ ಪದ್ಯದಲ್ಲಿ ಹೇಳಿಕೊಂಡಿದ್ದಾನೆ. (ಸಿಂಗರಾನ್ವಯತಿಲಕಂ ಹನುಮರಸ ಸೂನು ಬೊಮ್ಮ ಸಂ ಪೇಳಿಲೆ ಚತುರಾನನ ಎನಲ್ ಆಂ ಪೇಳಿಲನೆ..)
ಕೊನೆಯಲ್ಲಿ 'ಭಾರತನಿಘಂಟಿ'ಗೆ ಸಂಬಂಧಿಸಿದ ಒಂದು ಓಲೆ ಇದೆ.

Accurate meanings for some words are given with necessary explanation in Kanda padya. Every stanza ends with 'ಚತುರಾಸ್ಯ'.

Sl. No 37. ಚಿಕ್ಕಯ್ಯನ ಸಾಂಗತ್ಯ
CIKKAYYANA SĀṄGATYA

MS. No. 1118 (B). Author: Basava. Form: Sāṅgatya. Substance: Palm-leaf. Size: $1'' \times 1\frac{3}{4}''$. Character: Kannaḍa. Folios: 27. Lines on a page: 10. Letters in a line: 52. Appearance: Old. Condition: Good. Complete or incomplete: Incomplete. See K.K. Vol. II, p. 269.

Beginning: folio.60

ಲೋಕದೊಳಗೆ ಬ್ರಹ್ಮಭಕ್ತಿಯ ಕಣಿಯನು
ತಾ ಕರುವಿಟ್ಟಿರದಂತೆ ।
ಭೂಕಾಂತೆಯ ಕೈಯ ದರ್ಪಣವಿದ್ದಂತೆ
ತಾ ಕಲ್ಯಾಣವೊಪ್ಪಿಹುದು ।೨೧॥
ಸುತ್ತ ಹನ್ನೆರಡು ಗಾವುದು ನಡುಮಧ್ಯನಾ
ಲ್ವತ್ತೆಂಟು ಗಾವುದದಳತೆ।
ಒತ್ತಿಬೆಳೆದ ಕೋಟಿಗೆತ್ತಿದಟ್ಟಣಿಗಾಳು
ವಿಸ್ತರಿಸುವರಳವಲ್ಲ ।।೨೨।।

End : folio 86

ನಿತ್ಯನಾದೆನು ನಿನ್ನ ಮೂರ್ತಿಯ ಕಂಡು ಕೃ
ತಾರ್ಥನಾದೆನು ಚಿಕ್ಕಯ್ಯ
ಉತ್ತರವಾಯಿತೆನ್ನಯ ವ್ರತ ನಿನ್ನಿಂದ
ಮುಕ್ತನಾದೆನು ಬದುಕಿದೆನು ॥೬೫॥

Remarks :

ಆರಂಭದಿಂದ 20 ಪದ್ಯಗಳು (ಓಲೆ 59) ನಷ್ಟವಾಗಿವೆ. ಕವಿ ಚರಿತೆಯ ಪ್ರಕಾರ (II–ಪುಟ 269) ಈ ಕೃತಿಗೆ 'ಭಕ್ತಿಮೋಹನ ಸಾರ' ಎಂಬ ಹೆಸರೂ ಉಂಟು. ಕವಿಯ ಹೆಸರು ಬಸವ ಅಥವಾ ಚೆನ್ನಬಸವ. ಬಸವಣ್ಣನನ್ನು ಕೊಲ್ಲಲೆಂದು ಚೋರಚಿಕ್ಕಯ್ಯ ನೆಂಬಾತನು ಬಂದು, ಮನಸ್ಸು ಮಾರ್ಪಟ್ಟು, ಮುಕ್ತಿಗೆ ಸಂದ ನೆಂಬ ಕಥೆ ಇಲ್ಲಿ ನಿರೂಪಿತವಾಗಿದೆ. ಸಮಗ್ರ ಕೃತಿಯಲ್ಲಿ ಒಟ್ಟು 4 ಸಂಧಿಗಳಿದ್ದು 830 ಪದ್ಯಗಳಿರಬೇಕಾಗಿತ್ತು. ಇಲ್ಲಿ ಮೊದ ಲೆರಡು ಸಂಧಿಗಳು ಪೂರ್ತಿಯಾಗಿಯೂ, ಮೂರನೆಯ ಸಂಧಿಯಲ್ಲಿ 65 ಪದ್ಯಗಳವರೆಗೂ ಮಾತ್ರ ಇದ್ದು ಕೃತಿ ಅಸಮಗ್ರವಾಗಿದೆ.

Twenty stanzas in the beginning are lost. The work is also known as 'Bhakti Mōhanasāra' according to Kavicarite (Vol. II, p. 269). The complete work should have 850 stanzas in 4 sandhis. But here it is incomplete.

Sl. No. 38. ಚೆನ್ನಬಸವಪುರಾಣದ ನಾಂದ್ಯ
CENNABASAVAPURĀṆADA NĀNDYA

MS. No. 1134 (R). Author : Virūpākṣa Paṇḍita. Form : Ṣaṭpadi. Substance : Palm-leaf. Size : 10″ × 2″. Character : Kannaḍa. Folios : 10. Lines on a page : 11. Letters in a line : 54. Appearance: Old. Condition : Good. Complete or incomplete : Complete. See K. K. Vol. II, p. 308.

Beginning : folio 47

ವಾ. ಷ|| ಶ್ರೀ ಪರಮ ಸದ್ಗುರು ಪರಂಜ್ಯೋತಿ ಸ್ವ
ರೂಪನಾದ್ಯಂತರಹಿತಂ ನಿತ್ಯನದ್ವಯಂ
ಪಾಪರಹಿತಂ ಪರಬ್ರಹ್ಮ ಬ್ರಹ್ಮಜ್ಞಾನಬೋಧಾಸುಕರ್ತೃ
ವೆಂದು
ಗೋಪವಾಹನನಾವಗಂ ಬಿಡದೆ ನಿಮ್ಮಯ
ಶ್ರೀಪಾದಪದ್ಮಂಗಳಂ ಭಜಿಸುತಿಹರೆನ್ನ
ತಾಪತ್ರಯಂಗಳಂ ಹರಿಸಿ ರಕ್ಷಿಸು ನಿಮ್ಮನಾಂ ಪೊಗಳ್ವೆನಳ್ಕರಿಂದೆ
||೧||

End : folio 56

ವಾ. ಷ|| ಇಂತೆಸೆವ ಚೆನ್ನಬಸವೇಶ್ವರ ಪುರಾಣವಂ
ಸಂತಸದಿ ಬರೆದವರ್ಗೋದಿದವರ್ಗರ್ಥವಾ
ದ್ಯಂತವಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ವ
ವರ್ಗೆ
ಸಂತತಂ ಸಕಲಸುಖವಂ ಸಕಲ ಭೋಗವನ
ನಂತಸೌಭಾಗ್ಯವಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕಱಿಂದಾ
||೮೬||

Remarks :

ಚೆನ್ನಬಸವಪುರಾಣದ ಸಂಧಿಗಳ ಆರಂಭಪದ್ಯಗಳನ್ನು ಈ ನಾಂದ್ಯದಲ್ಲಿ ಸಂಕಲಿಸಿದೆ. ಇದರಲ್ಲಿ 86 ಪದ್ಯಗಳಿವೆ.

There are 86 Nāndyas here. The commencing stanzas of the sandhis of Cennabasava purāṇa have been taken here.

Sl. No 39 ಚೇರಮಾಂಕನ ಕಾವ್ಯದ ನಾಂದ್ಯ

CĒRAMĀṄKANA KĀVYADA NĀNDYA

MS. No. 1134 (N). Author : Cēramāṅka. Form: Ṣaṭpadi. Substance : Palm-leaf. Size : 10″ × 2″.

Character : Kanna*d*a. Folios : 4. Lines on a Page : 10. Letters in a line : 53. Appearance : Old. Condition : Good. Complete or incomplete : Complete. See K.K. Vol. II, p. 209.

Beginning : folio 35

ಶ್ರೀಮದಗಜಾವದನತಾಮರಸದಿನನಾಥ
ಕಾಮಿತಫಲಪ್ರದ ಸದಾಮಂಜುಳಾಂಗ ನಿ
ಸ್ಸೀಮ ನಿರ್ಮಲಮೂರ್ತಿ ಸಾಮವೇದಸ್ತುತ್ಯ ರಾಮಣೀಯ
ಸುಭಕ್ತ ।
ಪ್ರೇಮಿಯಾನತಕಲ್ಪಭೂಮಿರುಹ ಸಕಲಸುಖ
ಧಾಮಪರ್ವತಸಾರ್ವಭೌಮಸೌಂದರದಿವ್ಯ
ಜಾಮಾತೃವೆನಿಪ ಗಂಗಾಮಕುಟ ರಕ್ಷಿಸಾ ಶ್ರೀಪ್ರೇಮದಿಂ
ಭೋಗಮಲ್ಲಾ ॥೧॥

End : folio 38

ಇದು ಸಕಲ ಭಕ್ತಪದಪದ್ಮಮಧುಕರಪುಣ್ಯ
ಸದನ ಗುಬ್ಬಿಯ ಮಲ್ಲಣಾರ್ಯರ ಕೃಪಾಪಾತ್ರ
ಮುದಿತ ನವರಸಭರಿತ ಲಕ್ಷಣಾಲಂಕಾರನಿಪುಣನೆಂದೆನಿಸಿ ಮೆರೆವಾ।
ಚದುರ ಚೇರಮನೊರೆದ ಚೇರಮಚರಿತ್ರಮಂ
ಪದಪಿನಿಂ ಬರದೋದಿ ಕೇಳಿ ವಿಸ್ತರಿಸುವ
ಗೊರ್ದಗಿ ತಪುರ್ದಾಯುರಾರೋಗ್ಯ ಸಂಪದ ಸರ್ವಸಿದ್ಧಿ ಸತ್ಯಂ
ಸತ್ಯವು ॥೩೫॥

Remarks :

ಚೇರಮಾಂಕಕವಿಕೃತವಾದ ಚೇರಮಕಾವ್ಯದ ಸಂಧಿಗಳ ಆರಂಭದ 35 ನಾಂದಿಪದ್ಯಗಳನ್ನು ಇಲ್ಲಿ ಆರಿಸಿಕೊಡಲಾಗಿದೆ.

The work contains 35 stanzas in *Ṣaṭpadi* metre. These stanzas are taken from Cērama kāvya written by Cēramāṅka.

Sl No 40. ಜ್ಯೋತಿಷ್ಯ (?) [ವೈದ್ಯ]
JYŌTIṢYA (?) [VAIDYA]

MS. No. 946. Author : ? Form : Prose. Substance : Palm-leaf. Size : $10\frac{1}{2}'' \times 2''$. Character : Kannaḍa. Folios : 72. Lines on a page : 9. Letters in a line: 50. Appearance: Old. Condition: Defective. Complete or incomplete : Incomplete.

Beginning :

ಶ್ರೀಗಂಧವನ್ನು ಕರಿಕೆಯ ಬೇರಿನ ರಸವನ್ನು ಸಮಗೊಂಡು ಹಿಂದಣ
ಪ್ರಮಾಣಿನಲ್ಲು ಲೇಪವಂ ಮಾಡಲು ಪಿತ್ತಜ್ವರಂ ಮೊದಲಾದ
ದೇಹದ ಸಂತಾಪ ವಾಮನ ವಿರೇಚನಂಗಳು ಮಾಣ್ಗುಂ ॥
ಮೇಘನಾಥಸ್ಯ ಮೂಲಾಂಬು ಶ್ರೀಖಂಡಂ ಗಂಧ ಲೋಳಿತಂ । ಪಿತ್ತಜ್ವರ
ಹರಂ ಪತ್ಯಂ ಸರ್ವಜ್ವರ ಹರಂ ಹರಂ ॥

End :

......ನಾಲ್ವರು ಕೂಡಿಕೊಂಡು ಬಲದೇವರ ಕೈಯಬಟ್ಟಲಂ
ಬೇಡಿಕೊಂಡು । ಶ್ರೀಕೃಷ್ಣದೇವರು ಬಟ್ಟಲಂ ಮಂತ್ರಿಸಲಿಕೆ । ಒಡೆಯ
ಶಂಕರನೆಲ್ಲಿಯಾದರೂ ಹೋಗಿದ್ದನೆ । ಅಲ್ಲಿಹೋಗಿ (ಶಂಡಿ) ಯಲ್ಲಿ
ಬಹಂ ಒಡೆಯ ಶಂಕರನೆಲ್ಲಿಯಾದರೂ ಹೋಗಿದ್ದನೆ? ಹುಸಿ ಯದಿರು
ಹುಸಿದೆಯಾದರೆ ಮೂವತ್ತು ಮೂರು ಕೋಟಿ
ಸಿದ್ಧರಾಣೆ । ಸೀಘ್ರಂಪರಿ ಸೀಘ್ರಂಪರಿ । ಸ್ವಾಹಾಂ ಅಂಗಯ್ಯ ಮು......
..... ಮುಂಗೈಯ ಮಣಿನಾಗನಾಗಿ......

Remarks :

ಮಧ್ಯದಲ್ಲಿ 35 ಓಲೆಗಳು ಕಳೆದು ಹೋಗಿವೆ. ಕೆಲವು ಓಲೆ
ಗಳು ಮುರಿದಿವೆ. ವಿವಿಧವ್ಯಾಧಿಗಳಿಗೆ ಮತ್ತು ಶೂಲೆಗಳಿಗೆ

ಚಿಕಿತ್ಸೆ, ಔಷಧಿಗಳ ತಯಾರಿ ಮತ್ತು ಅವುಗಳ ಪ್ರಯೋಗ ಇದರಲ್ಲಿ ಹೇಳಿದೆ. ಸಂಸ್ಕೃತದಿಂದ ಪ್ರಮಾಣಪದ್ಯಗಳನ್ನು ಕೊಡಲಾಗಿದೆ. ಸ್ವಪ್ನಭಯ, ನೆರಳಿನ ಭೀತಿ, ಹಾಸಿಗೆಯಲ್ಲಿ ಉಚ್ಚೆ ಹೊಯ್ಯುವುದು, ಇರುಳುಗಣ್ಣು ಮತ್ತು ಮಕ್ಕಳವ್ಯಾಧಿಗಳು ಇವುಗಳಿಗೆ 'ಯಂತ್ರ' ಚಿಕಿತ್ಸೆಯನ್ನು ಹೇಳಿದೆ.

The work deals with cure for diffrent kinds of pains and sicknesses, preparation of medicines etc.

Sl. No. 41. ದೀಪದ ಕಲಿಯಾರ ಕಾವ್ಯ (ಸಂಗೀತ ಸಕೃತಿ)

DĪPADA KALIYĀRA KĀVYA

MS. No. 1169 (B). Author: Cennamalleśa. Form: Sāṅgatya. Substance: Palm-leaf. Size: $6\frac{1}{2}'' \times 2''$. Character: Kannaḍa. Folios: (?). Lines on a page: 11. Letters in a line: 30. Appearance: Old. Condition: Good. Complete or incomplete: Incomplete. See K.K. Vol. II, p. 544.

Beginning: folio 1

ಶ್ರೀಮದಗಜವರಪ್ರೇಮನಿತ್ಯಾನಂದಾ ।
ಕೋಮಲಾಂಗನೇ ವ್ಯೋಮಕೇಶ ।
ಕಾಮನಿರ್ಧೂಮ ಶ್ರೀರಾಮಲೋಚನಪಾದ
ಸೋಮಶೇಖರ ಜಯ ಜಯತೂ ॥೧॥

End: folio 48

ಮನದೊಳು ನೆನೆದರೆ ಚಿನುಮಯ ಬರಬೇಕು ।
ಎನುತಲಿ ಕಟ್ಟಳೆಮಾಡಿ ।
ಘನಪದ ಪಡದನು ವನಜಾಕ್ಷಿ ಹಡಪದ- ।
ಯ್ಯನು ಮೇರುಗಿರಿಗೆ ಕೊಂಡೊಯ್ದ ॥೧೩೬॥
ಇಂತು ಕಥೆಯನಂತ ಕಾಂತೆಗರುಹಿ ಪುಷ್ಪ
ದತ್ತನಿದ್ದೆಡೆಗೆ ಶಿವ ಬಂದು ।

ದಂತಿಗಮನೆಯೆ ಕೇಳು ಸಂತೋಷದಿಂದಲಿ ।
ಪಂಕ್ತಿ ಮುಗಿಯೆ ಆರುಸಂಧಿ ॥೧೩೭॥

Remarks :

ಅರುವತ್ತುಮೂವರು ಪುರಾತನರಲ್ಲಿ ಒಬ್ಬನಾದ 'ದೀಪದ ಕಲಿಯಾರ್ಯ'ನ ಚರಿತೆಯನ್ನು ಇಲ್ಲಿ ಹೇಳಿದೆ. ಕವಿಚರಿತೆಯಲ್ಲಿ ಈ ಕೃತಿಯನ್ನು 'ಸಂಗೀತಸತ್ಕೃತಿ' ಎಂದಿದೆ. ಶಿವಸ್ತುತಿಯಿಂದ ಕೃತಿ ಆರಂಭವಾಗುತ್ತದೆ. ಪೂರ್ತಿ ಕೃತಿಯಲ್ಲಿ 9 ಸಂಧಿಗಳಿದ್ದು 1116 ಪದ್ಯಗಳಿವೆಯೆಂದು ಕವಿಚರಿತೆಯಲ್ಲಿ ಹೇಳಿದೆ; ಆದರೆ 6 ಸಂಧಿಗಳು ಮಾತ್ರ ಪೂರ್ತಿ ಇದ್ದು ಕೃತಿ ಅಸಮಗ್ರವಾಗಿದೆ.

This work depicts the life of Dīpada Kaliyārya, one of the Sixtythree Ancients. This work is known as 'Saṅgīta Satkṛiti' also.

Sl. No. 42 ದೇವೀ (ಸ್ತೋತ್ರದ) ನಾಂದ್ಯ

DĒVĪ (STŌTRADA) NANDYA

MS. No. 1134 (X). Author : Gurusiddha. Form : Vṛitta. Substance : Palm-leaf. Size : 10″ × 2″. Character : Kannaḍa Folios : 3. Lines on a page : 11. Letters in a Line : 53. Appearance : Old. Condition : Good. Complete or incomplete : Complete. See. K.K. Vol. II, 576.

Beginning : folio 89

ತೋಟಕ ॥ ಕರಿರಾಣ್ಮುಖಷಣ್ಮುಖಮಾತೆ ಮನೋ
ಹರ ಮಂದರ ಮಂದಿರೆ ಶೌರಿನುತೆ
ತರುಣಾರುಣ ಭಾಸುರಕಾಂತಿಯುತೆ
ಕರುಣಾಗೆನಗಂಬಿಕೆ ಶೈಲಸುತೆ ॥೧॥

ಪರಮಾನಂದ ಪಯಸ್ತರಂಗಿಣಿ ಲಸತ್ಕಲ್ಯಾಣಿ ವಾಣಿ ಮೃದು
ಸ್ವರವೀಣಾರಣಿತಪ್ರಣಿತಭಣಿತೇ ಪ್ರಸ್ತಾವದತ್ತಾವಧಾ

ನೆ ರಮಾಪಾಣಿಪಯೋಜದತ್ತ ಫಣಿವಲ್ಲೀಪತ್ರೆ ಸರ್ವಾಣಿ ಗೀ
ರ್ವರ ಪದ್ಮೇಕ್ಷಣವಂದೆ ದೇವಿ ಪೊರೆಯೆನ್ನಂ ಭೂಧರೇಂದ್ರಾತ್ಮಜೇ ॥೭॥

End : folio 92

ಪೃಥ್ವೀ ॥ ಸುಪರ್ಣರಥಪೂಜಿತೆ ಸುಕರಕೀರ್ತಿವಿಭ್ರಾಜಿತೆ
ಕೃಪಾರಸತರಂಗಿಣಿ ಕುಪಿತದೈತ್ಯಸಂಹಾರಿಣಿ
ಕಪರ್ದಿಹೃದಯಪ್ರಿಯೆ ಕನಕವರ್ಣೆ ಸಚ್ಚಿನ್ಮಯೆ
ಜಪಾಕುಸುಮರುಚಿವ್ರಜೆ ಜನನಿ ಪಾಲಿಸದ್ರೀಂದ್ರಜೆ ॥೪೨॥
ದೇವಿನಾಂದ್ಯ ಸಂಪೂರ್ಣಂ

Remarks :

ವಿವಿಧಬಗೆಯ ವೃತ್ತಗಳಲ್ಲಿ ಪಾರ್ವತಿಯನ್ನು ಸ್ತುತಿಸಲಾಗಿದೆ. ಕವಿಚರಿತೆಯ ಪ್ರಕಾರ ಈ ನಾಂದ್ಯದಲ್ಲಿ 65 ಪದ್ಯಗಳಿರಬೇಕು; ಆದರೆ ಇಲ್ಲಿ 42 ಮಾತ್ರ ಇವೆ. ಗುರುಸಿದ್ಧ ಅಥವಾ ಇಮ್ಮಡಿ ಮುರಿಗೆಯಸ್ವಾಮಿ ರಚಿತವಾದ 'ಹಾಲಾಸ್ಯಪುರಾಣ'ದ ಸಂಧಿಗಳ ಮುಕ್ತಾಯಭಾಗಕ್ಕೆ ಈ ವೃತ್ತಗಳು ಸೇರಿದುವಾಗಿರಬೇಕೆಂದು ಕವಿಚರಿತೆಕಾರರು ಊಹಿಸುತ್ತಾರೆ.

This is a Stōra written in different Vṛittas in Praise of pārvati. Kavicarite guesses that these Vṛittas may be from the concluding part of the sandhis in 'Hālāsya Purāṇa', written by Gurusiddha. The work is notable for its extensive use of various Vṛittas.

Sl No 43. ಧನಶಿಲ್ಪಿ
DHANAS'ILPI

MS. No. 1075 (B). Author : Baṅgārada Basappa. Form : Prose. Substance : Palm-leaf. Size : $14\frac{1}{2}'' \times 2\frac{1}{4}''$. Character : Kannaḍa. Folios : 10. Lines on a page : 5. Letters in a line : 55. Appearance : Modern.

Condition: Good. Complete or incomplete: Incomplete.

Beginning:

ಶ್ರೀಗುರುಶಾಂತವೀರಸ್ವಾಮಿಗಳ ಪಾದವೇಗತಿ । ಹಂಪೆಯು ಸ್ಥಳದಲ್ಲಿ ಪೂರ್ವದಲ್ಲಿ । ಲಕ್ಕಣ್ಣ ಮಾದಣ್ಣನೆಂಬ ಋಷಿಗಳು ವಿರೂಪಾಕ್ಷಲಿಂಗನ ಪೂಜೆ ಮಾಡಿ ಧನಶಿಲ್ಪಿ ಎಂಬೋ ಶಾಸ್ತ್ರ ನಿರ್ಮಾಣ ಮಾಡಿದರು । ಬಂಗಾರದ ಬಸಪ್ಪ ಹೇಮಕೂಟದಲ್ಲಿ ಪೂಜೆಮಾಡಿ ಧನಶಿಲ್ಪಿಯಂ ಬರೆದರು......

End:

ಈ ದ್ರವ್ಯ ತೆಗೆಯುವದು ಮಾರ್ಗಸಿರ ಪೌಷ್ಯದಲ್ಲಿ ವಶವಾಗುವದು । ೭೬ । ಸೂಳಿಕೇರಿ ಕೆರೆಕೋಡಿಯ ಮೇಲೆ ನೆಟ್ಟಕಲ್ಲುಂಟು ಆದರ ಬುಡಕ್ಕೆ [illegible]೦೦೦ ಹಣವುಂಟು । ಬಲಿ । ರಸಬಾಳೆ ಹಂಣು ಎರಡುಕಾಯಿ, ನೆಲಿಗಡಲಿ, ಎಳ್ಳುಹೋಳಿಗಿ, ಕಬ್ಬುಕೊಟ್ಟುತಗೊಂಬುವದು ॥ ೭೭ ॥ ಅಂಮಳೇ ಒಳಗೆ ಕಲ್ಲೇಶ್ವರದೇವರ ಗುಡಿಯುಂಟು.

ಆ ಗುಡಿಯೊಳಗೆ ರಂಗಮಧ್ಯ ಉಂಟು । ಆಚೌಕ

Remarks

ಪೂರ್ವದಲ್ಲಿ ಲಕ್ಕಣ್ಣ ಮಾದಣ್ಣರೆಂಬ ಋಷಿಗಳು ಹಂಪೆಯಲ್ಲಿ ವಿರೂಪಾಕ್ಷನನ್ನು ಪೂಜಿಸಿ 'ಧನಶಿಲ್ಪಿ' ಅಥವಾ 'ಗುಪ್ತನಿಧಿ' ಎಂಬ ಶಾಸ್ತ್ರವನ್ನು ಕಂಡುಹಿಡಿದರು. ಈ ಶಾಸ್ತ್ರವನ್ನು ಬಂಗಾರದ ಬಸವಪ್ಪನೆಂಬವನು ಹೇಮಕೂಟದಲ್ಲಿ ಬರೆದನು. ಅದನ್ನೇ ಇಲ್ಲಿ ಹೇಳಿದೆ.

ಭೂಮಿಯ ಒಳಗೆ ಗುಪ್ತನಿಧಿಗಳಿರುವ ಜಾಗಗಳನ್ನೂ, ಅವುಗಳನ್ನು ಪಡೆಯುವ ಸಮಯ ಮತ್ತು ಅವುಗಳನ್ನು ಪಡೆಯಬೇಕಾದರೆ ಕೊಡಬೇಕಾದ ಬಲಿಗಳನ್ನೂ ಇದರಲ್ಲಿ ಹೇಳಿದೆ.

The work deals with the science of hidden treasure.

Sl. No. 44. ಧನಶಿಲ್ಪಿ

DHANAS'ILPI

MS. No. 1122. Author: ? Form: Prose. Substance: Palm-leaf. Size: 10″×2″. Character: Kannaḍa. Folios: 20. Lines on a page: 8. Lettres in a line: 40. Appearance: Old. Condition: Good. Complete or incomplete: Complete.

Beginning: folio 1

ಹಂಪೆಸ್ಥಳದಲ್ಲಿ ಪೂರ್ವದಲ್ಲಿ ಆಕ್ಕಣ್ಣ ಮಾದಣ್ಣನೆಂಬ ರುಷಿಗಳು ವಿರುಪಾಕ್ಷ
ಲಿಂಗನ ಪೂಜೆಮಾಡಿ ಧನಶಿಲ್ಪಿಯೆಂಬೊ ಶಾಸ್ತ್ರನಿರ್ಮಾಣ ಮಾಡಿ ದರು.
ಬಂಗಾರದ ಬಸಪ್ಪಾ ಕಳಂದ ಬಸಪ್ಪಾ ಹೇಮುಕೂಟದಲ್ಲಿ ಪೂಜೆ ಮಾಡಿ ಧನಶಿಲ್ಪಿ
ಯಂ ಬರೆದರು. ಹಂಪಿ- ಬಂಗಿನ ಮರಡಿಯುಲ್ಲಿ ನಟ್ಟ ಕಲ್ಲು ಲಿಂಗವೆಂಬು
ದುಂಟು. ಆ ಲಿಂಗದ ಮೇಲೆ ಮುಂದೆ ಗಜಆಳತಿ ಪ್ರಮಾಣ ಆಗಿಯುಲು
ಸಾವಿರ ನಾಲ್ಕು ಹಣವುಂಟು । ಬಲಿ ।

End: folio 20/2

ನಂದಿವಾಡಗಿ ಪಶ್ಚಿಮದಿಕ್ಕಿನಲ್ಲಿ ಲಿಂಗವುಂಟು. ಲಿಂಗದ ಮುಂದೆ ನಾಗರಕೆಳಗೆ
ಕಂಠಪ್ರಮಾಣದಲ್ಲಿ ದ್ರವ್ಯವುಂಟು. ೫ ಬಕ್ಷ ॥ ೧೫೯ ॥ ಮುಸಕಿ ಕರಡಕಲ್ಲ
ನಾಡವಳಗೆ ಮುಸಕಿ ಎಂಬ ಊರು ಉಂಟು. ಅಲ್ಲಿ ಮಳ್ಳೆದೇಗುಲ ನಂದಿಯು
ಬಿಂಬದೊಳು ೫ ಸಾವಿರ ಹೊನ್ನುಂಟು. ಆದರೊಳಗೆ ೧೯ ಮಾಣಿಕವುಂಟು । ಬಲಿ ।
ಎಳ್ಳ ಚಿಗಳಿ । ೧೬೦ । ಹರದನೂರ—ಹರದನೂರ ಸೋಮನಾಥ ದೇಗುಲದೊಳು

ಎಡಭಾಗ ವಿನಾಯಕವುಂಟು ಆತನ ಕೆಳಗೆ...ಹತ್ತು ಸಾವಿರ ಹೊನ್ನುಂಟು
ತಂಗಳು ವಾಗರ ಹಾಲು ॥ ೧೬೧ ॥....

Remarks :

ಇದೂ ಓಲೆಯಪ್ರತಿ 1075 (B) ನಂಬರಿನದೂ ಒಂದೇ ಕೃತಿ. ಇಲ್ಲಿಯದು ಸಮಗ್ರ. ಅಲ್ಲಿಯದು ಅಸಮಗ್ರ.

Ms. No. 1075 (B) and this work are one and the same.

Sl. No. 45 [ಧನಶಿಲ್ಪಿ] (?)
[DHANAS'ILPI]

MS. No. 1054. Author : ? Form : Prose. Substance : Palm-leaf. Size : $10\frac{1}{2}'' \times 1\frac{1}{4}''$. Character : Kannaḍa. Folios : 19. Lines on a page : 4. Letters in a line : 48. Appearance : Modern. Condition : Good. Complete or incomplete : Incomplete.

Beginning :

ಮಂಕಣಿಯೊಳಗೊಂದು ದೇಗುಲವುಂಟು । ಅದರೊಳು
ಒಂದು ಮಾಡವುಂಟು । ಆಮಾಡಕ್ಕೆ ಅಡ್ಡಗಲ್ಲುಗಳು ಉಂಟು ॥
ಅದರೊಳ. ಒಂದು ಚವುಕು ಕಲ್ಲು ಉಂಟು. ಅದರೊಳಗೆಕೆಳಗೆ
ನಾಭಿಪ್ರಮಾಣದಲ್ಲಿ ಒಂದು ಕೊಪ್ಪರಿಗೆ ಹೊನ್ನುಂಟು । ಇದಕ್ಕೆ
ಕೋಣ ಕುರಿಬಲಿ ಅರಿಷಣ ಮಂಡಲ ರವಿವಾರ ಸಿದ್ಧಿ

End :

...ಜಗತ್ತು ಸ್ವಾಧೀನ ಮಾಡಿಕೊಂಡು ಛತ್ರಪತಿಯಾಗಿ
ಆಳಲಿಕ್ಕೆ ಬರುವಂತೆ ನಿತ್ಯನೇಮಗಳುಂಟು......
೧೦೧ ಮಹಾನ್‌ಮುಷಿಗಳು ಸೂರ್ಯಗ್ರಹಣದಿವಸ ಏಕಕಾಲಕ್ಕೆ
ಕೂಡಿಕೊಂಡು ೧೦೧ ತಿಂಗಳು ೧೦೧ ತಾಸು ೧೦೧ ಗಳಿಗೆ ದರ
ದಿವಸ ಪಂಚಾಮೃತ ನೈವೇದ್ಯ ಮಾಡಬೇಕು । ಕಡೆದಿನ ೧೦೧

ಪಶುಗಳ ಅರ್ಪಣಾಕೊಟ್ಟು ಏಕಕಾಲಕ್ಕೆ ೧೦೧
ಋಷಿಗಳು ಕೂಡಿಕೊಂಡು ದೇವಿಸ್ತೋತ್ರ ಮಾಡಿದ ಕೂಡಲೆ ಗಂಭೀರ
ಧ್ವನಿಯಿಂದ ಬಾಗಿಲ ತೆಗೆಯಲ್ಪಡುತ್ತದೆ. ಮುಂದೆ ಪ್ರವೇಶ ಮಾಡಿದ ಕೂಡಲೇ ಅಲ್ಲೀ ಇರತಕ್ಕ ಋಷಿಗಳೆಲ್ಲರೂ ವಶವಾಗುತ್ತಾರೆ.

ಇದು ಸಿದ್ಧಾಂತ

Remarks :

ಪ್ರಾರಂಭದ ನಾಲ್ಕು ಓಲೆಗಳು ಅಂತ್ಯದ ಒಂದು ಓಲೆ ಖಾಲಿ ಇವೆ. ಇದರಲ್ಲಿ ಕವಿ ಹೊನ್ನಿನ ನಿಕ್ಷೇಪಗಳಿರತಕ್ಕ ಜಾಗಗಳನ್ನೂ, ಆಹೊನ್ನನ್ನು ಪಡೆಯಬೇಕಾದರೆ ಸಂಬಂಧಪಟ್ಟ ದೇವತೆಗಳಿಗೆ ಕೊಡಬೇಕಾದ ಬಲಿಗಳನ್ನೂ ಹೇಳುತ್ತಾನೆ.

The work deals with the science of hidden treasure.

Sl. No. 46. ನಮಃಶಿವಾಯರಗಳೆ
NAMAḤS'IVĀYARAGAḶE

MS. No. 1116 (F). Author : ? Form :Ragaḷe Substance : Palm-leaf. Size : 7¼″ × 2″. Character : Kannaḍa. Folios : 2. Lines on a page : 10. Letters in a line : 38. Appearance : Old. Condition : Good. Complete or incomplete : Complete.

Beginning: folio 18

। ಕಂದ । ಶ್ರೀಮತ್ಪಂಚಾಕ್ಷರಿಯನು ।
ಪ್ರೇಮದಿ ನಲಿದೋದಿವರ್ಗೆ ಭವಭಯ ಹರಿಪ್ಪುದು॥
ಕಾಮಾರಿಯೊಲಿದು ಮುಕ್ತಿಯ ।
ನೀವರುಪದೇಶವಿಡಿದು ಗುರುಮುಖದಿಂದಂ ॥ ೧ ॥
। ರಗಳೆ । ಶ್ರೀಮದಾಮರಾಜರಾಜಸೋಮಧರ ನಮಃಶಿವಾಯ ॥ ೧ ॥
ಭೀಮಭರ್ಗವಾಮದೇವಕಾಮಹರ ನಮಃಶಿವಾಯ ॥ ೨ ॥

End : folio 19

। ಕಂದ । ಈಶನ ಪಂಚಾಕ್ಷರಿಯ ವಿ ।
ಲಾಸದಿ ಭಜಿಸರ್ಗೆ ದುರಿತನಿರ್ವರ್ಕ್ಷನುಂ ।
ರೋಷಪಾಶಂಗಳು ಹರಿವುದು ಅಘ
ನಾಶನ ನೀಂಭಜಿಸಿ ಮುಕ್ತಿವಡೆವುದು ತನುಜಾ ||

Remarks :

ಕವಿಯ ಹೆಸರು ಎಲ್ಲಿಯೂ ಉಕ್ತವಾಗಿಲ್ಲ. ಇದು ಶಿವನ ಸ್ತೋತ್ರರೂಪವಾಗಿದೆ. ಇದರಲ್ಲಿ 46 ಪಾದಗಳಿಂದ ಕೂಡಿದ ರಗಳೆ ಇದೆ. ರಗಳೆಯ ಪ್ರತಿಪಾದವೂ 'ನಮಃಶಿವಾಯ' ಎಂದು ಅಂತ್ಯವಾಗುತ್ತದೆ. ಆರಂಭದಲ್ಲಿ ಮತ್ತು ಅಂತ್ಯದಲ್ಲಿ ಒಂದೊಂದು ಕಂದ ಪದ್ಯಗಳಿವೆ.

Karṇāṭaka Kavicarite does not mention the name of this work. The work deals with the Stōtra of five-lettered God Śiva in 46 lines of Ragaḷe. Each line of Ragaḷe ends with 'ನಮಃಶಿವಾಯ'.

Sl. No. 47. ನಾನಾರ್ಥ ಕಂದ
NĀNĀRTHA KANDA

MS. No. 1098 (D). Author : Cennakavīndra. Form : Kanda. Substance : Palm-leaf. Size : 7″×2″. Character : Kannaḍa. Folios : 6. Lines on a page : 9. Letters in a line : 32. Appearance : Old. Condition : Good. Complete or incomplete : Incomplete. See K.K. Vol. II, p. 346.

Beginning :

। ಕಂದ । ಶ್ರೀರಮಣೀಕುಚಮಂಡಲ
ಪೂರಿತ ಸೌಗಂಧ ಬಂಧುರಾಂಕಿತವಕ್ಷೋ ।
ರಾರಾಜಿತ ಘನ ಸಾಮ್ಯಮ–
ನೋರವ್ಯ ಸುಕಾಯಶರಣು ಚೆನ್ನಿಗರಾಯಾ ॥೧॥

End:

ಸಾಮಾನ್ಯಂ ಪುಣ್ಯಂ ಸು
ತ್ರಾಮಂ ಘನಬಹಳ ಸುರಪದಂತಿಸಮೂಹಂ ।
ಸಾಮಜ ಮಳೆಯೊಂಬತ್ತುಂ
ಭೂಮಿಗೆ ಪೊಸತೆನಿಸುತಿಹ ಘನಾಘನಶಬ್ದಂ ॥

Remarks:

ಪದಗಳಿಗೆ ಬೇರೆ ಬೇರೆ ಅರ್ಥಗಳನ್ನು ಕಂದಪದ್ಯದಲ್ಲಿ ಹೇಳಿದೆ. ಇದರಲ್ಲಿ ಎರಡು ವಿಭಾಗಗಳಿರಬೇಕೆಂಬುದಾಗಿ ತೋರುತ್ತದೆ. ಮೊದಲನೆಯ ಭಾಗದಲ್ಲಿ 55 ಪದ್ಯಗಳಿವೆ ಮಧ್ಯದಲ್ಲಿ ಕೆಲವು ಕೆಲವು ಓಲೆಗಳು ಕಳೆದುಹೋಗಿವೆ. ಎರಡನೆಯ ಭಾಗದಲ್ಲಿ 44 ಪದ್ಯಗಳಿವೆ. ಕೊನೆಯ ಪುಟದಲ್ಲಿ "ನಾನಾರ್ಥ ಸಮಾಪ್ತ" ಎಂದಿದೆ. ಮೊದಲನೆಯ ಪುಟದ 5 ನೆಯ ಪದ್ಯದಲ್ಲಿ "ನಾನಾರ್ಥ ಕಂದಪದ್ಯವ ಪೇಳ್ವೆಂ" ಎಂದಿದೆ. ಆದುದರಿಂದ ಕೃತಿಯ ಹೆಸರು 'ನಾನಾರ್ಥ' ಅಥವಾ 'ನಾನಾರ್ಥಕಂದಪದ್ಯ' ಎಂದಿರಬೇಕು.

Different meanings for different words are given in Kanda padya. It seems that the work is in two parts.

Sl. o. 48. ನಾಂದ್ಯದ ಪುಸ್ತಕ
NĀNDYADA PUSTAKA

MS. No. 1173. Author: Different authors. Form: Ṣatpadi. Substance: Palm-leaf. Size: $9\frac{1}{4}'' \times 2''$. Character: Kannaḍa. Folios: 5. Lines on a Page: 11. Letters in a line: 32. Appearance: Old. Condition: Good. Complete or incomplete: Complete.

Beginning: folio 1

ಭಾ. ಷ॥ ಶ್ರೀಮದತುಳಾನಂದೆ ಶುಭಕರೆ
ವಾಮಲೋಚನೆ ವರದವಂದಿತೆ
ರಾಮಕುಂತಳೆ ರಸಿಕಮೋದುರೆ ರಾಜಮಂತ್ರಾಂಗಿ ॥

ಸೋಮಮುಖಿ ಸನ್ಮಾನ್ಯೆ ಸುಗುಣ
ಸ್ತೋಮಮಂದಿರೆ ಸಾರಸೌಂದರಿ
ಸೋಮಗಂಧಿನಿ ನೀಲಲೋಚನೆ ಪಾಲಿಸೆಲೆ ತಾಯೆ ॥೧॥

End : folio 5

ವಾ.ಷ ॥ ಉರಿಯೊಳಗೆ ಕರ್ಪುರಂ ಬೆರೆದಂತೆ ತನ್ನ ಮಳ
ಕರಕಂಜಪುರವಾಸ ಮದಯಿಷ್ಟಲಿಂಗದೊ
ಳ್ಬೆರದು ಬೇರಿಲ್ಲದಿಹ ನೀಲಾಂಬಿಕಾಲಲಿತಪಂಚವಿಂಶತಿನುತಿಗಳಂ।
ಬರದೋದಿ ಕೇಳಲರಿವರ್ಗೆ ವೈಕಾರಮದ
ಕರಣಂಗಳಳಿದು ವರಭಕ್ತಿಷಟ್ಕಲಾಷ್ಟ
ಪರತರಾವರಣ ಪಂಚಾಚಾರವಳವಟ್ಟು ನಿಜಮುಕ್ತರಹರು ನಿರು
ತಂ ॥೨೫॥

Remarks :

ಈ ಗ್ರಂಥದ ಪ್ರತಿಕಾರ ಸಾವಳಗಿ ಕಡೆ ಮಡಿವಾಳಪ್ಪನವರ ಶರೀರೋದ್ಭವನಾದ ಗುರುಶಾಂತಮಟು (folio 180). ಇದೇ ಪ್ರತಿಯಲ್ಲಿ ನೀಲಾಂಬಿಕಾಲಲಿತಸ್ತೋತ್ರವಾದ ಮೇಲೆ ಷಡ್ವಕ್ತ್ರ ಮುರಿಗಾಸ್ವಾಮಿಗಳ ನಾಂದ್ಯ ಮೊದಲಾದುವಾಗಿ ಜ್ಞಾನೋದಯ ಷಟ್ಪದಿ, ಬಿರುದಾವಳಿವರೆಗೆ ಇನ್ನೂ ಕೆಲವುಗ್ರಂಥಗಳಿವೆ.

ಮೇಲೆ ನೀಲಾಂಬಿಕಾಸ್ತೋತ್ರದ ಆದ್ಯಂತಪದಗಳನ್ನು ಕೊಟ್ಟಿದೆ. ನೀಲಾಂಬಿಕಾಸ್ತೋತ್ರವಾದ ಮೇಲೆ ಈ ಕೆಳಗೆ ಕಾಣಿಸಿದ ನಾಂದ್ಯಗ್ರಂಥಗಳಿವೆ :

1. ಷಡ್ವಕ್ತ್ರ (folio 6) 2. ಮುರಿಗಾಸ್ವಾಮಿಗಳನಾಂದ್ಯ (folio 6) 3. ಗುರುಸಾಂಪ್ರದಾಯಕದ ನಾಂದ್ಯ (folio 11) 4. ಲೋಚಿನ ಸಿದ್ಧಲಿಂಗಸ್ವಾಮಿಗಳು ಮಾಡಿದ ಗುರುಸ್ತೋತ್ರನಾಂದ್ಯ (folio 13) 5. ಕಪ್ಪಿನನಂಜಯ್ಯನವರು ಮಾಡಿದ ನಾಂದ್ಯ (folio 15) 6. ಮುರಿಗೆಯ ಶಾಂತವೀರೇಶ್ವರಸ್ವಾಮಿಗಳ ಸ್ತೋತ್ರ (folio 18), 7. ಸಿದ್ಧೇಶ್ವರನ ಪುರಾಣದ ನಾಂದ್ಯ (folio 20), ಮರುಳಸಿದ್ಧಸ್ವಾಮಿಗಳು ನಿರೂಪಿಸಿದ ನಾಂದ್ಯ (folio 21), ಕಾರಣಾಗಮದ ನಾಂದ್ಯ (folio 25), ಬಸವೇಶ್ವರನ ಪುರಾಣದನಾಂದ್ಯ (folio 29),

ಸೋಮೇಶ್ವರನ ಪುರಾಣದ ನಾಂದ್ಯ (folio 32), ಸೋಮನಾಥನ ಕಾವ್ಯದ ನಾಂದ್ಯ (folio 34), ಸಿದ್ಧೇಶ್ವರನ ಪುರಾಣದ ನಾಂದ್ಯ (folio 36), ಸೌಂದರಪುರಾಣದ ನಾಂದ್ಯ (folio 39), ಚೇರಮಾಂಕನಕಾವ್ಯದ ನಾಂದ್ಯ (folio 43), ಪಂಚಶಿಖಾಗಮದ ನಾಂದ್ಯ (folio 47), ಗುರುಚಾರಿತ್ರ್ಯದ ನಾಂದ್ಯ (folio 50), ಷಟ್ಸ್ಥಲತಿಲಕದ ನಾಂದ್ಯ (folio 53), ಕೊಟ್ಟೂರಯ್ಯನ ಪುರಾಣದ ನಾಂದ್ಯ (folio 57), ಚೆನ್ನಬಸವೇಶ್ವರಪುರಾಣದ ನಾಂದ್ಯ (folio 57), ಪ್ರಭುದೇವರಪುರಾಣದ ನಾಂದ್ಯ (folio 68), ವಸ್ತುಕಪುರಾಣದ ಲಲಿತನಾಂದ್ಯ (folio 79), ಮಲ್ಲೇಶ್ವರನ ನಾಂದ್ಯ (folio 88), ಶಂಕರಸಂಹಿತೆಯ (?) ನಾಂದ್ಯ (folio 97), ಕಂದ ನಾಂದ್ಯ (folio 108), ದೇವೀ ನಾಂದ್ಯ (folio 111), ಹಾಲಾಸ್ಯವಸ್ತುಕಪುರಾಣದಲ್ಲಿಯ ದೇವೀ ನಾಂದ್ಯ (folio 114), ಮಣ್ಣೇಶ್ವರನ ಪುರಾಣದ ನಾಂದ್ಯ (folio 119), ಷಣ್ಮುಖಸ್ವಾಮಿಗಳು ನಿರೂಪಿಸಿದ ನಾಂದ್ಯ (folio 122), ಮುರಿಗಾ ಶಾಂತವೀರಸ್ವಾಮಿಗಳ ವೈರಾಗ್ಯಷಟ್ಪದಿ (folio 128), ಲಿಂಗಸ್ತೋತ್ರದ ಷಟ್ಪದಿ (folio 137), ಮುರಿಗಾ ಶಿವಸಿದ್ಧಸ್ವಾಮಿಗಳು ನಿರೂಪಿಸಿದ ಶಿವಲಿಂಗ ಷಟ್ಪದ (folio 148), ಮಹಿಮಾ ಷಟ್ಪದಿ (folio 159), ಹುಬ್ಬಳ್ಳಿಯ ಸಂಗಯ್ಯನವರು ನಿರೂಪಿಸಿದ ಜ್ಞಾನೋದಯ ಷಟ್ಪದಿ (folio 168).

ಇವುಗಳಾದ ಮೇಲೆ ಬಿರುದಾವಳಿ ಮತ್ತು ಷಡುಲಿಂಗದ ಜಪ ವಿವರ ಇವೂ ಸೇರಿವೆ.

This Ms. contains a collection of Nāndya works, which again are taken from various other independent works. Mostly these works belong to Vīraśaiva literature. Here only the beginning and the end of Nīlāmbika Stōtra is given.

Sl. No. 49 ನಿಜಲಿಂಗ ಶತಕ

NIJALIṄGA S'ATAKA

MS. No. 1048 (A). Author: Nijaliṅga. Form: Ṣaṭpadi. Substance: Palm-leaf. Size: 11″ × 2″. Character: Kannaḍa. Folios: 19. Lines on a page: 8. Letters in a line: 45 Appearance: Modern. Condition: Good. Complete or incomplete: Complete. See K.K. Vol. III, p. 156.

Beginning:

ನಿತ್ಯನಿರುಪಮ ವಿಶ್ವಮೂರ್ತಿ ನಿಜಲಿಂಗೇಶ । ನುತ್ತಮೋತ್ತಮ ಶತಕವನು ತಾನು ಬಲ್ಲಂತೆ।ಬಿತ್ತರಿಪೆ ವಾರ್ಧಿಕ ಷಟ್ಪದಗಳಿಂದ ಮನವಿತ್ತು ಸುಜನರು ಕೇಳ್ವುದು ||

End:

ರುದ್ರಾಣಿಯುರಸ ಕನಕಾದ್ರಿ ಬಾಣಾಸನ ಸಾ । ಮುದ್ರಾತ್ಮಭವ ಮೌಳಿ ಭದ್ರನಾಗಿಪ ವೀರ । ಭದ್ರನಂ ಪಡೆದರ್ಬಲ ಭದ್ರರಾಜನ ಮಿತ್ರ । ಕ್ಷುದ್ರಂಧಕಾಸುರಹಾರಾ । ರುದ್ರನಂ ನಾಕ ಜೋಪದ ಸಂಹಾರ ದುರಿತಾದ್ರಿ ಕುಲಿಶ ತುಂಗಭದ್ರಾತೀರ ದೊಳೆಸೆವ । ಕದ್ರು ಭವಪುರವಾಸ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ||೧೦೦||

Remarks:

ಇದರಲ್ಲಿ 100 ವಾರ್ಧಕ ಷಟ್ಪದಿಗಳಿವೆ. ಪ್ರಾರಂಭದಲ್ಲಿ ಕವಿ ಶಿವ, ಪಾರ್ವತಿ ಮತ್ತು ವೀರಭದ್ರರನ್ನು ಪ್ರಾರ್ಥಿಸುತ್ತಾನೆ. ಪ್ರತಿ ಒಂದು ಪದ್ಯವು ವಿಷಯದ ಮಟ್ಟಿಗೆ ಸ್ವತಂತ್ರವಾಗಿದೆ. ಪ್ರತಿ ಪದ್ಯವೂ 'ನಿಜಲಿಂಗ ಭವಭಂಗ ಶರಣಜನಭಕ್ತಸಂಗ' ಎಂಬುದಾಗಿ ಅಂತ್ಯವಾಗುತ್ತದೆ.

Each stanza ends with 'ನಿಜಲಿಂಗ ಭವಭಂಗ ಶರಣಜನ ಭಕ್ತಸಂಗ'.

Sl. No 50. ನೂರೊಂದು ಸ್ಥಲ (ಏಕೋತ್ತರಶತಸ್ಥಲ)
NŪRONDU STHALA (ĒKOTTARAŚATASTHALA)

MS. No. 1119. Author: Jakkaṇācārya. Form: Prose. Substance: Palm-leaf. Size: 9½″ × 3″. Character: Kannaḍa. Folios: 110. Lines on a page: 15. Letters in a line: 66. Appearance: Old. Condition: Good. Complete or incomplete: Incomplete. See K.K. Vol. II, p. 57.

Beginning : folio 1

ಶ್ರೀ ವಿಶ್ವರ್ರ್ಯೋಪಲಕ್ಷಿತವಾದ ಗುರು । ಸ್ವಯಂಜ್ಯೋತಿಸ್ವರೂಪ ನಾದಂಥ
ಬಸವಲಿಂಗಾಯ ನಮಃ । ಬಸವೇಶ್ವರಂಗೋಸ್ಕರ ನಮಸ್ಕಾರವಂ ಮಾ...
ರ.ಭಪಲ್ಲಿ ಆಚಾರ್ಯ ಗುರು ನಮಸ್ಕಾರವಂ ಮಾಡಿ ಈ ಶಾಸ್ತ್ರ ವನ್ನುದ್ಧರಿಸುತಿದ್ದಾರು ।
ಏಕೋತ್ತರ ಶತಸ್ಥಲ । ಜ್ಞಾನಶೂನ್ಯಸ್ಥಲವೊಂದೇ ಉತ್ತರವಾಗಿ ನೂರುಸ್ಥಲಕೆ
ಕಡೆಯ... ಶಿವನಿಂದ ನಿರೂಪಿಸಲ್ಪಟ್ಟ ಕಾಮಿಕವೆಂಬ ಮಹಾ ಗಮದಲ್ಲಿಯ
ಮೇಲುಭಾಗೆಯಲ್ಲಿ ಶ್ರೇಷ್ಠವಾದ ವೀರಶೈವಮತ...

End : folio 110

......। ನಿಶ್ಶಬ್ದಗಂಭೀರಗುಹೇಶ್ವರಾ ನಿಮ್ಮ ಶರಣ ಬಸವಣ್ಣ । ಜ್ಞಾನಶೂನ್ಯವಾಗಿ
ಮಹಾಲಿಂಗದಲ್ಲಿ ಐಕ್ಯವಾಗಿರ್ದನು । ಬಸವಣ್ಣನೆಂದು ಪ್ರಭು ದೇವರು
ಸ್ತುತಿಸುತ್ತಿರ್ದರೆಂಬುದರ್ಥ ।
ಅಂತು ಐಕ್ಯನ ಮಹಾಲಿಂಗಸ್ಥಲಕ್ಕಂ ಸೇರಿದ ಪದನು ೪೭ಕ್ಕಂ ಮಂಗಳಂ
ಮಹಾ ಶ್ರೀ...... ಅಂತು ಅಂಗಸ್ಥಲ ೪೪ಕ್ಕು ಸೇರಿದ ಪದನು ೨೫೭ಕ್ಕಂ

ಲಿಂಗಸ್ಥಲ ೫೭೬ಕ್ಕಂ ಸೇರಿದ ಪದ ೫೫೭ ಉಭಯಂ ೫೫೦ಕ್ಕಂ । ಏಕೋತ್ತರ ಶತಸ್ಥಲ ಸಮಾಪ್ತಂ । ಮಂಗಳಮಹಾಶ್ರೀ ॥

Remarks :

ಮೊದಲ ಓಲೆಯು ಎಡಭಾಗ ಸು. 1½ ಅಂಗುಲದಷ್ಟು ಮುರಿದು ಹೋಗಿದೆ, ನಷ್ಟವಾಗಿದೆ. ರೇವಣಸಿದ್ಧನು ಅಗಸ್ತ್ಯನಿಗೆ ಹೇಳಿದ ಕಾಮಿಕಾಗಮವನ್ನು ಇಲ್ಲಿ ನೂರೊಂದು ಸ್ಥಲಗಳಲ್ಲಿ ಸಂಗ್ರಹಿಸಿ ಕೊಟ್ಟಿದೆ. ಪುರಾತನರ ಸ್ಥಲವಚನಗಳ ನೆರವಿನಿಂದ ಹೀಗೆ ಮಾಡಿದೆ. ಸೂತ್ರಗಳನ್ನು ಸೇರಿಸಿದೆ. ಒಟ್ಟು 550 ಪದಗಳಿದ್ದು, 253 ಅಂಗಸ್ಥಲಕ್ಕೂ 297 ಲಿಂಗಸ್ಥಲಕ್ಕೂ ಸೇರುತ್ತವೆ.

Kāmikāgama as told by Rēvaṇasiddha to Agastya is abridged here in 101 sthalas with the help of Sthalavacanas of the Ancients.

Sl. No. 51. ಪಂಚಾಶಿಕಾಗಮದ ನಾಂದ್ಯ (ತೋಂಟದ ಸಿದ್ಧೇಶ್ವರನ ಸ್ತೋತ್ರದ ನಾಂದ್ಯ)

PAÑCĀŚIKĀGAMADA NĀNDYA

MS. No. 1134 (O). Author : Gurusiddha Dēśika. Form : Ṣaṭpadi. Substance : Palm-leaf. Size : 10″ × 2.″ Character : Kannaḍa. Folios : 2. Lines on a page : 11. Letters in a line : 51. Appearance : Old. Condition : Good. Complete or incomplete : Complete. See K.K. Vol. III, p. 279.

Beginning : folio 38/2

ಭಾ. ಷ ॥ ಶರಣಜನಪದಸರಸಿಜಕೆ ಷ
ಟ್ಪದನೆನಿಪ ಗುರುಸಿದ್ಧದೇಶಿಕ
ವಿರಚಿಸಿದ ಪಂಚಾಶಿಕೆಯ ಸ್ತೋತ್ರದ ಪದಂಗಳು ॥ಪದ॥

ಕನಕನಗಕೋದಂಡಮನಸಿಜ
ಜನಕಲೋಚನಚರಣಸರಸಿಜ
ಸನಕಮುಖನುತ ಶಿಖಿಗಮನಗಜವರವದನತಾತಾ ।
ವನಜತನಯುವರಪ್ರದಾಯಕ
ಧನಪಸಖ ಸುರನಿಮ್ನಗಾಧರ
ಘನದಯಾರಸವನಧಿಜಯಧವಳಾಂಗ ಶಿವಲಿಂಗಾ ॥೧॥

End : folio 41

ಭಾ. ಷ ॥ ಸರ್ವಧಾರಿಯುವಮಾದ ವರುಷದ
ಖರ್ವವೈಶಾಖದ ಸಿತೋದ್ಭವ
ಪೂರ್ವಪಕ್ಷೇಕಾದಶಿಯ ಶಶಿವಾರದುದಯದೊಳು
ಪರ್ವಪೂರ್ವಕವಾಗಿ ಮುಗಿಯಿ
ತುರ್ವಿವಿಬುಧರು ಮೆಚ್ಚುವಂದದಿ
ಶರ್ವ ಶಿವಲಿಂಗೇಶನಾಜ್ಞೆಯೊಳಿದುವೆ ಶುಭಮಸ್ತು ॥೩೭॥

Remarks :

ಸರ್ವಧಾರಿ ಸಂವತ್ಸರದಲ್ಲಿ ರಚಿತವಾದ, ಆರಂಭದಲ್ಲಿ ಶಿವ ಸ್ತುತಿಯುನ್ನುಳ್ಳ, ಭಾಮಿನಿಷಟ್ಪದಿಯಲ್ಲಿ 13 ಸಂಧಿಗಳುಳ್ಳ 'ಪಂಚಾಶಿಕೆ' ಎಂಬ ಕೃತಿಯ ಉಲ್ಲೇಖವನ್ನು ಕವಿಚರಿತೆಯಲ್ಲಿ ಮಾಡಿದೆ. ಇಲ್ಲಿಯ ಪದ್ಯಗಳು ಕವಿಚರಿತೆಯ ಉಲ್ಲೇಖಕ್ಕೆ ಅನುಸಾರವಾಗಿವೆ. ಕವಿಚರಿತೆಯಲ್ಲಿ ಕೃತಿಕರ್ತನ ಹೆಸರಿಲ್ಲ. ಸೂಚನೆಯ ಪದ್ಯದಿಂದ ಕವಿ 'ಗುರುಸಿದ್ಧದೇಶಿಕ' ಎಂದು ತಿಳಿಯ ಬಹುದು. ಈ ನಾಂದ್ಯಪದ್ಯಗಳು ಆ 'ಪಂಚಾಶಿಕೆ'ಯ ಸಂಧಿಗಳ ಆರಂಭಪದ್ಯಗಳಿರಬಹುದು.

The work contains some Nāndya padas taken from Pañcāśike, a work in 13 sandhis, the author of which is not known. Author of this work may be Gurusiddha Dēśika according to Sūcanapadya.

Sl. No. 52. ಪಂಚಾಶಿಕೆ

PAÑCAŚIKE

MS. No. 1112. Author : ? Form : Ṣaṭpadi. Substance : Palm-leaf. Size : 6″ × 2″. Character : Kannaḍa. Folios : 250. Lines on a page : 9. Letters in a line : 20. Appearance : Modern. Condition : Good. Complete or Incomplete : Complete. See K.K. Vol. III, p. 279.

Beginning :

ಕನಕನಗಕೋದಂಡ ಮನಸಿಜ
ಜನಕಲೋಚನಚರಣ ಸರಸಿಜ
ಸನಕಮುಖನುತಶಿಖಿಗಮನ ಗಜವರವದನತಾತ ।
ವನಜ ತನಯು ವರಪ್ರದಾಯಕ
ಧನಪಸಖಸುರನಿಮ್ನಗಾಧರ
ಘನದಯಾರಸವನಧಿ ಜಯ ಧವಳಾಂಗ ಶಿವಲಿಂಗಾ ||೧||

End :

ನಿಂದು ತುಂಬಿದಹಂ ಪ್ರಕಾಶವೆ
ಸಂದು ವಿಶ್ವಶರೀರವನು ತಾ
ನೆಲಿಂದಿ ಸಾಕ್ಷಾತ್ಕಾರದ ಪರಾಮರ್ಶನವನೆಸಗುತ್ತೆ ।
ಸಂದೆಯುವನಪಹರಿಸಿ ಸತತಾ
ನಂದ ಪರಮಾತ್ಮಕನೆಯಾಗಿಹ
ಚಂದವನು ಪೇಳುವನು ಕೇಳ್ವಾಲ್ಯನೆಯ ಕಂದವಿದು ||
ಪಂಚಾಶಿಕಾಗಮ ಸಮಾಪ್ತ ಮಂಗಳ ಮಹಾಶ್ರೀ

Remarks :

ಕವಿ ತನ್ನ ಹೆಸರನ್ನು ಹೇಳಿಕೊಂಡಿಲ್ಲ. ಕರ್ಣಾಟಕ ಕವಿ ಚರಿತೆಯಲ್ಲೂ ಕವಿಯ ಹೆಸರು ಉಕ್ತವಾಗಿಲ್ಲ. ಕವಿ ಪ್ರಾರಂಭದಲ್ಲಿ ಶಿವ, ಪಾರ್ವತಿ, ತೋಂಟದ ಸಿದ್ಧಲಿಂಗ, ಗುರು, ಗಣಪತಿ, ಕುಮಾರ ಮತ್ತು ಶರಣರನ್ನು ಸ್ತುತಿಸಿದ್ದಾನೆ. 7ನೆಯ ಪದ್ಯ

ವಲ್ಲಿ ಕವಿ ತನ್ನ ಕೃತಿಯನ್ನು ನಾಲ್ಕು ಕಾಂಡಗಳಲ್ಲಿ ಹೇಳುತ್ತೇನೆ ಎಂದಿದ್ದಾನೆ :- (1) ವಿಶ್ವಶರೀರದ ಆತ್ಮ ಈಶ್ವರ. (2) ಶಿವನೇ ವಿಶ್ವ (3) ವಿಶ್ವವೇ ಶಿವನು (4)ಸಂಪತ್ತು. ಈ ಪುಸ್ತಕ 'ಸೂಕ್ಷ್ಮ ಚರಣ ಮಹಾಂತ ದೇಶಿಕೇಂದ್ರ'ನದಾಗಿದೆ.

The work deals with the omnipresence of *S'iva.*

Sl. No. 53. ಪುನರ್ದೀಕ್ಷೆಯ ರಗಳೆ
PUNARDĪKṢEYA RAGAḶE

MS. No. 456 (F). Author : *S'aṅkaradēva* (?). Form : *Ragaḷe.* Substance: Palm-leaf. Size : $8\frac{1}{2}'' \times 1\frac{3}{4}''$. Character : Kanna*ḍ*a. Folios : 12. Lines on a page : 7. Letters in a line: 30. Appearance: Old. Condition: Good. Complete or incomplete : Complete.

Beginning : folio 46

। ಕಂದ । ತಾಮಸದ್ವಿಜರಿಂ ದೀಕ್ಷೆಯ
ಕಾಮಿನಿಯರ ದೀಕ್ಷೆವಿದೀಕ್ಷೆ (?) ಯನಳಿದ ।
ಗರ್ಗ ಮಹಾಗುರುವಿನ ಕರುಣದಿ।
ಪ್ರೇಮದಿ ಪುನರ್ದೀಕ್ಷೆಯ ಪೇಳ್ದ ಶಂಕರಲಿಂಗಾ ॥

ಸಾಕ್ಷಿ । ಜನ್ಮನಾಂ ಜಾಯತೆ ಶೂದ್ರಃ । ಪೂರ್ವಮಾತಾಚ
ಶೂದ್ರತಿ । ನ ಚೋಪದೇಶಗಾಯತ್ರಿ ನ ಚ ಮುಂಜಿ
ನ ಚ ಕ್ರಿಯಾ ॥೨॥

End : folio 57

। ರಗಳೆ । ಶಿವಮಯ ಪುನರ್ದೀಕ್ಷೆ ಹರಹರ ಪುನರ್ದೀಕ್ಷೆ ॥
ಶಿವಶಿವ ಪುನರ್ದೀಕ್ಷೆ। ಹರಹರ ಮಹಾದೇವ ನಸ್ತಿನಸ್ತಿ ನಮಃ ॥
ಕ್ಷಿತಿಮತ ಪುನರ್ದೀಕ್ಷೆ

। ಕಂದ । ಎನ್ನತಿಶಯದಿಂ ಪೊಗಳ್ದಿಂ
ಉನ್ನತಘನಶರಣರಂ ಮನೋರಥದಿಂದಂ ।

ಸನ್ನುತ ಭಕ್ತಿಯನೀವುದು
ಚೆನ್ನಾಗಿಯೆ ಸಲಹು ನಮ್ಮ ಶಂಕರಲಿಂಗಾ ॥

Remarks :

ಕರ್ಣಾಟಕ ಕವಿಚರಿತೆಯಲ್ಲಿ (Vol. II, p. 362) ಕವಿಯ ಹೆಸರು ಹೇಳಿಲ್ಲ. ಪದ್ಯಗಳು 'ಶಂಕರ ಲಿಂಗ' ಎಂಬುದಾಗಿ ಅಂತ್ಯವಾಗುವುದರಿಂದ ಕವಿಯ ಹೆಸರು 'ಶಂಕರದೇವ' ನೆಂಬುದಾಗಿ ಊಹಿಸಲಾಗಿದೆ. ಈ ಕೃತಿಯಲ್ಲಿ 115 ಪದ್ಯಗಳಿವೆ. ಆರಂಭ ಮತ್ತು ಅಂತ್ಯದಲ್ಲಿ ಒಂದೊಂದು ಕಂದ ಪದ್ಯವಿದೆ. ವಿಷಯ 'ದೀಕ್ಷೆ'ಯನ್ನು ಕುರಿತು ಹೇಳುತ್ತದೆ.

The work deals with Vīras'aiva 'Dīkṣa'.

Sl. No. 54 ಪುನರ್ದೀಕ್ಷೆಯ ರಗಳೆ

PUNARDĪKṢEYA RAGAḶE

MS. No. 1159 (H). Author : ? Form : Ragaḷe. Substance : Palm-leaf. Size : 8″ × 2″. Character : Kannaḍa. Folios : 7. Lines on a page : 10. Letters in a line : 40. Appearance: Old. Condition : Good. Complete or incomplete : Complete.

Beginning : folio 28

ಕಂದ ॥ ತಾಮಃ ದ್ವಿಜರಿಂ ದೀಕ್ಷೆಯ
ಕಾಮಿನಿಯರ ದೀಕ್ಷೆಯ ಸ್ವದೀಕ್ಷೆಯನಳಿವ
ಗೀಮಹಾಗುರುವಿನ ಕರುಣದೆ
ಪ್ರೇಮದಿ ಪುನರ್ದೀಕ್ಷೆಪೇಳ್ದ ಶಂಕರಲಿಂಗ ।೧॥

End : folio 35

ಕಂದ ॥ ಎನ್ನತಿಶಯದಿಂ ಪೊಗಳ್ದಿಂ
ಉನ್ನತಘನಶರಣರಂ ಮನೋರಥದಿಂದಂ ।
ಸನ್ನುತಭಕ್ತಿಯನೀವುದೆ
ಚೆನ್ನಾಗಿಯೆ ಸಲಹು ನಮ್ಮ ಶಂಕರಲಿಂಗ ॥೨॥

Remarks :

118 ರಗಳೆಯ ಪಾದಗಳೂ ಆದ್ಯಂತಗಳಲ್ಲಿ 2 ಕಂದಪದ್ಯಗಳೂ ಇವೆ. ಕರ್ತೃವಿನ ಉಲ್ಲೇಖವಿಲ್ಲ. ಕವಿಚರಿತೆಯಲ್ಲೂ ಹೇಳಿಲ್ಲ.

There are 118 lines of Raga*l*e metre in this work. Author of this work is not known.

Sl. No. 55. [ಪ್ರದೋಷಕಾಲ ಪೂಜಾವಿಧಿ]
[PRADŌṢAKĀLA PŪJĀVIDHI]

MS. No. 1017. Author : ? Form : *Ṣaṭ*padi. Substance: Palm-leaf. Size : $17\frac{1}{2}'' \times 1\frac{1}{4}''$. Character : Kanna*ḍ*a. Folios : 96. Lines on a page : 6. Letters in a line : 82. Appearance : Old. Condition : Defective. Complete or incomplete : Incomplete.

Beginning :

ಬಳಿಕಲಸುರಹರಂಗೆ ಭುವನಾ। ವಳಿಯ ಸರ್ವಾಧಿಕ್ಯ ಪಟ್ಟವ।
ನೊಲಿದು ಕಟ್ಟಿವಿರಿಂಚಿ ಮುಖ್ಯಾಮರರ ಕೈಗೊಳಿಸಿ॥
ನೆಲೆಗೊಳಿಸಿ ತನಗೊರೆಯ ಭುಜದ। ಗ್ಗಳಿಕೆಯನು ಶಕ್ತಿತ್ರಯದವೈ।
ವಳಿಯ ಮಹಿಮೆಯ ಸರ್ವಸಿದ್ಧಿಯ ಪಂಚಕೃತ್ಯವನೂ॥

End :

ಎನಿಬರಿಗೆ ಮಗಳಾದೆಯೋ ಮುನ್ನೆನಿಬರಿಗೆ ಸೊಸೆಯಾದೆಯೊಮು।
ತ್ತೆನಿಬರಿಗೆ ನೀ ಮಾತೆಯಾದೆಯೊ ಭವಭವಂಗಳಲಿ॥
ಯೆನಿತು ವಿಮಲಜ್ಞಾನವೆಂಬುದು। ಜನಿಸಿತಿಲ್ಲವ ನಿತ್ಯವಾದಾ।
ತನುವಿಗೆಂಬುದು ಮೃತ್ಯುವಿನ ಕೈತುತ್ತು ನೋಡೆಂದಾ॥

Remarks :

ಈ ಕೃತಿ ಭಾವಿಣಿಸಟ್ಟದಿಯಲ್ಲಿದೆ. ಅಸಮಗ್ರ. 15 ಸಂಧಿಗಳೂ, 16 ನೆಯ ಸಂಧಿಯ 56 ಪದ್ಯಗಳೂ ಇವೆ. ಪ್ರತಿ ಸಂಧಿಯ ಕೊನೆಯಲ್ಲಿಯೂ 'ಶ್ರೀಗುರು ಶಾಂತೇಶ್ವರ ಅಥವಾ ಶಾಂತ ಲಿಂಗೇಶ್ವರ' ಎಂಬ ಹೆಸರು ಬರುತ್ತದೆ. ಆದುದರಿಂದ 'ಶಾಂತಲಿಂಗ' ಎಂಬುದು ಕವಿಯ ಅಥವಾ ಕವಿಯ ಆರಾಧ್ಯ ದೈವದ ಹೆಸರಾಗಿರಬಹುದು. ಕವಿ ವೀರಶೈವನೆಂಬುದೇನೊ ನಿಜ. ಕೆಲವೆಡೆಗಳಲ್ಲಿ 'ಪ್ರದೋಷಕಾಲಪೂಜ'ಎಂಬ ಮಾತು ಬರುತ್ತದೆ. ಈ ಕಾರಣದಿಂದ ಕೃತಿಯ ಹೆಸರು 'ಪ್ರದೋಷಕಾಲ ಪೂಜಾವಿಧಿ' ಎಂದಿರಬಹುದು.

This is an incomplete work. The name of the work is guessed as 'Pradōṣakāla Pūjāvidhi'.

Sl. No. 56 ಪ್ರಭುದೇವರ ಟೀಕಿನ ವಚನ (ಷಟ್ಸ್ಥಲ ವಿವೇಕ)

PRABHUDĒVARA ṬĪKINA VACANA

MS. No. 1135. Author : Mahaliṅgadēva. Form : Prose. Substance : Palm-leaf. Size : 13″×2″. Character : Kannaḍa. Folios : 193. Lines on a page : 8. Letters in a line : 62. Appearance : Modern. Condition : Fair. Complete or incomplete : Complete. See K.K. Vol. II, p. 51.

Beginning : folio 1

ಪ್ರಭುದೇವರ ಟೀಕಿನ ವಚನ । ಸ್ವಸ್ತಿ ಸಮಸ್ತ ಭುವನ ಜನ ತಿಮಿರಹರ
ಕಾರಣ ಸ್ವರೂಪರುಂ। ಭಕ್ತಿವತ್ಸಲರುಂ ಸರ್ವಾಂಗ ಪ್ರಾಣಲಿಂಗ ಮೂರ್ತಿವಿಲಾಸರುಂ ।
ಪುಲಿಗೆರೆಯ ಪುರವರಾಧೀಶ್ವರರುಂ । ಅಪೂರ್ವ ಸ್ವಯಂಭು ಪ್ರಸನ್ನ ಚೆನ್ನದಕ್ಷಿಣ

ಶ್ರೀ ಸೋಮನಾಥದೇವರ ದಿವ್ಯಶ್ರೀಪಾದಪದ್ಮಾರಾಧಕರುಂ ।
ಶ್ರೀಖಾಂಡನಿಷ್ಮರುಂ
ರುಗ್ಯಜುಸ್ಸಾಮಾಥರ್ವಣಾಂತರ್ಗತ ಪ್ರತಿಪಾದ್ಯ ಪ್ರಮುಖರುಂ।
ಶ್ರುತಿಸ್ಮೃತಿ ಪುರಾಣಾಗಮ
ಇತಿಹಾಸಾದಿ ನಾನಾಶಾಸ್ತ್ರಕೋಪಿದರುಂ । ಪರಮ ವೀರಶೈವಾ
ಗಮಾಚಾರ್ಯರುಂ ।
ಸಕಲ ಪ್ರಸಾದ ಪಂಚಾಕ್ಷರಿ ಮಂತ್ರಸಿದ್ಧರುಂ । ನಿತ್ಯಪರಿಪೂರ್ಣ
ಸಚ್ಚಿದಾನಂದ ನಿರಂಜನರುಂ ।
ಪರಂಜ್ಯೋತಿ ಸ್ವರೂಪರುಮಪ್ಪ ಪರಮ ಗುರುಮೂರ್ತಿ ಜಗದಾ
ರಾಧ್ಯರುಮಪ್ಪ ಮಹಾಲಿಂಗ
ದೇವರ ಅನಾದಿ ಸಂಸಿದ್ಧ ಗುರುಕುಳದನ್ವಯುವೆಂತೆಂದೊಡೆ....

End : folio 193

....ಮಹಾಲಿಂಗದೇವರು ತಮ್ಮ ದಿವ್ಯಜ್ಞಾನಾನಂದ ಸಿದ್ಧವರ
ಪ್ರಸನ್ನ ಪ್ರಸಾದ
ವನು ನಿಜತಚ್ಛಿಷ್ಯ ಭಕ್ತಿಭಂಡಾರಿ ಜಕ್ಕಣಾರ್ಯಂಗೆ
ಸಪ್ರೇಮ ಮಹಾನುಭಾವ
ಸಂಬೋಧೆ ಸಂಬಂಧ ವಿಜಯ ನಿರೂಪಣ ಕಾರಣಾರ್ಥ ವಿರಚಿತ
ಮಪ್ಪ ಪ್ರಭುದೇವರ
ಷಡುಸ್ಥಲದೊಳು ಐಕ್ಯನವರ್ಗ ಷಷ್ಠಮ ಪರಿಚ್ಛೇದಂ....

Remarks :

ವೀರಶೈವದ ಷಟ್ಸ್ಥಲ ತತ್ತ್ವವನ್ನು ಕುರಿತಿದೆ. ಪ್ರಭುದೇವರ 694 ವಚನಗಳನ್ನು ಷಟ್ಸ್ಥಲಗಳಿಗೆ ಅನುಸಾರವಾಗಿ ಭಕ್ತಿ ಭಂಡಾರಿ ಜಕ್ಕಣಾರ್ಯನಿಗೆ ವಿವರಿಸಲೆಂದು ಜೋಡಿಸಲಾಗಿದೆ. 'ಪ್ರಭುಟೀಕಿನ ವಚನಾರ್ಥವಂ ಬಿದರಹಳ್ಳಿ ಹೊಸಮಠದ ಪಕೀರಪ್ಪನವರಿಗೆ ದತ್ತುಕ್ಕುಡಿ ಚಿಕ್ಕಮಗಳೂರು ತಾಲೂಕು ಪೈಕಿ ಮತ್ತಾವಾರದ ರಾಮಗೌಡನು ಬರಕೊಟ್ಟ ಪ್ರಭುಟೀಕಿನ ವಚನಾರ್ಥ'— ಎಂದು ಪ್ರತಿಕಾರನ ಬಗೆಗೆ ಬರೆದಿದೆ.

The work deals wirh 'Ṣaṭsthalas' of Vīraśaivism. 694 Vacanas by Prabhu-dēva are arranged in six sthalas in order

to explain them to Bhaktibhan*ḍā*ri Jakka*ṇā*rya.

Sl. No. 57. ಪ್ರಭುದೇವರ ಪುರಾಣದ ನಾಂದ್ಯ
PRABHUD*Ē*VARA PUR*ĀṆ*ADA N*Ā*NDYA

MS. No. 1134 (S). Author : Har*īs*'vara. Form: *Ṣaṭ*padi. Substance : Palm-leaf. Size : 10″ × 2″. Character: Kanna*ḍ*a. Folios: 8. Lines on a page: 11. Letters in a line: 54. Appearance: Old. Condition: Good. Complete or incomplete : Complete. See K.K. Vol. II, p. 35.

Beginning : folio 56

ಪ.ಷ ॥ ಶ್ರೀದ್ಭಸಿತಾಂಗ ವಿಹೃದ್ಭ್ಯಭಂಗ ಲ
ಸ್ಥಕ್ತಿದಕುದರೋದ್ಭಾಧವಭವ
ಭಿದ್ಭೀಮಾರ್ಜುನಹಾರವಿಕಾಶಶರೋದ್ಭವ ಪ್ರತ್ಯರ್ಥಿ ।
ಸದ್ಭಾಕುಂದ ಬುರುದ್ಭಾಜಾತ್ಸ್ವರು
ಸದ್ಭವಾಸ್ಯವಯುಹೃದ್ಭಂಜನಜ
ಗದ್ಭಯಕೃಂತನ ಮದ್ಭಯಹರ ಬ್ರೂಹದ್ಭಾನ್ವಕ್ಷಿಜಯಾ
॥೧॥ (?)

End : folio 64

ಜಯಜಯ ಜಲಂಧರನ ಕಕಂಧರನ ಸದ್ಭಾಗ್ಯ
ಜಯಜಯ ಮಹಾಪ್ರಮಥಗಣ ಶೇಷ್ಯಪ್ರಾವೃಟನ
ಜಯಜಯ ಮೃತ್ರಯತೋಲ ವಿಶ್ರಾಂನತ ಭವಾಬ್ಧಿ ಭೈತ್ರಾ
ತ್ರಿವಿನುತಾ ।
ಜಯಜಯ ಜನನಮರಣ ಕುಜಕೃಂತನಕ್ಷತಪರಸು
ಜಯಜಯ ಯತೀಶ ಹುತ್ಕುವುದರಜಕನಿಕರಾಜ
ಜಯಜಯತು ಮಾಯಾಂಧಕಾರ ಭೇದ್ಯನ ಸೂರ್ಯಪ್ರಭುವೆ
ಮಾಂತ್ರಾಹಿ ತ್ರಾಹಿ ॥೭೯॥ (?)

Remarks :

ಹರೀಶ್ವರ ವಿರಚಿತವಾದ ಪ್ರಭುದೇವರಪುರಾಣ ಅಥವಾ ಪ್ರಾಸರತ್ನಾಕರ ಎಂಬ ಅಲ್ಲಮಪ್ರಭುಚರಿತೆಯೊಳಗೊಂಡ ಷಟ್ಪದಿ ಕಾವ್ಯದ ಸಂಧಿಗಳಿಂದ ಆರಂಭ ಪದ್ಯಗಳನ್ನು ಇಲ್ಲಿ ಎತ್ತಿಕೊಟ್ಟಿದೆ.

The beginning stanzas of the sandhis of the work 'Prabhudēvara Purāṇa' or 'Prāsa Ratnākara' written by Harīśvara are collected here. These stanzas are in Ṣaṭpadi metre.

Sl. No. 58. ಪ್ರಭುಲಿಂಗದ ಕಂದ

PRABHULIṄGADA KANDA

Ms. No. 1159 (P). Author : Murige Śāntavīra. Form : Kanda. Substance : Palm-leaf. Size : 8″ × 2″. Character : Kannaḍa. Folios : 5. Lines on a Page : 10. Letters in a line : 40. Appearance : Old. Condition : Fair. Complete or incomplete : Complete. See K. K. Vol. II, p. 212.

Beginning : folio 89

ಪ್ರಭುಲಿಂಗದ ಕಂದ ।

ಕಂದ । ಶ್ರೀಮತ್ಸಮಂತ ಮಃತ್ರ
ಸ್ತೋಮ ಪ್ರಭುಲಿಂಗರಾಜ ಕರಕಂಜಪುರ
ಸ್ವಾಮಿ ಸ್ವತಂತ್ರನಿಜನಿ
ಸ್ಸೀಮಾತುಳ ಶಾಂತವೀರ ಶಿವಜಯರುದ್ರ ॥೧॥

End : folio 93

ಕಂದ । ಪ್ರಭುಲಿಂಗದ ಬಾವನ್ನದ
ಶುಭನುತಿಗಳ ಪಠಿಸಿ ಕೋಪ ತಾಪ ನಿಷೇಧಂ ।
ದಿಭವ ಪ್ರಕೃತಿಗಳಳಿದಾ

ವಿಭವದ ನಿಜಭಕ್ತಿ ಮುಕ್ತಿಸುಖಪದಮುಕ್ಕುಂ ||೫೩||
ಪ್ರಭುಲಿಂಗದ ಕಂದ ಸಮಾಪ್ತಂ ಮಂಗಳಂ ||

Remarks :

'ರಾಜಲಿಂಗ ಪ್ರಭುವೇ' ಎಂದು ಕೊನೆಯಾಗುವ 53 ಕಂದ ಪದ್ಯಗಳಿವೆ. ಈ ಓಲೆಕಟ್ಟಿನಲ್ಲಿಯೇ ಅಕ್ಷರಮಾಲಿಕಾಗದ್ಯ (ಓಲೆ 94), ನಮಸ್ಕಾರ ಗದ್ಯ, ಪಂಚಪ್ರಕಾರದ ಗದ್ಯ (ಓಲೆ98), ಅಷ್ಟೋತ್ತರ ಶತನಾಮ ಗದ್ಯ (ಓಲೆ 100), ಷಟ್ಸ್ಥಲಗದ್ಯ (ಓಲೆ 104), ಉದಾಹರಣ ಗದ್ಯ (ಓಲೆ 105), ಇವೂ ಸೇರಿ ಕೊಂಡಿವೆ.

There are 53 Kandapadyas in this work. Every stanza ends with 'ರಾಜಲಿಂಗ ಪ್ರಭುವೇ' In addition to this work, there are few other works also in this MS.

Sl. No. 59. ಪ್ರಭುಲಿಂಗ ಲೀಲೆ
PRABHULIṄGA LĪLE

MS. No. 1118 (C). Author : Cāmarasa. Form : Ṣaṭpadi. Substance : Palm-leaf. Size : 8″ × 1¾″. Character : Kannaḍa. Folios : 3. Lines on a page : 10. Letters in a line : 52. Appearance : Old. Condition : Good. Complete or incomplete : Incomplete. See. K.K. Vol. II, p. 59.

Beginning : folio 1

ಶ್ರೀ ಗುರುಭ್ಯೋ ನಮಃ । ಪ್ರಭುಲಿಂಗ ಲೀಲೆ । ವಚನ । ಆದಿ
ಯಲೊಬ್ಬ ಮೂರ್ತಿ
ಯಾದ । ಆತನ ಮೂರ್ತಿಯಿಂದ ಸದಾಶಿವನಾದ। ಆ ಸದಾಶಿವನ
ಮೂರ್ತಿಯಿಂದ

ಜ್ಞಾನಶಕ್ತಿಯಾದಳು। ಆಜ್ಞಾ(ನ)ಶಕ್ತಿ ಸದಾಶಿವ ಇಬ್ಬರಿಗೆಯೂ
ಶಿವನಾದ ।
ಆ ಶಿವಂಗೆ ಇಚ್ಛಾಶಕ್ತಿಯಾದಳು । ಆ ಶಿವಂಗೆ ಇಚ್ಛಾಶಕ್ತಿ
ಯಿಬ್ಬರಿಗೆಯೂ
ರುದ್ರನಾದ । ಆ ರುದ್ರಂಗೆ ಕ್ರಿಯಾಶಕ್ತಿಯಾದಳು । ಆ ರುದ್ರಂಗೆ
ಕ್ರಿಯಾಶಕ್ತಿ ಇಬ್ಬರಿಗೆಯೂ
ವಿಷ್ಣುವಾದ....ಕೂಡಲ ಚೆನ್ನಸಂಗಮದೇವಯ್ಯ ॥೧॥

End : folio 23/2

ವನಿತೆ ಬೆರಗಾಗಿರ್ದಳಲ್ಲವು
ತನಗೆ ರೂಹಿಸಿ ಸುರತಸುಖ ಭಾ
ವನಗೆ ಬಾರದೆ ಬಲುಹುಗೊಂಡಿರೆ ಸುಯ್ದು ಮರೆದೊರಗಿ ॥
ಕನಸ ಕಂಡಂತಾಗಿ ಬಳಿಕಾ
ದಿನದ ಮರುದಿವಸದಲಿ ತನ್ನಯ
ಮನವೊಲಿದು ನಿಜಸಖಿಯರೊಡನಿಂತೆಂದಳಾ ಮಾಯೆ ॥೫೦॥

Remarks :

ಅಲ್ಲಮನ ಚರಿತೆಯನ್ನು ನಿರೂಪಿಸಿದೆ. ಪ್ರತಿಯೊಂದು ಗತಿಯ ಮೊದಲಲ್ಲಿಯೂ ಅಲ್ಲಮನ ಒಂದೊಂದು ವಚನವನ್ನೂ ಕಂದ ಪದ್ಯವೊಂದನ್ನೂ ಕೊಟ್ಟಿದೆ. ಆರಂಭದ ಗುರುಗುಹೇಶ್ವರಲಿಂಗ ಸ್ತುತಿಯಾದಮೇಲೆ, ಬಸವನಿಂದ ಕನ್ನಪಯ್ಯನವರೆಗೆ ಮಹಾ ಪುರುಷರಿಗೆ ಕವಿ ಮಣಿದಿದ್ದಾನೆ. ಸಮಗ್ರ ಕೃತಿಯಲ್ಲಿ, ಕವಿ ಚರಿತೆಯ ಪ್ರಕಾರ (II–ಪು 59) 1111 ಪದ್ಯಗಳ 25 ಗತಿ ಗಳಿರಬೇಕು. ಆದರೆ ಇಲ್ಲಿ ಕೃತಿ ಅಸಮಗ್ರವಾಗಿದ್ದು, ನಾಲ್ಕು ಗತಿಗಳು ಪೂರ್ತಿಯಾಗಿಯೂ 5ನೆಯ ಗತಿಯಲ್ಲಿ 50 ಪದ್ಯಗಳ ವರೆಗೂ ಮಾತ್ರ ಇದೆ.

The work deals with the life of Allama. In the beginning of each gati one Vacana of Allama and a Kanda are given.

Sl. No. 60. ಬಸವಪುರಾಣ
BASAVAPURĀṆA

MS. No. 1080. Author: Bhīmakavi. Form: Ṣaṭpadi. Substance: Palm-leaf. Size: 14″ × 2″. Character: Kannaḍa. Folios: 260 Lines on a page: 9. Letters in a line: 75 Appearance: Old. Condition: Good. Complete or incomplete: Complete. See K.K. Vol. I, p. 424.

Beginning:

ಆದಿ ಶಿವಲಿಂಗಕ್ಕೆ ವಾಹನ ।
ವಾದ ನಂದೀಶ್ವರನೆ ಮತ್ತೆ ಶಿ ।
ಲಾದ ಮುನಿಗುದಯಿಸಿದ ಪರಿಯಂ ಪೇಳ್ವೆನೆಂತೆನಲು ॥

End:

ಇದು ಸಕಲ ಮಹೇಶ್ವರಾಮಳ ಪದಪಯೋಜ
ಪರಾಗಮದಷಟ್ಪದನೆನಿಪ ಪಾಲ್ಕುಱಿಕೆ ಸೋಂ
ಮೇಶ್ವರನ ಕಾರುಣ್ಯವೊದವಿದಖಿಳ ಕಳಾಪ್ರಪೂ
ರಿತ ಹೃದಯ ಭೀಮಕವಿ ಪ್ರಣೀತಾದ್ಭುದಯ...

Remarks:

ಪ್ರಾರಂಭದ 5 ಓಲೆಗಳು ಮತ್ತು ಅಂತ್ಯದ 13 ಓಲೆಗಳು ಖಾಲಿ ಇವೆ. ಪಾಲ್ಕುರಿಕೆ ಸೋಮನಾಥನು ತೆಲುಗಿನಲ್ಲಿ ಬರೆದ ಬಸವ ಪುರಾಣವನ್ನು ಕವಿ ಕನ್ನಡದಲ್ಲಿ ಬರೆದಿದ್ದಾನೆ. ಕಲ್ಯಾಣದ ಬಸವನ ಪವಾಡಗಳು ಇದರಲ್ಲಿ ವರ್ಣಿತವಾಗಿವೆ. 8 ಆಶ್ವಾಸಗಳು, 61 ಸಂಧಿಗಳು, ಒಟ್ಟು 3614 ಪದ್ಯಗಳು ಇವೆ.

The miracle played by Basava of Kalyāṇa is narrated in this work. The work is in Bhāmini Ṣaṭpadi.

Sl. No. 61. ಬಸವರಾಜ ರಗಳೆ

BASAVARĀJA RAGAḶE

MS. No. 1116 (D). Author: Guruśānta. Form: Ragaḷe. Substance: Palm-leaf. Size: $7\frac{3}{4}'' \times 2''$. Character: Kannaḍa. Folios: 2. Lines on a page: 10. Letters in a line: 42. Appearance: Old. Condition: Good. Complete or incomplete: Complete.

Beginning: folio 8

। ಕಂದ । ಶ್ರೀವರ ಪೂಜಿತ ಚರಣನ
ಭಾವಜಮದ ಶೈಲ ಶಂಭು ಗಿರಿಸುತೆಯರಸನ ।
ಪಾವನ ಪರಮ ಜ್ಞಾನಿಯ
ಕೋವಿದನಂ ಪೊಗಳ್ವೆ ನಿತ್ಯ ಬಸವೇಶ್ವರನಾ ॥೧॥

। ರಗಳೆ । ಅಂಗಲಿಂಗ ಸಂಗ ಪ್ರಾಣಲಿಂಗವಾದ ಬಸವರಾಜ ।೧।
ಜಂಗಮಾಂಗ ಜಂಗಮೈಕ್ಯಲಿಂಗವಂಗ ಬಸವರಾಜ ।೨।

End: folio

[ರಗಳೆ] ತ್ರಾಹಿತ್ರಾಹಿ ಬಸವರಾಜ ತ್ರಾಹಿತ್ರಾಹಿ ಬಸವರಾಜ ।೫೬।
ತ್ರಾಹಿತ್ರಾಹಿ ಬಸವರಾಜ ತ್ರಾಹಿತ್ರಾಹಿ ಬಸವರಾಜ ।೫೭।

। ಕಂದ । ನೂರೆಂಟು ಬಸವನುತಿಯಂ
ಸಾರಸದಿಂದೋದಿ ಕೇಳಿ ವಿಸ್ತರಿಸುವರ್ಗೆ ।
ಮಾರಹರ ನಿಜಭಕ್ತಿಯುಕ್ತಿಯ
ತೋಱು (?) ದ್ಧರಿಸುವನು ನಿತ್ಯ ಮದ್ಗುರು ಶಾಂತಾ ॥

Beginning:

ಇದರಲ್ಲಿ 57 ವಾಕ್ಯಗಳಿವೆ. ಪ್ರತಿ ವಾಕ್ಯವೂ 'ಬಸವರಾಜ' ಎಂಬುದಾಗಿ ಅಂತ್ಯವಾಗುತ್ತದೆ. ಇದು ಬಸವನ ಸ್ತೋತ್ರ ರೂಪವಾದ ಕೃತಿ.

Karṇāṭaka Kavicarite does not mention this work. The work contains 57 sentences, each of which ends with 'ಬಸವರಾಜ'.

Sl. No. 62. ಬಸವಸ್ತೋತ್ರದ ತ್ರಿವಿಧಿ
BASAVASTŌTRADA TRIVIDHI

MS. No. 1116 (G). Author: Siddharāma. Form: Kanda. Substance: Palm-leaf. Size: $7\frac{1}{4}'' \times 2''$ Character: Kannaḍa. Folios: 10. Lines on a page: 10. Letters in a line: 40. Appearance: Old. Condition: Good. Complete or incomplete: Complete. See K. K. Vol. I, p. 184.

Beginning: folio 20

। ಕಂದ । ಬಸವೇಶನೆ ಬಸವರಾಜನೆ
ಬಸವಣ್ಣನೆ ಬಸವ ತಂದೆ ಬಸವ ಕೃಪಾನಿಧಿ।
ಬಸವ ಪರಮೇಶ್ವರರೇಶ್ವರ ।
ಬಸವ ಪ್ರಮಥಾದಿ ದೇವ ರಕ್ಷಿಸು ಬಸವಾ ।೧।

। ತ್ರಿವಿಧಿ । ಪ್ರಥಮಯಂತು ಬಸವಣ್ಣ ದ್ವಿತೀಯಂತು ಲಿಂಗವು.
[ದ್ವಿತಿಯಂತು ಲಿಂಗವು] ತೃತಿಯಂತು ತತ್ತ್ವ ಬ್ರಹ್ಮಾಂಡವೆಲ್ಲ ।
ಅಕಳಂಕ ಗುಣನಿಧಿ ಚಿದಾನಂದ ಬಸವಂಗೆ ।
ಭಕುತನಾದೆನು ಗುರುವೆ ಯೋಗಿನಾಥಾ ॥೧॥

End: folio 28

ಇಂತೀ ಬಸವಸ್ತವವ ಸಂತತಂ ನೆನೆದೀಗ ನಿ
[ಸಂತಾ ತನ್ನೆನಡೆದ ನಿ]ಶ್ಚಿಂತನಾದೆನ್ನೈ ಸುಖತರದಲ್ಲಿ ॥
ಸಚ್ಚಿದಾನಂದ ಗುರು ಬಸವನಾಣತಿಯಲ್ಲಿ
ಒಚ್ಚತ ನಿಮಗಾನು ಯೋಗಿನಾಥ ॥

Remarks:

'ಯೋಗಿನಾಥಾ' ಎಂದು ಕೊನೆಯಾಗುವ 125 ಪದ್ಯಗಳಿವೆ. ಇದು ಬಸವಸ್ತುತಿಯನ್ನು ಕುರಿತ ಕೃತಿ.

There are 125 stanzas in this work each of which ends with 'ಯೋಗಿನಾಥಾ'. This is a Stōtra of Basavēśa.

Sl. No. 63. ಬಸವಸ್ತೋತ್ರದ ತ್ರಿವಿದಿ
BASAVASTŌTRADA TRIVIDI

MS. No. 1159 (I). Author: Siddharāma. Form: Stōtra. Substance: Palm-leaf. Size: 8″ × 2″. Character: Kannaḍa. Folios: 8. Lines on a Page: 10. Letters in a line: 40. Appearance: Old. Condition: Fair. Complete or incomplete: Complete.

Beginning: folio 35

ಕಂದ ॥ ಬಸವೇಶನೆ ಬಸವರಾಜನೆ
ಬಸವಣ್ಣನೆ ಬಸವ ತಂದೆ ಬಸವ ಕೃಪಾನಿಧೆ ।
ಬಸವ ಪರಮೇಶ್ವರೇಶ್ವರ
ಬಸವ ಪ್ರಮಥಾದಿ ದೇವ ರಕ್ಷಿಸು ಬಸವ ॥

End: folio 42

ಕಂದ ॥ ಬಸವಸ್ತವಾಹ್ವಯದ ಚಿ
ದ್ರಸ ಷಟ್ಸ್ಥ ಪಂಚವಿಂಶತಿ ಶತ ತ್ರಿವಿಧಿಯಂ ॥
ಒಸೆದೋದಿ ಕೇಳಿ ಪಠಿಸಲು
ವಶವಪ್ಪುದು ಭಕ್ತಿಮುಕ್ತಿಸುಖಸಾಮ್ರಾಜ್ಯಂ ॥೧॥ (?)

Remarks:

ಆದ್ಯಂತಗಳಲ್ಲಿ 2 ಕಂದ ಪದ್ಯಗಳನ್ನು ಒಳಗೊಂಡು ಒಟ್ಟು 121 ಪದ್ಯಗಳಿವೆ. ಪದ್ಯಗಳು 'ಯೋಗಿನಾಥಾ' ಎಂದು ಮುಗಿಯುತ್ತವೆ.

There are totally 121 stanzas including two Kandas, one at the beginning and one at the end. Each stanza ends with 'ಯೋಗಿನಾಥಾ'.

This is a Vīras'iva work written in praise of Basava. See Sl. No. 62.

Sl. No 64. ಬಸವೇಶ್ವರನ ಪವಾಡದ ರಗಳೆ

BASAVĒS'VARANA PAVĀḌADA RAGAḶE

MS. No. 1159 (G) Author: ? Form: Ragaḷe. Substance: Palm-leaf. Size: 8″×2″. Character: Kannaḍa. Folios: 5. Lines on a page: 10. Letters in a line: 40. Appearance: Old. Condition: Good. Complete or incomplete: Complete. See K.K. Vol. II, p. 284.

Beginning: folio 23

ಕಂದ ॥ ಶ್ರೀಮದಪ್ರತಿಮ ಬಸವನ
ನಾಮವ ಮನವಚನಕಾಯದೊಳಗನವರತಂ ।
ತಾಮಸವಿಲ್ಲದೆ ನೆನೆವರ
ಪ್ರೇಮಿಗಳಾಳಯ್ಯ ಹಂಪೆಯಾ ವಿರುಪಾಕ್ಷ ॥೧॥

End: folio 27

ಕಂದ ॥ ಪರಮಗುರು ಬಸವರಾಜಂ
ಮೆರೆದ ಪವಾಡಗಳ ನಿಮ್ಮ ಕೃಪೆಯಿಂದೆನಗಂ ।
ವರಮತಿಯನಿತ್ತು ರಕ್ಷಿಸ
ಲೊರೆದೆಂ ಸಲಹಯ್ಯ ಹಂಪೆಯಾ ವಿರುಪಾಕ್ಷ ॥೧॥

Remarks:

'ಬಸವ' ಎಂದು ಮುಗಿಯುವ 112 ರಗಳೆಯ ಪಾದಗಳಿವೆ. ಆದ್ಯಂತಗಳಲ್ಲಿ 2 ಕಂದ ಪದ್ಯಗಳಿವೆ.

There are 112 lines of Ragaḷe metre in this work. Each line ends with 'ಬಸವ'.

There are two Kandas, one at the beginng and one at the end. The 88 great deeds of Basava are described in this work.

Sl No 65 ಬಸವೇಶ್ವರನ ಪುರಾಣದ ಕಥಾಸಾಗರ

BASAVĒSVARANA PURĀṆADA KATHĀSĀGARA

MS. No. 1115. Author: Uttarada Basaliṅgadēva. Form: Prose. Substance: Palm-leaf. Size: $9\frac{1}{2}'' \times 2''$. Character: Kannaḍa. Folios: 66. Lines on a page: 12. Letters in a line: 52. Appearance: Old. Condition: Fair. Complete or incomplete: Incomplete. See K.K. Vol. II, p. 321.

Beginning: folio 64

ಶ್ರೀಮದಗಣಿತಗುಣಗಣಾಭಿರಾಮೊ ಮಾರಮಣ
ಪೂಜಾಪರಾಯಣರಾದ ವೇದಶಾಸ್ತ್ರಗಮ ಪುರಾಣೇತಿಹಾಸ
ಪ್ರವೀಣರಾದ । ಜ್ಞಾನಸ್ವರೂಪರಾದ । ವೇದವೇದಾಂತೋಪಾದಿತ
ತ್ರಿವಿಧ ಪ್ರಸಾದೋಪಭೋಗಿಗಳಾದ । ರಾಜಾಧಿ ಸಕಲ ಶಿವಭಕ್ತ
ರು ಗಳಿಂ ।....

End:

... ಅದರೊಳಗೆ ಕೈಪವನಿಟ್ಟು ಒಂದು ದಿಕ್ಕಿನಲ್ಲಿ ಹೊಡಕೆಯು ಪಿಂಡಿ
ದ್ರವ್ಯಾಭರಣಂಗಳ ಹಾಕಲು । ಅವೂ ಸರಿಬಾರದಿರೆ
ಸತಿಸುತರೂ ತಾನೂ ಕುಳ್ಳಿರಲು ಇವರ ಕಡಿಯುದು
ಹೆಚ್ಚಲು । ಕೈಪದ ಕಡೆಯೆ ಶಿವ ಕುಳ್ಳಿರಲು ।
ಆಗ ಸರಿಯಾಗಲು । ಆ ತಕ್ಕಡಿಯೆಂಬ ಪುಷ್ಪಕದಲ್ಲಿ
ಕೈಲಾಸಕ್ಕೆ ಕರಕೊಂಡು ಹೋದರು ॥

Remarks :

ಈ ಕೃತಿ ಬಸವೇಶ್ವರನ ಮಹಿಮೆಯನ್ನು ಕುರಿತು ಹೇಳುತ್ತದೆ. ಅಷ್ಟಾದಶಪುರಾಣ, ಭಾರತ, ರಾಮಾಯಣ, ವೀರಶೈವಾಮೃತ ಪುರಾಣ, ಆರಾಧ್ಯ ಚರಿತ್ರ ಇತ್ಯಾದಿಗ್ರಂಥಗಳೇ ಇದಕ್ಕೆ ಮೂಲ. ಇದರಲ್ಲಿ 464 ಕಥೆಗಳಿರುವಂತೆ ಕರ್ಣಾಟಕ ಕವಿಚರಿತೆಯಿಂದ ತಿಳಿದುಬರುತ್ತದೆ. ಆದರೆ ಇಲ್ಲಿ ಕೃತಿ ಅಸಮಗ್ರ.

The work deals with the greatness of Basavēs'vra.

Sl No. 66. ಬಸವೇಶ್ವರನ ಪುರಾಣದ ನಾಂದ್ಯ
BASAVĒS'VARANA PURĀṆADA NĀNDYA

MS No. 1134. (I) Author : Bhīmakavi. Form : Ṣatpadi. Substance : Palm-leaf. Size : 10″×2″. Character : Kannaḍa. Folios : 2. Lines on a Page : 11. Letters in a line : 52. Appearance : Old. Condition : Good. Complete or incomplete : Complete. See K.K. Vol. I, p. 425.

Beginning : folio 24

ಭಾ. ಷ॥ ಶ್ರೀಗುರುವೆ ದೀಕ್ಷಾಗುರುವೆ ರ
ಕ್ಷಾಗುರುವೆ ಶಿಕ್ಷಾಗುರುವೆ ಸ
ರ್ವಾಗಮೋಕ್ತಕಳಾಗುರುವೆ ಶಿವಯೋಗಧರ್ಮಾರ್ಥ ।
ಭೋಗಗುರುವೆ ತ್ಯಾಗಗುರುವೆ ಸು
ಧೀಗುರುವೆ ವಾಚಾಗುರುವೆ ಭವ
ರೋಗಹರ ಶರಣಾಗು ಬಸವ ಮಹಾಗುರುವೆಯೆನುಗೆ ॥೧॥

End : folio 25/2

ಭಾ. ಷ॥ ಇದು ಸಕಲ ಮಹೇಶ್ವರಾಮಳ
ಪದಪಯೋಜಪರಾಗಮುದಪ
ಟ್ಪದಿಯೆನಿಪ ಪಾಲ್ಕುರಿಕೆ ಸೋಮೇಶ್ವರನ ಕಾರುಣ್ಯ ।
ಒದವಿದಖಿಳಕಳಾ ಪ್ರಪೂರಿತ

ಹೃದಯ ಭೀಮಕವಿ ಪ್ರಣೀತಾ
ಭ್ಯುದಯ ಬಸವಪುರಾಣಕಥೆಯೊಳಗಷ್ಟವಾಶ್ವಾಸ ॥೩೫॥

Remarks :

ಪಾಲ್ಕುರಿಕೆ ಸೋಮನಾಥಕೃತ ತೆಲುಗು ಬಸವಪುರಾಣವನ್ನು ಭೀಮಕವಿ ಭಾಷಾಂತರಿಸಿದ್ದು, ಸಂಧಿಗಳ ಆರಂಭಪದ್ಯಗಳನ್ನು ಇಲ್ಲಿ ಕೊಟ್ಟಿದೆ. 24 ನೆಯ ಓಲೆಯ ಎಡಬದಿಯಲ್ಲಿ 'ವರ್ಣಕದ ಪುರಾಣದ ನಾಂದ್ಯ' ಎಂದು ಬರೆದಿದೆ.

This work contains 35 stanzas. These stanzas are taken from 'Basava Purāṇa', written by Pālkurike Sōmanātha.

Sl. No. 67. ಬಸವೇಶ್ವರ ವಚನಗಳು
BASAVĒŚVARA VACANAGAḶU

MS. No. 312. Author : Basavēśvara. Form : Vacana. Substance : Palm-leaf. Size : 10″ × 1½″. Character : Kannaḍa. Folios : 108. Lines on a page : 8. Letters in a line : 44. Appearance : Old Condition : Damaged. Complete or incomplete : Incomplete. See K.K. Vol. II, p. 244.

Beginning :

ಅಮೃತಮತಿ ಸೋಮಶಂಭುವಿಂಗೆ ಹುಟ್ಟಿದಾತನಿಂದ್ರ ।
ಸತ್ಯರೂಪಿ ಜ್ಯೇಷ್ಠಾದೇವಿಗೆ ಹುಟ್ಟಿದ ಬ್ರಹ್ಮ – ದೇವದೇವಕಿಗೆ
ಹುಟ್ಟಿದಾತ ವಿಷ್ಣು । ನಾಭಿರಾಜ ಮರುತಾದೇವಿಗೆ
ಹುಟ್ಟಿದಾತನರುಹಾ। ಇವರೆಲ್ಲರೂ ಯೋನಿಜರೆಂಬುದು ತ್ರೈಜಗ
ಬಲ್ಲುದು ।
ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಹೊರಗಾದ ಕೂಡಲ ಸಂಗಮ
ದೇವಂಗೆ
ಮಾತಾ ಪಿತರುಳ್ಳರೆ ಹೇಳಿರೆ ? ॥೧೮॥

End :

ಹುತ್ತಕ್ಕೆ ಏಸು ಬಾಯಾದರೇನು ? ಸರ್ಪನಿರ್ಪುದು...ಸ್ಥಾನ ।
ಭಾವ ಭಾವಿಸಿ ಭ್ರಮವಳಿದು ನೋಡಾ । ಆ ಭಾವ ಭಾವಿಸಲು
ನಿರ್ಭಾವ ಕೂಡಲ ಸಂಗಮದೇವ.

Remarks :

ಈ ಪ್ರತಿ ಪ್ರಾಚೀನವಾದುದು. ಕೆಲವು ಓಲೆಗಳು ಕಳೆದು ಹೋಗಿವೆ. ಕೆಲವು ಓಲೆಗಳ ಕೊನೆಗಳು ಮುರಿದಿವೆ.

The manuscript is very old.

Sl. No. 68. ಭಕ್ತಿಬಿನ್ನಹದ ರಗಳೆ

BHAKTIBINNAHADA RAGAḶE

MS. No. 1159 (E). Author: S'aṅkaradēva. Form : Ragaḷe. Substance: Palm-leaf. Size: 8″ × 2″. Character : Kannaḍa Folios : 6. Lines on a page : 10. Letters in a line : 40. Appearance : Old. Condition : Fair. Complete or incomplete : Complete. See K.K. Vol. II. p 363.

Beginning : folio 13

ವೃತ್ತ ॥ ಹಿಂದೆ ಸಹಸ್ರ ಶತಕೋಟಿ ಭವಾಂತರ ಹೀನಯೋನಿಯೊಳ್
ಬಂದೆನು ಭಾಗ್ಯದಿಂ ದೊರಕಿತಂತ್ಯದಿ ಮಾನವಜನ್ಮವಿನ್ನು ನಾಂ
ಮುಂದದರಿಂದ ಸದ್ಗತಿಯನೈದುವೆನೋ ಕಡೆಗೈದದಿರ್ಪನೋ
ಎಂದಿರುಳುಂ ಪ ಲುಂ ಮರುಗಿ ಚಿಂತಿಸುವೆನೆಲ್ಲೈ ತಂದೆ ಶಂಕರ॥೧॥

End : folio 17

ಕಂದ ॥ ಅಗಜೇಶ ನಿಮ್ಮ ಪಾದವ
ಮಿಗೆ ಸಾರುವೆನೆಂಬ ಸರ್ವಜೀವರ ಮನಮಂ ।
ತೆಗೆದುಕೊಂಡಿರ್ಪ ಮಾಯೆಯು
ತಗಹಂ ಬಿಡಿಸು ಪ್ರಸನ್ನ ಶಂಕರಲಿಂಗ ॥೧೮॥

Remarks :

ಕವಿಚರಿತೆಯಲ್ಲಿ ಈ ರಗಳೆ ಶಂಕರದೇವನದೆಂದು ಹೇಳಿದೆ. 138 ರಗಳೆಯ ಪಾದಗಳಿವೆ. ಆದಿಯಲ್ಲಿ ಒಂದು ವೃತ್ತವೂ ಅಂತ್ಯದಲ್ಲಿ ಒಂದು ಕಂದ ಪದ್ಯವೂ ಉಂಟು.

This is a devotional work in praise of God S'iva. Like other works of this kind it presupposes that the world is full of miseries and teaches that by devotion to S'iva one can get over them. It is probable that the author of this work is S'aṅkaradēva. There are 138 lines of Ragaḷe metre. There is one Vṛitta at the beginning and one Kanda at the end.

Sl. No. 69. ಭಕ್ತಿರಸದ ಸೋನೆ
BHAKTIRASADA SŌNE

MS. No. 401. Author : Pañcayya. Form: Sāṅgatya. Substance : Palm-leaf. Size : $7\frac{1}{2}'' \times 1\frac{1}{2}''$. Character : Kannaḍa. Folios: 4. Lines on a page : 14. Letters in a line : 58. Appearance : Not old. Condition: Good. Complete or incomplete : Incomplete. See K.K. Vol. II, p. 440.

Beginning : folio 1

ಶ್ರೀ ಪರಮೇಶ್ವರನು ತನ್ನ ವರಸತಿ ಪಾರ್ವತಿಗೆ ಭಕ್ತಿರಸದ ಸೋನೆಗರೆದು
ಪೇಳಿದುದನುಸಿರುವೆನು । ಪದನು ।

। ಸಾಂಗತ್ಯ । ಶ್ರೀಗುರು ಪಂಚಾಚಾರ್ಯರು ಪರಮಾತ್ಮ । ನಾಗಭೂಷಣನ
ನಲಾಕ್ಷ । ನಾಗಚರ್ಮಾಂಬರ ನಾಗಧರ ಧೃಗಪಾದ ।
ಸಾಗರಸುತನೇತ್ರ ಶರಣು ॥೧॥

End: folio 4

ಕಸ್ತೂರಿ ತಿಲಕವು ರತ್ನ ನೊಸಲ ಬಟ್ಟು । ಹಸ್ತಿನಿಯರ ಕಂಡ ನೆರೆದು ॥

ವಿಸ್ತಾರವಾಗಿ ಸಮಸ್ತ ವಿದ್ಯವಪರ । ವಸ್ತುವ ಕೇಳಿಸುತಿಹರು ॥ ೮೩ ॥

ಚಿತ್ತಜನೇರುವ ಮತ್ತರಜದವೋಲು । ಚಿತ್ತಿನಿಯರ ವೊತ್ತ ನೆರೆದು ॥

ಮುತ್ತಿನಾರತಿಗಳನೆತ್ತಿ ಸುಸ್ವರದಿಂದ । ಚಿತ್ತಜರಿಪುವ ಪಾಡಿದರು ॥೮೪॥

Remarks :

ಶಿವನು ಪಾರ್ವತಿಗೆ ಭಕ್ತಿರಸದ ಸೋನೆಗರೆದು ಹೇಳಿದ ವಿಷಯ ಈ ಕೃತಿಯಲ್ಲಿ ವರ್ಣಿತವಾಗಿದೆ. ಕವಿ ತನ್ನ ಕಾವ್ಯದಲ್ಲಿ ಬಾಣ ಮಯೂರ ಕಾಳಿದಾಸ ಮತ್ತು ನಂಬಿಯಣ್ಣ ಇವರ ಮಹತ್ವವನ್ನು ತಂದಿದ್ದೇನೆ ಎಂದು ಹೇಳುತ್ತಾನೆ. ಕವಿ ಹಂಪಿಯ ಹರಿದೇವನನ್ನು ಸ್ತುತಿಸುತ್ತಾನೆ. ಕವಿಚರಿತೆಯಲ್ಲಿ ಈ ಕವಿಯ ಹೆಸರು ಮಂಚಯ್ಯ ಎಂದಿದೆ. ಆದರೆ ಇಲ್ಲಿ (ಪದ್ಯ 3 ಮತ್ತು 28) ಪಂಚಯ್ಯ ಎಂದಿದೆ. ಕೃತಿ ಅಸಂಪೂರ್ಣ ; 84 ಪದ್ಯಗಳಿವೆ.

The 'rain of nector of devotion', advised by Śiva to his beloved Pārvati is depicted here.

Sl. No. 70. [ಭಾಗವತ] (?)

[BHĀGAVATA]

MS. No. 126 (G). Author: Nityātmagōpinātha. Form: Ṣaṭpadi. Substance: Palm-leaf. Size: $10\frac{1}{2}'' \times 2''$. Character: Kannaḍa. Folios: 118. Lines on a page: 8. Lettres in a line: 50. Appea-

rance: Old. Condition: Good. Complete or incomplete: Complete. K.K. Vol. II, p. 222.

Beginning:

ವರ ಮುನಿಪ ಚಿತ್ತಯಿಸು ಮನ್ವಂ
ತರವನಾ ಸ್ವಯಂಭುವಾದ್ಯರ ಚರಿತವನು
ತತ್ಪುತ್ರ ಪೌತ್ರಾದ್ಯಮಳ ಚರಿತವನೂ ॥
ಧರೆಯ ಸಪ್ತದ್ವೀಪ ಸಾಗರ.... ॥೧॥

End:

ಉಳಿದೆನೊಬ್ಬನೆ ದುಷ್ಕೃತಕೆ ನೀವಿ
ಲ್ಲಿಳಿವವೊಲು ಕುಯೋನಿಗದಱಿಕೊಳು
ಬಳಿಕ ತತ್ವಜ್ಞರ ಸಮಾಶ್ರಯವಾಯಿತ್ತು ತನಗೆಂದ ॥೫೧॥

Remarks:

ನಿತ್ಯಾತ್ಮ ಗೋಪಿನಾಥನು 'ಸಮಗ್ರ ಭಾಗವತ'ವನ್ನು ಬರೆದಂತೆ ಹೇಳಿದೆ. ಪ್ರತಿಸಂಧಿಯ ಅಂತ್ಯದಲ್ಲಿಯೂ ಕವಿಯು ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ. ಕೆಲವು ಕಡೆಗಳಲ್ಲಿ ನಾವು 'ನಿತ್ಯಾತ್ಮ' ಎಂಬ ಹೆಸರನ್ನು ಮಾತ್ರ ನೋಡುತ್ತೇವೆ.

'Samagra Bhāgavata' is told by Nityātmagōpinātha. At the end of every sandhi the author mentions his name; but in some places we find only 'Nityātma'.

Sl. No. 71. ಭಾವಚಿಂತಾರತ್ನ

BHĀVACINTĀRATNA

MS. No. 1187 (A). Author: Gubbi Mallaṇārya. Form: Ṣaṭpadi. Substance: Palm-leaf Size: 20″ × 2″. Character: Kannaḍa. Folios: 20. Lines on a page: 10. Letters in a Line: 115. Appearance: Old. Con-

dition : Good. Complete or incomplete : Incomplete. See. K.K. Vol. II, p. 192.

Beginning : folio 54

ವಾ. ಷ॥ ವಿಳಸಿತ ದ್ವಾರವಮುಖ ಸಂಪತ್ಕರಂಗಳಿಂ
ನಳಿನಸಖನಂತರುಣವಾಗಿ ಪೊಂಬೆಟ್ಟವಮಂ
ಬಳಸುವ ವಣಿಗ್ವರರ ಸೈಪಿನಿಂ ಶಿವಭವನದೊಪ್ಪಂಗಳಿಂ ಭಕ್ತರಾ ।
ನಿಳಯಂಗಳುರ್ವಿನಿಂ ಮಕುಟವರ್ಧನರ ಮಂ
ಡಳಿಕ ಮನ್ನೆಯರ ಗೇಹಂಗಳಿಂ ನಡುವೆ ಕಂ
ಗೊಳಿಪ ಹಿರಿಯರ ಮನೆಯೊಳಿರ್ಪನಾ ಸತ್ಯೇಂದ್ರ ಚೋಳ ಧರಣೀ
ಪಾಲನೂ ॥೧೪॥

End : folio 72

ಪಾಹಿ ಮಹಿಮಸ್ಥಾನ ಪಾಹಿ ಭವಗುಣ..ನ
ಪಾಹಿ ಜಯಜಿತಕಾಮ ಪಾಹಿ ಗಿರಿಜಾವಾಮ
ಪಾಹಿ ಚಿದ್ಘನಕಾಹಿ ಪಾಹಿ ಸತ್ಕೃತ ಪಾಹಿ ಪಾಹಿ ದೇವಾ
ಸುಭಾವಾ ।
ಪಾಹಿ ನಿರ್ಮಲಕಾಯ ಪಾಹಿ ನಿಗಮಾಜೇಯ
ಪಾಹಿ ಪಂಚಾಕ್ಷರಿಯ ರೂಪರುಯ ನಿಃ ಪಾಪ
ಪಾಹಿಯುಮ್ಮ್ಮರಗುಂಡದ ಮಲ್ಲಿನಾಥ ಶಿವಮಸ್ತು ಶುಭಮಸ್ತು
ಸತತಂ ॥೬೧॥

Remarks :

ಕಟ್ಟಿನಲ್ಲಿ ಮೊದಲ ಕೆಲವು ಓಲೆಗಳೂ, ಕೊನೆಗೆ ಒಂದು ಓಲೆಯೂ ನಷ್ಟವಾಗಿವೆ. ಸತ್ಯೇಂದ್ರಚೋಳನ ಚರಿತೆಯನ್ನು ಒಳಗೊಂಡಿರುವುದರಿಂದ ಕೃತಿಗೆ 'ಸತ್ಯೇಂದ್ರಚೋಳ ಕಾವ್ಯ' ಎಂದೂ ಹೆಸರುಂಟು. ಇಲ್ಲಿ ಆರಂಭದಲ್ಲಿ ಸಂಧಿ II – ಪ. 13ರ ವರೆಗೂ, ಕೊನೆಯಲ್ಲಿ ಸಂಧಿ IX – ಪ. 61 ರ ಆಚೆಗೂ ಪದ್ಯಗಳು ನಷ್ಟವಾಗಿವೆ.

A few folios in the beginning and one folio at the end are missing. The work is known as 'Satyēndracōḷa kāvya' as it deals with the life of 'Satyēndracōḷa.

Sl No 72. ಭಿಕ್ಷಾಟಣದ ಚರಿತ್ರೆ
BHIKṢĀṬAṆADA CARITRE

MS. No. 882 (A). Author: Gurulingaṇācarya. Form: Ṣaṭpadi. Substance: Palm-leaf. Size: 13″ × 2″. Character: Kannaḍa. Folios: 12. Lines on a page: 12. Letters in a line: 70. Appearance: Old. Condition: Good. Complete or incomplete: Complete. See K.K. Vol. II, p. 263.

Beginning:

ಧರೆಯೊಳಗೆ ಗೋಪಾಲಕೃಷ್ಣ ಹದಿನಾರು ಸಾ । ವಿರ ಗೋಪ
ಸತಿಯರೊಳಿಹುದ ನೋಡಲೆಂದು ಪುರ । ಹರನು
ದ್ವಾರಾವತಿಗೆ ಬಂದ ಭಿಕ್ಷಾಟಣದ ಚರಿತೆಯಂ ಬಣ್ಣಿಸುವೆನು ।

End:

ನಾರಾಯಣಾಕ್ಷಿ ಪೂಜಿತ ಸುತಕ್ರಮನಶನಿ । ವಾರವಂದ್ಯನ
ನಗಣಿತ ಪ್ರಮಥರುಗಳ ಪರಿ । ವಾರದೊಡೆಯನನೀಳು
ವಾರದಪ್ಪದೆ ನೆನೆದು ಬದುಕುವುದು ಸರ್ವಜನರೂ ॥

Remarks:

ಗೋಪಾಲಕೃಷ್ಣನು ದ್ವಾರಾವತಿಯಲ್ಲಿ ತನ್ನ ಹದಿನಾರು ಸಾವಿರ ಗೋಪಸತಿಯರೊಂದಿಗೆ ಇರುವುದನ್ನು ನೋಡುವ ಸಲುವಾಗಿ ಪುರಹರನು ದ್ವಾರಾವತಿಗೆ ಬಂದ ಕಥೆ ಇಲ್ಲಿ ಹೇಳಿದೆ. ಈ ಕೃತಿಯಲ್ಲಿ ಮೂರು ಸಂಧಿಗಳೂ 155 ಪದ್ಯಗಳೂ ಇವೆ.

The story of Purahara, who comes to Dvārāvati with an intention to see Gopālakṛiṣṇa there with his sixteen thousand wives, is told in this work. The work has 155 stanzas in 3 sandhis.

Sl No. 73. ಭೈರವೇಶ್ವರನ ಕಾವ್ಯ
BHAIRAVĒS'VARANA KĀVYA

MS. No. 882 (B). Author: Nañjunda. Form: Sāṅgatya. Substance: Palm-leaf. Size: 13″ × 2.″ Character: Kannada. Folios: 49. Lines on a page: 12. Letters in a line: 70. Appearance: Old. Condition: Good. Complete or incomplete: Complete. See K.K. Vol. II, p. 265.

Beginning:

ಶ್ರೀಮದನೇಕ ಲೋಕ ಜನರಂ ಹರಿಮುಖ್ಯಮರಾಳಿ
ಸೇವಿತಂ । ಕಾಮ ಮದಾಪಹಲಿವರ ಸಾಸಲ...ಮಯ
ಲಿಂಗ ನಂಘ್ರಿ ಪೂ । ಜಾ ಮಹಾಚಿತ್ತನುನ್ನತ ಗುಣಾಂಬುಧಿ
ಭೈರವ ದೇವನಂ ಸದಾ । ಪ್ರೇಮದೊಳೊಲ್ದು ಕೀರ್ತಿಸುವಣಾವ
ನಾತನೆ ಮುಕ್ತಿಮೂಲಿಗಂ ।

End:

ಪೇಳಿದ ಶಿವಭಕ್ತರಾಳು ನಂಜುಂಡೇಶ
ಕೇಳುವುದಧಿಕ ಸಜ್ಜನರೂ ।
ಭಾಳನೇತ್ರನ ಕೃಪೆಯೋಳಿಗೆಯೊಡನೆ ಸಂ ।
ಮೋಳವಪ್ಪುದು ಶರಣಾರ್ತಿ ॥

Remarks:

ಇದರಲ್ಲಿ 5 ಸಂಧಿಗಳಿವೆ. ಒಟ್ಟು ಪದ್ಯಗಳು 1232. 'ಸೋಸಲ ಪುರದ ಸೋಮೇಶನು' ತನ್ನ ಭಕ್ತನೊಬ್ಬನ ಭಕ್ತಿಗೆ ಮೆಚ್ಚಿ ಆತನನ್ನು ಕೈಲಾಸಕ್ಕೊಯ್ದು ಕಥೆ ಹೇಳಿದೆ. 1097(A) ನಂಬರಿನ ಹಸ್ತಪ್ರತಿ ಇದೇ ಕೃತಿಯನ್ನೊಳಗೊಂಡಿದೆ. ಆದರೆ ಅದರಲ್ಲಿ 1225 ಪದ್ಯಗಳಿವೆ.

The story of a devotee of 'Sōmēs'a,' God in Sōsalapura is narrated in Sāṅgatya metre. The story tells that 'Sōmēs'a'

(S'iva) being pleased by the devotee took him to heaven.

Sl. No. 74. ಮಡಿವಾಳಯ್ಯಗಳ ಸಂಗೀತ
MAḌIVĀḶAYYAGAḶA SAṄGĪTA

MS. No. 1048 (B). Author: Celuva (?) Form: Sāṅgatya. Substance: Palm-leaf. Size: 11″×2″. Character: Kannaḍa. Folios: 15. Lines on a page: 8. Letters in a line: 45. Appearance: Modern. Condition. Good. Complete or incomplete: Complete. See K.K. Vol. III, p. 30.

Beginning:

ಶಿವಯೆನ್ನಿ ಶಿವಯೆನ್ನಿ । ಶಿವಯೆನ್ನೀರೋ ಮುನ್ನಾ
ಭವಸಾಗರವ ದಾಂಟುವರೇ । ಶಿವನರಿಯದ ಮುನ್ನವೆ
ನರಗುರಿಗಳ। ಭವಹರಿವುದು ಕೇಳಿಜನರೂ ॥೧॥ ಕಾಯುವೆ ಮೂ
ರು ಕಾಲಾರು ಮಸ್ತಕನವ । ಬಾಯಿ ಒಂಬತ್ತು ಬಲ ಎರಡೂ । ಕಯ್ಗಳು
ನಾಲ್ಕು ಕಂಗಳುಗಳು ಹದಿನೆಂಟು। ವೈಯಿಕ್ಕಿ ನಾ ನೆರಗುವೆನೂ।

End:

ಬರಪೋದಿದವರಿಗೆ ಪರಮಾನ ಪದವಿಯು ಹರುಷದಿ
ಲಾಲಿಸಿದವರಿಗೆ । ದುರಿತ ವಿನಾಶನ ನೆರೆ ಕರ್ಮ ಹರಿವುದು । ಶರಣನ
ಕೃತಿ ಮಡಿವಳನಾ ॥ ಸಂದ ಪದನು ಶತಕದ ಮುಕ್ತರ ಹೊಂ-
ದಿ ಪೇಳಿದ ನೀಕೃತಿಯಾ । ಸಂದಿ ಯರಡು ವೀರ । ಭದ್ರನ ಕೃತಿ ಯನು ।
ಚೆಂದದಿಂದಾಲಿಸಿ ಕೇಳುವದು ॥೭೦॥

Remarks:

ಬಸವೇಶ್ವರನ ಸಮಕಾಲೀನನಾದ ಮಡಿವಾಳಯ್ಯನ ಜೀವನವು ಇದರಲ್ಲಿ ವರ್ಣಿತವಾಗಿದೆ. ಇದರಲ್ಲಿ 2 ಸಂಧಿಗಳಿವೆ. ಒಟ್ಟು

130 ಪದ್ಯಗಳಿವೆ. ಪ್ರಾರಂಭದಲ್ಲಿ ಶಿವಸ್ತೋತ್ರವಿದೆ. ಕವಿ ವೀರಶೈವ. ಎರಡನೆಯ ಸಂಧಿಯ 64ನೆಯಪದ್ಯದಲ್ಲಿ 'ಚೆಲುವನ ಚರಿತೆ ಸಂಪೂರ್ಣ' ಎಂದಿದೆ. ಈ ಕಾರಣದಿಂದ ಕರ್ಣಾಟಕ ಕವಿ ಚರಿತೆಯಲ್ಲಿ ಕವಿಯ ಹೆಸರು 'ಚೆಲುವ' ಎಂದಿರಬೇಕೆಂದು ಊಹಿಸ ಲಾಗಿದೆ.

The life of Ma*ḍ*iv*āḷ*ayya, a contemporary of Basav*ē*s'vara is depicted in this work.

Sl. No. 75. ಮಣ್ಣೇಶ್ವರನ ನಾಂದ್ಯ

MA*ṆṆĒ*S'VARANA N*Ā*NDYA

MS. No. 1134 (Y). Author : ? Form : Kanda (?) Substance : Palm-leaf. Size : 10″ × 2″. Character : Kanna*ḍ*a. Folios : 2. Lines on a page : 11. Letters in a line : 53. Appearance : Old. Condition : Good. Complete or incomplete : Complete. See K.K. Vol. III, p. 282.

Beginning : folio 92

ತರುವುರದನ ತಂದೆ । ತನುಜೆ ಮನೆಯ ಸಖ
ತರುಣನಮ್ಮನ ವರನಣುಗಾ ॥
ನರಸಿಯಾತ್ಮಜನ ಮಾ । ವನ ಮಗನುರುಪಿದ
ಗುರುವೆ ಮಣ್ಣೇಶ ಮಾಂತ್ರಾಹಿ ॥೧॥

ಟೀಕು ॥ ತರುವುರದನ ಚಂದ್ರನ । ತಂದೆ ಸಮುದ್ರದ । ತನುಜೆಯ ಲಕ್ಷ್ಮಿಯ । ಮನೆಯ ತಾವರೆಯ । ಸಖ ಸೂರ್ಯನ । ತರುಣ ಕರ್ಣನ ।
ಅಮ್ಮನ ಕೊಂತಿಯ । ವರನ ಪಾಂಡವನ (ಪಾಂಡುವಿನ) । ಅಣುಗನ ಅರ್ಜುನನ । ಅರಸಿಯ ಸುಭದ್ರೆಯ । ಆತ್ಮಜನ ಅಭಿಮನ್ಯುವಿನ.... ।

End : folio 94

ಸರಸಿ ಪೊಕ್ಕನ ತಾಯ । ವರನಣುಗನ ರಕ್ತ । ಸುರಿದನಯ್ಯನ
ವಾಜಿಯುರನಿಗೆ । ಅರಿಸುತೆಯರಸನ। ವರ ಭಾವನ ಸೊಸೆ ಮೂ
ಗರಿದನಯ್ಯನೆ ಮಣ್ಣೇಶ ಮಾಂತ್ರಾಹಿ ।೧೩॥

ಟೀಕು ॥ ಸರಸಿ ಕೊಳನ । ಪೊಕ್ಕನ ಕೌರವನ.... ನಮಸ್ಕಾರವು
ಮಣ್ಣೇಶ್ವರನ ನಾಂದ್ಯ ಸಮಾಪ್ತಂ.

Remarks :

ಮಣ್ಣೇಶ್ವರಕಾವ್ಯದ ಸಂಧಿಗಳ ಆರಂಭ ಭಾಗಕ್ಕೆ ಈ ಪದ್ಯಗಳು ಸೇರಿದುವಾಗಿರಬೇಕು ಎಂದು ಕವಿಚರಿತೆಕಾರರು ಊಹಿಸುತ್ತಾರೆ. ಇಲ್ಲಿ ಒಗಟುಗಳಂತಹ 13 ಪದ್ಯಗಳನ್ನು ಟೀಕು ಸಹಿತವಾಗಿ ಕೊಟ್ಟಿದೆ. ಪದ್ಯಗಳು ಸಾಮಾನ್ಯವಾಗಿ 'ಮಣ್ಣೇಶ ಮಾಂ ತ್ರಾಹಿ' ಎಂದು ಮುಗಿಯುತ್ತವೆ.

The work contains 13 stanzas, each of which ends with 'ಮಣ್ಣೇಶ ಮಾಂ ತ್ರಾಹಿ'. The work is appended with commentary also. According to Kavicarite, these stanzas may have been from 'Maṇṇēśvarakāvya'.

Sl. No. 76. ಮದನತಿಲಕ
MADANATILAKA

MS. No. 1109 (B). Author : Kallarasa. Form : Ṣaṭpadi. Substance : Palm-leaf. Size : 13″ × 2″. Character : Kannaḍa. Folios : 43. Lines on a page : 7. Letters in a line : 60. Appearance : Old. Condition : Defective. Complete or incomplete : Incomplete. See. K.K. Vol. II, p. 93.

Beginning : folio 1

ಶ್ರೀಮದಮರವರ ಕಿರೀಟ ।
ಭೂಮನೋಹರಾಂಘ್ರಿಶೋಣಿ ।
ತಾಮರಸನುದಾರ ಸುರತರಂಗಿಣೀಧರಂ ॥
ಸಾಮಗಾನ.............. ।
..............ಮಭೂಷ ।
ಹೇಮಕೂಟಗಿರಿ ನಿವಾಸನೀಗೆ ಸೌಖ್ಯಮಂ ॥೧॥

End : folio 43

ಕು। ಷ॥ ಪತಿಯುಂಡು ಮಿಕ್ಕುದಂ
ಪತಿಸೂಡಿ ಕಳೆದುದಂ
ಪತಿಯುಟ್ಟುಳುಹಿದುದಂ ಕೊಂಡುಮುಲಿದೂ (?) ।
ಅತಿಶಯದೊಳಳವಡಿಸಿ
ಮತಿವಂತೆಯಾಗಿ ಪ್ರ
ಸ್ತುತಿಯೆ ಸುಪತಿವ್ರತಾಂಗನೆಯರರಸಿ ॥೭೧॥

Remarks :

ಪ್ರಾರಂಭದಲ್ಲಿ ಕವಿ ಶಿವ ವಿಠ್ಠಲ ಮತ್ತು ವೀರಭದ್ರರನ್ನು ಸ್ತುತಿಸುತ್ತಾನೆ. ಕೃತಿಯ ವಿಷಯ ಕಾಮಶಾಸ್ತ್ರ. ಪೂರ್ವದಲ್ಲಿ ಮಲ್ಲಿಕಾರ್ಜುನನು ಇದೇ ವಿಷಯವನ್ನು ಕುರಿತು ಬರೆದಿದ್ದನು. ಇದರಲ್ಲಿ ಕವಿ ಭೋಗ ಷಟ್ಪದಿ, ಕುಸುಮ ಷಟ್ಪದಿ ಮತ್ತು ಶರ ಷಟ್ಪದಿಗಳನ್ನು ಬಳಸಿದ್ದಾನೆ. ಕೃತಿ ಅಸಮಗ್ರ. ಹನ್ನೊಂದು ಸಂಧಿಗಳು ಸಮಗ್ರವಾಗಿವೆ. ಹನ್ನೆರಡನೆಯ ಸಂಧಿ ೭೧ ನೆಯ ಪದ್ಯಕ್ಕೆ ನಿಲ್ಲುತ್ತದೆ.

This work deals with 'K*ā*mas*'ā*stra'.

Sl. No. 77. ಮನೋವಿಕಾರನಿರಸನ ರಗಳೆ

MANŌVIKĀRANIRASANA RAGAḶE

MS. No. 1159 (D). Author : *S'aṅkaradēva* Form : Ragaḷe. Substance : Palm-leaf. Size : 8″ × 2″. Cha-

racter : Kannaḍa. Folios ; 5. Lines on a Page : 10. Letters in a line : 40. Appearance : Old. Condition : Fair. Complete or incomplete : Complete.

Beginning : folio 7

ವೃತ್ತ ॥ ದಿಟ್ಟಮನಂ ಕನಿಷ್ಟ ಕಪಿಚೇಷ್ಟೆಯೊಳಿರ್ದಪುದಲ್ಲದೊರ್ಮೆಯುಂ।
ಮುಟ್ಟೆ ಮಹೇಶ ನಿಮ್ಮನೊಲಿದರ್ಚಿಸಲೊಲ್ಲದು ಕೆಟ್ಟೆಕೆಟ್ಟೆನಾಂ।
ಬಟ್ಟೆಯ ಕಾಣದೆ ಬಾಯಬಿಡುತ್ತಿದ್ದೆನೆ ಚಿತ್ತವಿಕಾರದೇಳ್ಗೆಯಂ।
ಮೆಟ್ಟಿ ಕೆಲಕ್ಕೆ ಜಾರಿಸಿ ನಿಮ್ಮ ನಿಜಾಂಘ್ರಿಯ ತೋರಿಸು ತಂದೆ ಶಂಕರಾ॥

End : folio 13

ಕಂದ ॥ ಜನನ ಕಾಲದೊಳು ವಂದಿಸಿ
ಘನಯೌವನದೊಳೊಂದಿಸಿ ನಿಮಗೆ ನಾಂ ಮು
ಪ್ಪಿನಲಿ ವಂದಿಸಿ ನೀನಿದ
ಮನಸಿಗೆ ತಾರದಿರು ತಂದೆ ಶಂಕರಲಿಂಗಾ ।೧॥

Remarks :

‘ಶಂಕರಲಿಂಗ’ ಎಂದು ಮುಗಿಯುವ 130 ರಗಳೆಯ ಪಾದಗಳಿವೆ. ಆದಿಯಲ್ಲಿ ಒಂದು ವೃತ್ತ, ಅಂತ್ಯದಲ್ಲಿ ಒಂದು ಕಂದ ಪದ್ಯ ಇದೆ.

This is a work in praise of God S'iva. The work consists of 130 lines of Ragaḷe metre. Each line ends with ‘ಶಂಕಗಲಿಂಗಾ’. There is a Vṛitta in the beginning and a Kanda at the end. The work is not mentioned in Karṇāṭaka Kavicarite.

Sl. No. 78. ಮನೋವಿಕಾರನಿರಸನ ರಗಳೆ
MANŌVIKĀRANIRASANA RAGAḶE

MS. No. 456 (D). Author: S'aṅkaradēva. Form: Ragaḷe. Substance: Palm-leaf. Size: $8\frac{1}{2}'' \times 1\frac{3}{4}''$. Character: Kannaḍa. Folios: 12. Lines on a page: 7. Letters in a line: 30. Appearance: Old. Condition: Good. Complete or incomplete: Complete.

Beginning: folio 21

ದಿಟ್ಟಮನಂ *ನಿಷ್ಕ ಕಪಿಚೇಷ್ಟೆಯೊಳಿರ್ದಪುದಲ್ಲದೊವ್ಮೈಯುಂ।
ಮುಟ್ಟೆ ಮಹೇಶ ನಿಮ್ಮನೊಲಿದರ್ಚಿಸಲೊಲ್ಲದೆ ಕೆಟ್ಟೆ ಕೆಟ್ಟೆ
ನಾಂ।
ಬಟ್ಟೆಯು ಕಾಣದೆ ಬಾಯು ಬಿಡುತ್ತೈಪೆನೆ ಚಿತ್ತವಿಕಾರದೇಳ್ಗೆಯುಂ।
ಪೆಟ್ಟೆ ಕೆಲಕ್ಕೆ ಜಾರಿಸಿ ನಿಮ್ಮ ನಿಜಾಂಘ್ರಿಯು ತೋರಿಸು ತಂದೆ
ಶಂಕರಾ ॥೧॥

। ಲ. ರಗಳೆ । ಶ್ರೀ ದಿವಿಜರಾಜಪೂಜಿತ ಜಿತಮನೋನಾಥ
ಮೂದೇವ ಮುಖವನಜಭಾನು ಶಂಕರಲಿಂಗಾ ।೧।
ಆದಿ ತಾಂಡವಮೂರ್ತಿ ದಶದಿಶಾಮಯಕೀರ್ತಿ
ವೇದನುತ ಶರಣ ಸುರಧೇನು ಶಂಕರ ಲಿಂಗಾ ।೨।

End: folio 32/2

। ಕಂದ । ಜನನ ಕಾಲದೊಳೊಂದಿಸಿ
ಘನ ಯುವ್ವನದಲ್ಲಿ ನಾ ನಿಮಗೊಂದಿಸಿ ಮು
ಪ್ಪಿನ ಕಾಲದೊಳೊಂದಿಸಿ ಯಿದನಿಂ
ಮನಸಿಗೆ ತಾರದಿರ್ದೈ[illegible]ಯ್ಯ ತಂದೆ ಶಂಕರ ಲಿಂಗಾ ॥ (?)
। ಮನೋವಿಕಾರನಿರಸನ ರಗಳೆ ಸಂಪೂರ್ಣಂ ।

Remarks:

ಕವಿಚರಿತೆಯಲ್ಲಿ ಈ ಕೃತಿಯ ಹಾಗೂ ಕರ್ತೃವಿನ ಹೆಸರಿಲ್ಲ. ಕವಿ ತನ್ನ ಕೃತಿಯಲ್ಲಿ ಎಲ್ಲಿಯೂ ತನ್ನ ಹೆಸರನ್ನು ನೇರವಾಗಿ ಹೇಳಿಕೊಂಡಿಲ್ಲ. ಪ್ರಾರಂಭದ ಮತ್ತು ಅಂತ್ಯದ ಪದ್ಯಗಳಲ್ಲಿ

ಒಂದು ಪಾದ ಬಿಟ್ಟು ಇನ್ನೊಂದು ಪಾದ 'ಶಂಕರಲಿಂಗ' ಎಂಬುದಾಗಿ ಅಂತ್ಯವಾಗುತ್ತದೆ. ಈ ಕಾರಣದಿಂದ ಕವಿಯು ಹೆಸರನ್ನು ಮೇಲೆ ಸೂಚಿಸಿದಂತೆ ಊಹಿಸಲಾಗಿದೆ. ಈ ಕೃತಿ ೧೩೦ ಪಾದಗಳಿರುವ ರಗಳೆ ಛಂದಸ್ಸಿನಲ್ಲಿ ರಚಿತವಾಗಿದೆ.

Every alternative line of Raga*l*e ends with 'ಶಂಕರಲಿಂಗ'. So the name of the poet is guessed as *S'a*ṅkarad*ē*va. See Sl. No. 77.

Sl. No. 79. ಮಂತ್ರಮಹತ್ವದ ಕಂದ
MANTRAMAHATVADA KANDA

MS. No. 1116 (K). Author : K*ēs'*ir*ā* jada*ṇā*yaka. Form : Kanda. Substance : Palm-leaf. Size : $7\frac{3}{4}'' \times 2''$. Character : Kanna*d*a. Folios : 7. Lines on a page : 10. Letters in a line : 40. Appearance : Old. Condition : Good. Complete or incomplete: Complete. See K. K. Vol. II, p. 19.

Beginning : folio 56

। ಕಂದ । ಶ್ರೀಯಂ ಪಡೆವೊಡೆ ಶಾಶ್ವತ ।
ದಾಯುಷ್ಯದಾಪೇಕ್ಷಿತನಗೆ ಕೈಗೂಡುವೊಡೆ ॥
ಮಾಯಕೊಳ್ಳಗಾಗದಿರ್ಪೊಡೆ ।
ಜೀಯನ ಜಪ ಓಂ ನಮಃ ಶಿವಾಯೆಂಬ ಪದಂ ॥೧॥
ಪುಣ್ಯಕ್ಷೇತ್ರದ ಬೀಜಂ ।
ಪುಣ್ಯ ಮಹಾನದಿಗಳಿರವು ಸುಕೃತದ ಬಿಯ್ಯಂ ।
ಬಣ್ಣಿಸಲ್ಬಾರದೆ ಘನ ।
ಪುಣ್ಯವಿದೆ ನಮಗೋಂ ನಮಃ ಶಿವಾಯೆಂಬ ಪದಂ ॥೨॥

End : folio 63

ಅಷ್ಟೋತ್ತರ ಶತಕೃತಗಳ ।
ಅಷ್ಟೋತ್ತರ ಜನ್ಮದಲ್ಲಿ ಮಾಡಿದ ಫಲದಿಂ ॥
ದಷ್ಟೋತ್ತರಜಪ ಮಿಗಿಲೆನೆ
ಲಿಷ್ಟಾರ್ಥವಿದೋಂ ನಮಃ ಶಿವಾಯೆಂಬ ಪದಂ ॥೧೦೯।
ಆರಕ್ಕರದಿಂ ಮಂತ್ರಂ
ಮೂರುಕಣ್ಣಭವನಿಂದೆ ಮೆಗ್ಗಳದೈವಂ ॥
ಬೇರಿಲ್ಲವೆಂದು ಧರಿತ್ರಿಗೆ
ಸಾರಿದೆನಾ ಕೇಶಿರಾಜ ದಂಡಾಧೀಶಂ ॥೧೧೦॥

Remarks :

The work deals with the importance of the Mantra of Six Letters (ಷಡಕ್ಷರ) i. e. ಓಂನಮಃಶಿವಾಯ. According to Karṇātaka Kavicarite the name of the work is 'Ṣaḍa-kṣara Kanda'. In this work there are 110 stanzas, each ending with 'ಓಂನಮಃಶಿವಾಯ'.

Sl. No. 80. ಮಂತ್ರಮಹತ್ವದ ಕಂದ
MANTRAMAHATVADA KANDA

MS. No. 1159 (N). Author : Kēs'irāja Daṇḍā-dhīs'a. (Koṇḍaguḷi Kēs'iraja) Form : Kanda. Substance : Palm-leaf. Size : 8″ × 2″. Character : Kannaḍa. Folios : 7. Lines on a page : 10. Letters in a line : 40. Appearance : Old. Condition : Fair. Complete or incomplete : Complete. See K.K. Vol. II, p. 19.

Beginning : folio 75

ಮಂತ್ರಮಹತ್ವದ ಕಂದ ।
ಕಂದ । ಶ್ರೀಯಂ ಪಡೆವೊಡೆ ಶಾಶ್ವತ
ದಾಯುಷ್ಯದ ದೀಕ್ಷೆ ತನಗೆ ಕೈಗೂಡುವೊಡೆ

ಮಾಯಕೊಳ್ಳಗಾಗದಿರ್ಪೊಡೆ
ಜಿಯ್ಯನ ಜಪ ಓಂ ನಮಃ ಶಿವಾಯೆಂಬ ಪದಂ ॥೧॥

nd : folio 81

ಕಂದ । ಆರಕ್ಕರದಿಂ ಮಂತ್ರಂ
ಮೂರು ಕಣ್ಣ ಭವನಿಂದೆ ವೆಗ್ಗಳ ದೈವಂ॥
ಬೇರಿಲ್ಲವೆಂದು ಧರಿತ್ರಿಗೆ
ಸಾರಿದೆನಾಂ ಕೇಶಿರಾಜ ದಂಡಾಧೀಶಂ ॥೧೧೦॥
ಮಂತ್ರಮಹತ್ವದ ಕಂದ ಸಮಾಪ್ತಂ ಮಂಗಳಂ ।

emarks :

ಷಡಕ್ಷರಮಂತ್ರದ ಮಹತ್ವವನ್ನು ಹೇಳಿದೆ. 'ಓಂ ನಮಃ ಶಿವಾಯ' ಎಂದು ಮುಗಿಯುವ 110 ಕಂದ ಪದ್ಯಗಳಿವೆ.

There are 110 Kandapadyas in this work. Every stanza ends with 'ಓಂ ನಮಃ ಶಿವಾಯ'. The work is also known as 'Ṣaḍakṣara Kanda.' See Sl. No. 78.

Sl. No. 81. ಮರುಳದೇವರ ಕಂದ
MARUḶADĒVARA KANDA

MS. No. 1116(L). Author: Maruḷadēva. Form: anda. Substance: Palm-leaf. Size: 7¾″×2″. haracter: Kannaḍa. Folios: 10. Lines on a Page: 11. etters in a line: 36. Appearance: Old. Condition: ood. Complete or incomplete: Complete. See .K. Vol. I, p. 200.

eginning : folio 63

। ಕಂದ । ಶ್ರೀಮತ್ಶಾಂಭವ ಭಕ್ತಿ
ಪ್ರೇಮಾನಂದಾಬ್ಧಿ ಸೋಮನತಜನಚಯವಿ ।

ಶ್ಯಾಮನರಿಭೀಮನಗಜಾ
ವಾಮಾಂಗೋದ್ದಾಮ ಸೋಮ ಪರಮ ಪ್ರಭುವೆ ॥೧॥
ಸೋಮಾರ್ಕಶಿಖಿ ವಿಲೋಚನ
ಕಾಮಾಂತಕ ತ್ರೈಪುರಾರಿ ಭವಹರ ಶಂಕರ ||
ತಾಮರಸಾಕ್ಷಜ ಸುರಪಾ ।
ದ್ಯಾಮರ ಸೇವಿತ ಪದಾಬ್ಜ ಪರಮ ಪ್ರಭುವೆ ॥೨॥

End : folio 72

ಇದು ಶಿವಪೂಜಕರೊಲುವೆಂ ।
ದುದಯಸ್ತಂಗತದೊಳೋಡಿ ಭವ ಮರಣಂಗಳ ।
ನೊದೆದು ಮುಕ್ತ್ಯಂಗನಾಲಿಂ ।
ಗದ ಸಮರತಿ ಸುಖದೊಳಿಹುದು ಪರಮಪ್ರಭುವೆ ॥೧೩೩॥
ಪರಬಸವ ಚೆನ್ನಬಸವೇ ।
ಶ್ವರ ಪ್ರಭು ಮಹಾದೇವಿ ಸಿದ್ಧರಾಮೇಶ್ವರ ಮು ।
ಖ್ಯರ ಪ್ರಮಥರ ದಳಮಹ ।
ತ್ಸರಸಿಜದೊಳು ತಾಳ್ದುಬಾಳ್ದೆ ಪರಮಪ್ರಭುವೇ ॥೧೩೪॥

Remarks :

The work is also called 'Maruḷadēvara Prabhudēva Kanda'. This is a Stōtra of Śiva in 134 stanzas. (According to Karṇaṭaka Kavicarite there are 135 stanzas). Many of them end with 'ಪರಮಪ್ರಭುವೇ'.

Sl. No. 82. ಮರುಳದೇವರ ಕಂದ

MARUḶADĒVARA KANDA

MS. No. 1156 (O). Author: Maruḷadēva. Form: Substance: Palm-leaf. Size: 8″×2″. : Kannaḍa. Folios: 8. Lines on a page: 10. line: 48. Appearance: Old. Condition:

Fair. Complete or incomplete: Complete. See K.K. Vol. I, p. 200.

Beginning : folio 81

ಮರುಳದೇವರ ಕಂದ ।

ಕಂದ । ಶ್ರೀಮತ್ಕುಂಭವ ಭಕ್ತಿ
ಪ್ರೇಮಾನಂದಾಬ್ಧಿ ಸೋಮನತಜನಚಯು ವಿ
ಶ್ರಾಮನರಿಭೀಮನಗಜಾ
ವಾಮಾಂಗೋದ್ದಾಮನೇಮ ಪರಮಪ್ರಭುವೆ ॥೧॥

End : folio 89

ಕಂದ । ವರಬಸವ ಚೆನ್ನಬಸವೇ
ಶ್ವರಪ್ರಭು ಮಹಾದೇವಿ ಸಿದ್ಧರಾಮೇಶ್ವರ ಮು
ಖ್ಯರ ಪ್ರಮಥರಡಿಗಳನು ಹೃ
ತ್ಸರಸಿಜದೊಳು ತಾಳ್ದು ಬಾಳ್ದು ಪರಮಪ್ರಭುವೇ ॥೧೩೪॥
ಮರುಳದೇವರ ಕಂದ ಸಮಾಪ್ತಂ ॥

Remarks :

'ಪರಮ ಪ್ರಭುವೇ' ಎಂಬುದಾಗಿ ಮುಗಿಯುವ 134 ಕಂದ ಪದ್ಯಗಳಿವೆ.

There are 134 Kandapadyas in this work. Every stanza ends with 'ಪರಮ ಪ್ರಭುವೇ'. See Sl. No. 81.

Sl. No 83. ಮರುಳಸಿದ್ಧಸ್ವಾಮಿಗಳು ನಿರೂಪಿಸಿದ ನಾಂದ್ಯ

MARUḶASIDDHASVĀMIGAḶU NIRŪPISIDA NĀNDYA

MS. No. 1134 (G). Author : Maruḷasiddha. Form : Ṣaṭpadi. Substance : Palm-leaf. Size : 10″×2″. Character : Kannaḍa. Folios : 3. Lines

on a page : 10. Letters in a line : 52. Appearance: Old. Condition : Good. Complete or incomplete : Complete.

Beginning: folio 19

ವಾ. ಷ ॥ ಶ್ರೀಮದಜಹರಿಸುರಾಸುರಚಯಕಿರೀಟಘಟಿ
ತಾಮಳಮಹಾದಿವ್ಯರತ್ನಸಂದೋಹಪ್ರ
ಭಾಮಹಿತಪದಪಂಕಜ ಪಂಚಶರದರ್ಪವಿಪಿನ ಪಟುದಾವಾನಲ ।
ತಾಮರಸಸಖಕೋಟಿತೇಜ ವಿಜಿತಾಂಗಾಭಿ
ರಾಮ ರಯುಗಾಪ್ತಲೋಚನ ರಜತಗಿರಿವಾಸ
ಹೈಮವತಿಯು ಸರಸ ಶ್ರೀ ಸೋಮಶೇಖರ ರಕ್ಷಿಸೆಮ್ಮನತಿಹರುಷ
ವೆರಸಿ ।॥೧॥

End : folio 21/2

ಪಂಚಾನನನ ಭಕ್ತಿರಸಭರಿತಮಣಿಕಳಸ
ಸಂಚಿತಾಗಾಮಿಕ ಕರ್ಮದ ಮೂಲ ಕುದ್ದಾಲ
ಕಾಂಚನಾದಿ ಸುವಸ್ತುಲಾಭಕಾಂಕ್ಷಿತರಿಗತಿಶಯು ಪಂಚಪರುಷ
ವೆನಿಸಾ ।
ಪಂಚವಿಂಶತಿನುತಿಯಿಂದಂ ಲೇಖನಂಗೈದು
ಸಂಚಳವನುಳಿದೋದಿ ಕೇಳಿ ವಿಸ್ತರಿಸಿದರ
ವಾಂಛಿತ ಶುಭೋತ್ಕರವ ಸೋಮಶೇಖರನೊಲಿದು ಕೃಪೆಮಾಡಿ
[ಪೊರೆವ ಸತತಂ ॥೨೫॥

Sl. No. 173. ವಾತೂಳಶುದ್ಧತಂತ್ರಮ್

VĀTŪḶAŚUDDHATANTRAM

MS. No. 220 (C). Author : ? Form : Grantha (?). Substance : Palm-leaf. Size : 15″ × 2″. Character :

Kannaḍa. Folios : 30. Lines on a page : 10. Letters in a line : 60. Appearance : Old. Condition : Good. Complete or incomplete : Complete.

Beginning : folio 37/2

ಶ್ರೀ ಗಣಾಧಿಪತಯೇ ನಮಃ ವಾತೂಳ ಶುದ್ಧತಂತ್ರಂ ಲಿಖ್ಯತೇ।
ತತ್ಪ್ರಾಪ್ಯರೇ । ಈಶ್ವರ ಉವಾಚ ।

। ಗ್ರಂಥ । ಚತ್ವಾರಿತಾನಿ ಮಾನಾನಿ । ಪ್ರತ್ಯಕ್ಷಾದೀನಿ ಹೇ ದ್ವಿಜಾಃ ।
ಪ್ರತ್ಯಕ್ಷಮನುಮಾನಂ ಚ ಶಬ್ದಾರ್ಥಾಪತ್ತಿರೇವಚ ॥೧॥
ಸಂಶಯಾದಿ ವಿನಿರ್ಮುಕ್ತಾ । ಚಿಚ್ಛಕ್ತಿರ್ಮಾನಮುಚ್ಯತೇ
ಅನುಮಾನಂ ದೃಢವ್ಯಾಪ್ತಾ । ಪರೋಕ್ಷಾರ್ಥಾವಿಬೋಧಕಮ್
॥೨॥

End : folio 67

ಸಾಮಾನ್ಯಂ ಮಿಶ್ರಕಂ ಚೈವ ಶುದ್ಧಂ ವೀರಂ ಚತುರ್ವಿಧಮ್
ತತ್ಸರ್ವಂ ಹಿ ಸಮಾಸೀನ ತವ ಪ್ರೋಕ್ತಂ ಷಡಾನನ ॥೬೭॥
ತತ್ವಾದಿ ಕಿಲ ಕಾಂತಶ್ಚ ಪಟಲಾನಾಮ್ ದಶಕ್ರಮಾತ್
ಭೇದ ಶುದ್ಧಾಖ್ಯ ತಂತ್ರಸ್ಯ ಕಥಿತಸ್ತವ ಸುವ್ರತ ॥೬೮॥
ಇತಿ ಶ್ರೀ ವಾತೂಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥ
ಸಂಹಿತಾಯಾಂ ಶ್ರೀ ಮಲ್ಲಿಕಾರ್ಜುನೀಯ ಕರ್ನಾಟ ಭಾಷಾ
ವಿವೃತೌ ಮಂತ್ರ ಕಿಲಕಪಟಲೋ ದಶಮಃ ಸಮಾಪ್ತಃ

Remarks :

ಶೈವಮತವನ್ನು ಪ್ರತಿಪಾದಿಸುತ್ತದೆ. ಹತ್ತು ಪಟಲಗಳಿವೆ.

The work deals with S'aivism. It contains 10 paṭalas.

Sl. No. 174. ವಿಶೇಷಾರ್ಥಪ್ರಕಾಶಿಕಾ

VIS'ĒṢĀRTHAPRAKĀS'KĀ

MS. No. 220 (B). Author : ? Form : Grantha. Substance : Palm-leaf. Size : 15″×2″. Character :

Kannaḍa. Folios: 18. Lines on a page: 10. Letters in a line: 60. Appearance: Old. Condition: Good. Complete or incomplete: Complete.

Beginning: folio 18

ಗುರುವೃಷಭಲಿಂಗಾಯ ನಮಃ । ವಿಶೇಷಾರ್ಥಪ್ರಕಾಶಿಕಾ ।
। ಗ್ರಂಥ । ಶ್ರೀಮದ್ವೈಪುರಿಸೋಮೇಶ । ಲಿಂಗಾಯ ಲಿಂಗರೂಪಿಣೇ ।
ಲಿಂಗಯ್ಯೈಕ್ಯಸ್ಥ ಲಿಂಗಾಯ। ನಮಸ್ತೇ ಲಿಂಗಮೂರ್ತಯೇ॥೧॥
ನಮಃ ಶಬ್ದ ಉಮಾಸಾಕ್ಷಾತ್ । ಶಿವಶಬ್ದಶ್ಶಿವಸ್ಸ್ವಯಮ್।
ಅಯ ಶಬ್ದಸ್ತಯೋರ್ಯೋಗಃ । ಸೋಮಸ್ತಂ ಸಮುಪಾಸ್ಮಹೇ ॥೨॥

End: folio 35

ಯಶ್ಚೈತದಾಚರತ್ಯೇವಮ್ । ಸ ಆಚಾರ್ಯವರೋ ವಿಭುಃ
ಪರಾನುಭವ ಸೂತ್ರೋಕ್ತಮ್ । ಪರಮಾರ್ಥಂ ಪರಂ ಪದಮ್ ॥೧೦೮॥
ಇತಿ ಶ್ರೀ ಶೈವಸಿದ್ಧಾಂತತಂತ್ರೇ ವಿಶೇಷಾರ್ಥಪ್ರಕಾಶಿಕೇ ಗುರು ಶಿಷ್ಯಸಂವಾದೇ
ಷಟ್ಸ್ಥಲನಿರ್ಣಯೇ ಅವಸಾನವಿಧಾನಂ ನಾಮ ಪಂಚಮಾಧಿಕರಣಮ್ ।
ವಿಶೇಷಾರ್ಥ ಪ್ರಕಾಶಿಕಾ ಸಂಪೂರ್ಣಾ
ಇತಿ ಅಧಿಕರಣ ೫, ಗ್ರಂಥ ೩೮೬.

Remarks:

ಷಟ್ಸ್ಥಲನಿರ್ಣಯವನ್ನು ಗ್ರಂಥವು ಕುರಿತಿದೆ.

The work deals with 'Ṣaṭsthala Nirnaya' of Vīras'aiva system. It contains five adhikaraṇas with a total no of 386 granthas.

Sl. No 175. ವೀರಭದ್ರಜಯ ದಂಡಕವು್

VĪRABHADRAJAYADAṆḌAKAM

MS. No. 836. Author: Ṣaḍakṣari. Form: Stōtra. Substance: Palm-leaf. Size: $10\frac{1}{2}'' \times 1\frac{3}{4}''$. Character: Kannaḍa. Folios: 15. Lines on a page: 9. Letters in a line: 52. Appearance: Old. Condition: Good. Complete or incomplete: Complete.

Beginning: folio 53/2

। ಶ್ರೀ ವೀರಭದ್ರ ಜಯ ದಂಡಕವು್ ।

ಜಯ ಭದ್ರ ಗುಣಾಧಾರ ಜಯ ಭದ್ರಗಣಾವೃತ
ಜಯ ಶ್ರೀ ವೀರಭದ್ರೇಶ ಜಯ ಕಾಳಿಮನೋಹರ
ಜಯಜಯ ಜಗದಾಧಾರವಿಸ್ತಾರ–
ವಿಸ್ಫಾರ ರೋಷೋನ್ಮಿಷದ್ಭರ್ಗನಿರ್ಗಚ್ಛಜ್ವಲ
ಜ್ವಾಲಫಾಲಾನಲಾಕ್ಷಿಸ್ಫುರದ್ವಿಸ್ಫು....

End: folio 56

ಪೂಷ್ಣಸ್ಯಾಪಿರದೌಘಕುಂದನಿವಹವು್ ಯದ್ಯಜ್ಞವಾಟೀದಬೀ
ಮಾಲಾಕಾರ ಇವಶ್ರಿಯೋ ಭವತು ವಃ ಶ್ರೀ ವೀರಭದ್ರೇಶ್ವರಃ

ದಂಡಕಂ ಪಠತಿ ಯಃ ಪುಮಾನಿಯಮ್ ।

ಶ್ರೀ ಷಡಕ್ಷರಿ ಮನೀಷಿಣಾಕೃತವು್
ವೀರಭದ್ರಜಯ ವೈಭವಾಂಕಿತವು್
ಸರ್ವಸಂಪದಮಾಪ್ನುಯಾತ್ಪರವು್
ವೀರಭದ್ರಜಯದಂಡಕಃ ಸಮಾಪ್ತೋಯವು್ ಮಂಗಲಮಸ್ತು।

Remarks

ಓಲೆ ಪ್ರತಿಯ 15ಪುಟಗಳಲ್ಲಿ 42ರಿಂದ 52ರ ವರೆಗೆ ಸಂಕೀರ್ಣ ವಿಷಯವಿದೆ; ಅವುಗಳಲ್ಲಿ ಕೆಲವು ಓಲೆಗಳು ಮುರಿದಿದೆ. 53 ರಿಂದ 56ರ ವರೆಗೆ ಪ್ರಸಕ್ತಕೃತಿ ಬಂದಿದೆ.

The MS. has 15 pages from 42 to 56. The present work is on pages 53 to 56. Pages 42 to 52 deal with some miscellaneous subjects.

Sl. No. 176. ವೈದ್ಯಚಿಂತಾಮಣಿಃ [ಕನ್ನಡ ಭಾಷ್ಯದೊಂದಿಗೆ]

VAIDYACINTĀMAṆIḤ

MS. No. 842. Author: Vallabhendra. Form: Grantha (?) Substance: Palm-leaf. Size: 14″ × 1¼″. Character: Kannaḍa. Folios: 46. Lines on a page: 6. Letters in a line: 40. Appearance: Old. Condition: Good. Complete or incomplete: Incomplete.

Beginning: folio 1

ಶ್ರೀ ಗುರುವೇ ನಮಃ । ವೈದ್ಯಚಿಂತಾಮಣಿಶಾಸ್ತ್ರಮ್ । ಶುಭ
ಮಸ್ತು । ಶೋಭನಮಸ್ತು ।

। ಗ್ರಂಥ । ಶ್ರೀನಾಥಂ ಪಾರ್ವತೀನಾಥಂ । ವಾಣೀನಾಥಂ ಸರಸ್ವತೀ ।
ದುರ್ಗಾವಟುಕಹೇರಂಭಾನ್ । ಸಮಸ್ತಮ್ [ಸತತಾಂ ?]
ಮ್ಯುಹಮ್ ।೧।

ಶ್ರೀವತ್ಸಗಾತ್ರತಿಲಕಮ್ । ಜಗದ್ವಂದ್ಯಪಿತಾಮಹಮ್
ಅಮರೇಶ್ವರಬಂಧಸ್ಯ । ಪಿಯುಸೂನುಗುಣೌನ್ನತಃ ॥೨॥
ವಲ್ಲಭೇಂದ್ರ ವಿರಚಿತಮ್ । ಜನಾನಾಮ್ ಹಿತಕಾರಿಣಮ್
ವೈದ್ಯಚಿಂತಾಮಣಿನಾರ್ಮಮ್ । ಭೇಷಜಂ ಗ್ರಂಥಮುತ್ತ
ಮಮ್ ।೩।

End: folio 45

। ಗೋಮೇಧಿಕಶುದ್ಧಿಃ । ತತೋ ಗೋಮೇಧಿಕಂ ವಾಜಿ । ಮೂತ್ರೇ ಭವ್ಯಮ್
ದಿನತ್ರಯಮ್ ।
ತತೋ [ಬಿದಾರಿರಸ ಚ ?] । ಭಾವ್ಯಂ ಶುದ್ಧಿರ್ಭವಿಷ್ಯತಿ
।೧೧೨।

। ಗೋಮೇಧಿಕ ಭಸ್ಮಂ । ಶುದ್ಧಗೋಮೇಧಿಕ ಕೃಷ್ಣೇ। ದುತ್ತರದ್ರವಭಾವಿತಮ್।
ವಿಶ್ವಕರ್ಮ ಪುಟೀದಗ್ಧ್ವ । ತ್ರಿವಾರಂ ಭಸ್ಮವಾಪ್ನು
ಯಾತ್ ॥೧೧೩॥

Remarks :

ಆಯುರ್ವೇದವನ್ನು ಕುರಿತಿದೆ. ಅಮರೇಶ್ವರನ ಮಗ ವಲ್ಲಭೇಂದ್ರನು ರಚಿಸಿದ್ದಾನೆ. 2 ವಿಲಾಸಗಳಿವೆ. ಮೊದಲಿನದು (ಜ್ವರ ಸನ್ನಿಪಾತದೋಷಾತಿಸಾರನಿಧಾನಮ್) ಪೂರ್ತಿಯಾಗಿದೆ; 145 ಪದ್ಯಗಳಿವೆ. ಎರಡನೆಯದು ಅಸಮಗ್ರವಾಗಿದ್ದು 113 ಶ್ಲೋಕಗಳು ಮಾತ್ರ ಇವೆ. ಪ್ರತಿ ಶ್ಲೋಕಕ್ಕೂ ಸವಿಸ್ತರವಾದ ಕನ್ನಡ ವ್ಯಾಖ್ಯಾನವಿದೆ.

The work deals with Āyurvēda. The author of the work is Vallabhēndra, son of Amarēs'vara.

Sl. No. 177 ಶಬ್ದಮಂಜರಿ (?)

S'ABDAMAÑJARI

MS. No. 1098 (A). Author : ? Form : Different forms. Substance : Palm-leaf. Size : 7″ × 2″. Character : Kannaḍa. Folios : 18. Lines on a page: 12. Letters in a line : 35. Appearance : Old. Condition: Good. Complete or incomplete: Complete.

Beginning :

ವಾಗರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೇ
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ॥
ಅಕಾರಾಂತಃ ಪುಲ್ಲಿಂಗ ಶಂಕರ ಶಬ್ದಃ । ಶಂಕರಃ ಶಂಕರೌ
ಶಂಕರಾಃ ।...

End :

ಸಮಾಸಾನಾಂ ಪ್ರಾಧಾನ್ಯಂ ಸ್ಯಾಚ್ಚತುರ್ವಿಧಂ ।
ಅಸ್ಯಾಯಮರ್ಥಃ । ಅವ್ಯಯೀಭಾವಸ್ತತ್ಪುರುಷಃ ।
ಬಹುವ್ರೀಹಿರ್ದ್ವಂದ್ವಶ್ಚೇತಿ ಚತುರ್ವಿಧಮೇವ । ಇತಿ
ಸಮಾಸವಿವರಣಂ ಸಂಪೂರ್ಣಂ ಮಂಗಳಮಸ್ತು ॥

Remarks :

ಆಖ್ಯಾತ, ನಾಮ ಮತ್ತು ಸಮಾಸ ಪ್ರಕರಣಗಳನ್ನು ಕುರಿತಿದೆ.

The work deals with the conjugation of verbs, declensions of nouns and samāsas.

Sl. No. 178. ಶಿವಕವಚಮ್ (?)

SIVAKAVACAM

MS. No. 469. Author : ? Form : Stōtra. Substance : Palm-leaf. Size : 7″ × ¾″. Character : Kannaḍa. Folios: 14. Lines on a page : 4. Letters in a line : 22. Appearance: Old. Condition : Defective. Complete or incomplete : Complete.

Beginning : folio 1

ಶ್ರೀ ಗಣೇಶಾಯ ನಮಃ । ಶಿವಕವಚಮ್ ।
ಅಥಃ ಪರಂ ಸರ್ವಪುರಾಣಗುಹ್ಯಂ
ನಿಶ್ಶೇಷಪಾಪೌಘಹರಂ ಪವಿತ್ರಮ್ ।
ಜಯಪ್ರದಂ ಸರ್ವ ವಿಪತ್ಪ್ರಮೋಚನಮ್ ।
ವಕ್ಷ್ಯಾಮಿ ಶೈವಂ ಕವಚಂ ಹಿತಾಯತೇ
ವೃಷಭ ಉವಾಚ । ನಮಸ್ಕೃತ್ವಾಮಹಾದೇವಮ್ ।
ವಿಶ್ವವ್ಯಾಪಿನಮೀಶ್ವರಮ್ ।

End : folio 14

....ಭದಪ್ರಯುಷ್ಯನ್ ಸಮ್ಯಕ್ ಅನುಭಾ
....ಭಯೋಗೀಶ್ವರಗತಿರ್ಯಯೌ । ಇತಿ ಶ್ರೀ
....ಡೇ ಶಿವಕವಚ ಕಥಾನಕವರ್ನ:

ದ್ವಾದಶೋಧ್ಯಾಯಃ । ಶ್ರೀ ಸದಾಶಿವಾರ್ಪಣಮಸ್ತು ।

Remarks :

ಇದು ಪ್ರಾಯಶಃ 'ಶಿವಕವಚ' ಎಂಬ ಕೃತಿಯ 12 ನೆಯ ಅಧ್ಯಾಯವಿರಬಹುದು. ಪ್ರತಿ ಹುಳು ಹಿಡಿದು ಶಿಥಿಲವಾಗಿದೆ.

The present adhyāya is the 12th adhyāya of some work, the name of which is missing here.

Sl. No 179. ಶಿವಾನಂದಲಹರೀ ವ್ಯಾಖ್ಯಾನಂ

ŚIVĀNANDALAHARĪ VYĀKHYĀNAM

MS. No. 1165 (A). Author : Vēṅganasudhi. Form: Stōtra. Substance : Palm-leaf. Size : 9″×2″. Character : Kannaḍa. Folios : 30. Lines on a page : 11. Letters in a line: 38. Appearance: Old. Condition : Fair. Complete or incomplete : Complete.

Beginning : folio 1

ಶ್ರೀ ಗುರುಭ್ಯೋ ನಮಃ । ಸವ್ಯಾಖ್ಯಾನ ಶಿವಾನಂದಲಹರೀ ಲಿಖ್ಯತೇ ।

ಸಮಸ್ತಸುಮನಸ್ತೋಮ । ಮಸ್ತಕನ್ಯಸ್ತಪಾದುಕಮ್
ಅಸ್ತು ಮೇ ಸ್ವಸ್ತಿದಂ ವಸ್ತು । ಹಸ್ತಿಭಿನ್ನಸ್ತುಲೋಕೃತಿ ।
ಇಹಾನ್ವಯ ಮುಖ್ಯೈನೈವ । ವ್ಯಕ್ತಂ ವ್ಯಾಖ್ಯಾಯತೋಧುನಾ ।
ಶಿವಾನಂದಲಹರ್ಯೇಷಾ ಸುಖೇನಾರ್ಥಪ್ರತೀತಯೇ ।

End : folio 30

ಅಸಮು ವೀತಿ ಧಾತೋ ಲಂಜ್ । ಅಸ್ಮಾಕಂ ಜನ್ಮಜನನಂ ।
ಅಸಜ್ಜನ್ಮಾತತ್ । ಕವಾದಿ ಚ ಸಫಲಂ ಸಾರ್ಥಕವತ್ । ಅಭವತ್ ।
ಅಹವು ಪರಮು ಶಿವಸ್ಯ ದಯಾಯಾವತ್ ಪಾತ್ರಂ ಭೋಜನ ಮೇಯಾಸ್ಮಿ ।
ಇತಿ ಶ್ರೀ ರಾಜಕುಲಾಂಬುಧಿ ಪೂರ್ಣಚಂದ್ರ
ಶ್ರೀ ಮುದಿಯೇಂದ್ರ ಪೃಥ್ವೀಪಾಲ ಪ್ರೋತ್ಸಾಹಿತ
ಶ್ರೀ ವೇಂಗನ ಸುಧೀ ವಿರಚಿತ ಶಿವಾನಂದ ಲಹರೀ ವ್ಯಾಖ್ಯಾನಂ।

Remarks :

ಶಿವಾನಂದಲಹರಿಗೆ ವೇಂಗನಸುಧಿಯು ಸಂಸ್ಕೃತದಲ್ಲಿ ಬರೆದ ವ್ಯಾಖ್ಯೆಯಿದು. ನೂರು ಶ್ಲೋಕಗಳಿವೆ.

The work is a commentary in Sanskrit for S'ivānandalaharī by Veṅganasudhi. It contains 100 s'lōkas.

Sl. No. 180. ಸಿದ್ಧಾಂತ ಶಿಖಾಮಣಿ
SIDDHĀNTA S'IKHĀMAṆI

MS. No. 220 (E). Author : Rēṇukācārya. Form : Grantha (?) Substance : Palm-leaf. Size : 15″ × 1¾″. Character: Kannaḍa. Folios: 49. Lines on a page: 8. Letters in a line : 45. Appearance : Old. Condition : Fair. Complete or incomplete : Incomplete.

Beginning : folio 1

ಶ್ರೀ ಶಿವಾಯ ನಮಃ । ಸಿದ್ಧಾಂತ ಶಿಖಾಮಣಿಃ ।
। ಗ್ರಂಥ । ತ್ರೈಲೋಕ್ಯ ಸಂಪದಾಲೇಖ್ಯ ಸಮುಲ್ಲೇಖನ ಭಿತ್ತಯೇ ।
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ ॥೧॥

ಬ್ರಹ್ಮೇತಿ ವ್ಯಪದೇಶಸ್ಯ ವಿಷಯಮ್ ಸಂಪ್ರಚಕ್ಷತೇ
ವೇದಾಂತಿನೋ ಜಗನ್ಮೂಲಮ್ ತಾಮ್ ನಮಾಮಿ ಪರಮ್
ಶಿವಮ್ ॥೨॥

End : folio 49

ಕೃತಾರ್ಥಾ ಮೇ ಪುರೀ ಏಷಾ ಕೃತಾರ್ಥೇ ರಾಕ್ಷಸಾನ್ವಯಃ
ಜೀವಿ....ಕೃತಾರ್ಥಂ ಮೇ ಯಸ್ಯ ತಮ್ ದೃಷ್ಟಿಗೋಚರಃ॥೯॥
ಇತಿ ಶ್ರೀ.. .ಕಲ್ಯಾಣಮ್ ರಾಕ್ಷಸೇಂದ್ರಮ್ ಗಣೇಶ್ವರಃ
ಬಭಾಷಿ ಸಸ್ಮಿತೋ ವಾಣೀಮ್ । ವಿಭೋಲ್ಲಾಸ

Remarks :

ವೀರಶೈವ ಸಿದ್ಧಾಂತವನ್ನು ಕುರಿತ ಗ್ರಂಥ. ಗ್ರಂಥವು ಅಸಮಗ್ರವಾಗಿದ್ದು, 22 ಪರಿಚ್ಛೇದಗಳು ಪೂರ್ತಿಯಾಗಿಯೂ 23 ನೆಯ ಪರಿಚ್ಛೇದದಲ್ಲಿ 10 ಶ್ಲೋಕಗಳವರೆಗೆ ಮಾತ್ರವೂ ಲಭ್ಯವಾಗಿದೆ.

The work deals with Vīraśaiva philosophy.

PART II
PAPER MANUSCRIPTS

Sl. No. 181. ಅಖಂಡೇಶ್ವರನ ಷಟ್ಸ್ಥಲದ ವಚನ

AKHAṆḌES'VARANA ṢAṬSTHALADA VACANA

MS. No. 41/17. Author: Nirālambas'araṇa. Form: Vacana. Substance: Paper Size: 12½″ × 4″. Character: Kannada. Folios: 133. Lines on a page: 9. Letters in a line: 35. Appearance; Not old. Condition: Good. Complete or incomplete: Complete. See K.K. Vol. II, p. 561.

Beginning: folio 1

ಶ್ರೀ ಅಖಂಡೇಶ್ವರ ಷಟ್ಸ್ಥಲದ ವಚನವು । ಶ್ರೀ ಗುರು
ಷಣ್ಮುಖಾಚಾರ್ಯರ ಶ್ರೀಪಾದ ಕಮಲ ಭೃಂಗಾಯಮಾನ
ಸಹವಾಸಿ ಷಣ್ಮುಖಸ್ವಾಮಿಗಳು ನಿರೂಪಿಸಿದ ತುರ್ಯ ನಿರಾಲಂಬ ಶರಣನ
ಅರುಹಿನ ಷಟ್ಸ್ಥಲದ ವಚನ ಬರವುದಕ್ಕೆ ಶುಭಮಸ್ತು ॥....
ಪಿಂಡಸ್ಥಲ । ಆದಿ ಅನಾದಿಯಿಲ್ಲದಂದು ನಾದ ಬಿಂದು ಕಳೆಗಳಿಲ್ಲ ದಂದು
ವೇದಶಾಸ್ತ್ರಾಗಮತರ್ಕತಂತ್ರಗಳಿಲ್ಲದಂದುಬಾಲಚಂದ್ರನ ನೋಡ ದಂದು
ಸಾಲಮಸ್ತಕಾಮಾಲಿಯ ಧರಿಸದಂದು ಚೌಷಷ್ಟಿವಿದ್ಯಾಕಳೆಗಳಿಲ್ಲ ದಂದು
ಭೇದಾಭೇದಗಳಿಲ್ಲದಂದು ತೋರುತೋರುವ ತೋರಿಕೆಗಳೇನೂ
ಇಲ್ಲದಂದು ಅಖಂಡೇಶ್ವರ ನಿಮ್ಮನಿರವಯವೇ ಅನಂತಕಾಲವಿದ್ದಿ ರಂದು ॥೧॥

End: folio 133

ಶ್ರೀಮತ್ಪರಮ ಪರತರಪಾವನ ಪಂಚಮುಖ ದಶಮುಖ ತ್ರಿನೇತ್ರ
ನೀಲಗ್ರೀವಪಾದಲೋಚನ ಚಂದ್ರಮೌಳಿ ರತ್ನಕಿರೀಟಸರ್ವಾಂಗ ಮೌಕ್ತಿಕದ

ಹಾರ ತೊಡೆಯಲ್ಲಿ ಗೌರಿ ಮುಡಿಯಲ್ಲಿ ಗಂಗೆ ಕಡೆಗಣ್ಣ ನೋಟ ಕರುಣಸಾಗರ
ಸುರರ ವಂದ್ಯ ಋಷಿಗಳ ಸೇವ್ಯ । ಪ್ರಮಥಗಣ ರುದ್ರಗಣ ವೃಷಭಗಣ
ಮಹಾಗಣವೆ ಚಿನ್ನದ ಗೌರಿಗೆ ರನ್ನದ ಕೋಡುಗಲ್ಲು ಪವಳದ ಕೋಟೆ
ಪಚ್ಚದ ಮೇಲುಗಟ್ಟು ಕಾಮಧೇನುವಿನ ಹಿಂಡು ಸಂಜೀವನದ ಮೂಲಿಕಾ...
ಮಹಾಮಹಿಮ ಅರಸು ಅಖಂಡೇಶ್ವರನ ಚರಣಕ್ಕೆ ನಮೊ ನಮೋ ಎಂದು...

Remarks :

ಕೃತಿಯ ಕಾಲ ಶಕ 1742 ವಿಕ್ರಮನಾಮ ಭಾದ್ರಪದ ಆದಿತ್ಯ ವಾರ. ಇದರಲ್ಲಿ ವೀರಶೈವ ಷಟ್ಸ್ಥಲ ಶಾಸ್ತ್ರವು ನಿರೂಪಿತ ವಾಗಿದೆ.

Vīras'aiva Ṣaṭsthalas'āstra is explained in 717 Vacanas each ending with 'ಅಖಂಡೇಶ್ವರಾ'. The author's original name seems to be Ṣaṇmukhācārya.

Sl. No. 182. ಅನುಭವಶಿಖಾಮಣಿ ANUBHAVAS'IKHĀMAṆI

MS. No. 65/1. Author : Nārasimha. Form : Ṣaṭpadi. Substance : Paper. Size: $9\frac{1}{2}'' \times 6\frac{1}{2}''$. Character : Kannaḍa. Folios : 83. Lines on a page: 19. Letters in a line: 32. Appearance: Not old. Condition : Fair. Complete or incomplete : Incomplete. See K.K. Vol. III. p. 121.

Beginning : folio 1

ಅನುಭವ ಶಿಖಾಮಣಿ ಕಾವ್ಯ ಬರೆವುದಕ್ಕೆ ಶುಭಮಸ್ತು...
ಸೂಚನೆ...

। ಭಾ. ಷ । ಮೂರು ಮುಖದಲಿ ಮೆರೆಯುತಿರ್ಪನೆ ।
ಆರು ನಯನದಿ ನೋಡುತಿರ್ಪನೆ ।
ಮಾರುತನ ಸುತವೈರಿಯಣುಗನೆ ವೇದ್ಯವುಳ್ಳವನೆ ॥
ಆರುಚರಣನೆ ಯೆರಡುಬಾಲನೆ
ಮೂರುಗುಣ ಪರಿಪೂರ್ಣ ಗಣಪತಿ
ತೋರು ಮತಿ ಅನುಭವ ಶಿಖಾಮಣಿಯೆಂಬ ಕಾವ್ಯಕ್ಕೆ ॥೭॥

End : folio 83

। ಭಾ. ಷ । ಧರೆಯೊಳಗೆ ಈ ಕಾವ್ಯ ಹಂಪೆಯ ।
ಹರಿಹರಾತ್ಮ(ಜ) ರಾಘವಾಂಕನು ।
ಹರುಷದಿಂ ಶರಷಟ್ಪದಿಯಲಿ ಮಾಡಿರಲು ನೋಡಿ ॥
ಗುರುಕಟಾಕ್ಷದಿ ಇಲ್ಲಿ ಸಾರ್ಥವ ।
ನರಿತು ಮೂರುತೆರದ ವರ್ಣದಿಂ ।
ಹರುಷವಿಟ್ಟನು ಶರಷಟ್ಪದಿ ಮುಖಾದಿ ವಾರ್ಧಿಕದಲ್ಲಿ ॥೫೦॥

Remarks :

ರಾಘವಾಂಕನು ಶರಷಟ್ಪದಿಯಲ್ಲಿ ಬರೆದ ಗಂಭೀರರಾಯನ ಕಥೆಯನ್ನು ಇಲ್ಲಿ ಶರ, ಭಾಮಿನಿ ಮತ್ತು ವಾರ್ಧಕ ಷಟ್ಪದಿಗಳಲ್ಲಿ ಹೇಳಲಾಗಿದೆ ಎಂಬ ವಿಷಯವು ಈ ಕೃತಿಯ 24 ನೆಯ ಸಂಧಿ 50 ನೆಯ ಪದ್ಯದಿಂದ ತಿಳಿದುಬರುತ್ತದೆ.

From the stanza 50 sandhi 24, it is known that Rāghavāṅka, son of Harihara of Hampi wrote the story of Gambhīrarāya, a king of Kāśmīra in S'ara ṣaṭpadi and the same is narrated here in S'ara, Bhāmini and Vārdhaka Ṣaṭpadis.

The work has 23 sandhis complete and sandhi 24th is incomplete having 50 padyas.

Sl. No. 183. ಅನುಭವಸಾರಂ

ANUBHAVASĀRAM

MS. No. 143/15 (A). Author: Nijaguṇayōgi. Form: Tripadi. Substance: Paper. Size: 12″×4″. Character: Kannaḍa. Folios: 18. Lines on a page: 15. Letters in a line: 48. Appearance: Not old. Condition: Good. Complete or incomplete: Complete. See K.K. Vol. II, p. 153.

Beginning:

ನಿಜಗುಣಯೋಗಿ ವಿನುತಾನುಭವಸಾರಂ ।

ಸೂತ್ರ । ಪರತರಾನಂದಮಯ ಗುರುಶಂಭುಪದವೆನ್ನ
ಶಿರದೊಳಿರುತಿರ್ಕೆ ನಿಜಕರುಣದಿಂದ ॥

ತ್ರಿಪದಿ । ಶ್ರೀಗುರುವೆ ನಿಜಸುಖದ ಸಾಗರವೆ ತೆರೆವುಸಗು
ತಾಗಳುಂ ಬೆಳಗುತಿಹ ನಿನ್ನ ಕಡೆಗಣ್ಣ
ಳೀಗೆ ಸಂತಸಮನಖಿಳರ್ಗೆ ॥೧॥

End: folio 18

ಇತಿ ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣ ಲಕ್ಷಣಲಕ್ಷಿತ ನಿರಂಜನ
ಪರಂಜ್ಯೋತಿಸ್ವರೂಪ ಶ್ರೀ ಶಂಭುಪಾದಾರವಿಂದ ಮಕರಂದ
ಸೌಗಂಧಿಕಾಲುಬ್ಧ ಮತ್ತಮಧುಕರಾಯಮಾನ । ಶ್ರೀ ನಿಜ ಗುಣಯೋಗಿ
ವಿರಚಿತಮಪ್ಪನುಭವಸಾರ ಪ್ರಕರಣಂ ಈ ೧೦ ಪ್ರಕರಣಕ್ಕೆ
ಸಂಧಿ ೮ ಕ್ಕಂ ಸೂತ್ರ ೪೬ಕ್ಕಂ ಪದ ೫೩೫ಕ್ಕಂ ಮಂಗಳಮಸ್ತು
...ಶ್ರೀ ಶ್ರೀ ಶ್ರೀ

Remarks :

ಕೃತಿಯು ಕವಿಯೇ ತಿಳಿಸುವಂತೆ ವೇದಸಾರವನ್ನು ಸ್ಪಷ್ಟಪಡಿಸುವುದಾಗಿದೆ. ಗುರು ಶಿಷ್ಯ ಸಂವಾದರೂಪದಲ್ಲಿದೆ.

The work, as the poet himself says, clearly explains the essence of all Vedas. It is in the form of a discussion between a pupil and a preceptor.

Sl. No. 184. ಅಮರಕೋಶ (ವ್ಯಾಖ್ಯಾನ)

AMARAKŌS'A (VYĀKHYĀNA)

MS. No. 1/3. Author : ? Form: Prose. Substance: Paper. Size : $8\frac{1}{2}'' \times 6''$. Character : Kannaḍa. Folios : 152. Lines on a page: 12. Letters in a line: 12. Appearance : Not old. Condition : Good. Complete or incomplete : Incomplete.

Beginning: folio 1

ದ್ವಿತೀಯಕಾಂಡವ್ಯಾಖ್ಯಾನ । ವರ್ಗಃ ಪೃಥ್ವೀ ಪುರಕ್ಷ್ಮಾಭೃದ್ವನೌಷಧಿ
ವ್ಮೃಗಾದಿಭಿಃ । ನೃಬ್ರಹ್ಮಕ್ಷತ್ರ ವಿಟ ಶೂದ್ರೈಃ ಸಾಂಗೋಪಾಂಗೈಃ ಇವೋದಿತಾಃ ।
ಟೀಕೆ । ಭೂವರ್ಗ । ಪುರವರ್ಗ । ಶೈಲವರ್ಗ । ನೌಷಧಿವರ್ಗ। ಮೃಗಾಧಿವರ್ಗ ।
ನೃವರ್ಗ । ಬ್ರಹ್ಮವರ್ಗ । ಕ್ಷತ್ರಿಯವರ್ಗ। ವೈಶ್ಯವರ್ಗ। ಶೂದ್ರವರ್ಗ । ಇಂತೀ ಹತ್ತು
ವರ್ಗಂಗಳು ಹೇಳಲ್ಪಡುತ್ತವೆ.

End : folio 80

....ಲತೆಗಳ ಸಮೂಹದಲ್ಲಿಯೂ ಸೇನಾವಿಶೇಷದಲ್ಲಿಯೂ । ಕೋಟೆ
ಮೊದಲಾದುದರಲ್ಲಿಯೂ ರಕ್ಷಣಾರ್ಥವಾದ ಸ್ಥಾನದಲ್ಲಿಯೂ । ಸೇನೆಗಳ ಸನ್ನಾಹ

ದಲ್ಲಿಯೂ ಕಂಬೆಗಳ ಸಮೂಹದಲ್ಲಿಯೂ । ವಂ॥ ಜಾವಿಾಃ । ಸ್ವಸರೀ । ಒಡ
ಹುಟ್ಟಿದವಳಲ್ಲಿಯೂ ಕುಲಸ್ತ್ರೀಯಲ್ಲಿಯೂ । ವಂ ೧೫೩ ॥ ಕ್ಷಮಾ। ಕ್ಷಿತೌ । ಭೂಮಿ
ಯಲ್ಲಿಯೂ । ಸಮಾನವಾದದರಲ್ಲಿಯೂ

Remarks :

ಅಮರಕೋಶದ 2 ಮತ್ತು 3 ನೆಯ ಸರ್ಗಗಳಿಗೆ ಕನ್ನಡದಲ್ಲಿ ವ್ಯಾಖ್ಯೆ ಬರೆದಿದೆ.

This is a commentary in Kanna*d*a for the 2nd and 3rd sargas of Amarak*ō*s'a.

Sl. No. 185. ಆದಿಪರ್ವ

ĀDIPARVA

MS. No. 156/6. Author: Kum*ā*ravy*ā*sa. Form: Ṣa*t*padi. Substance: Paper. Size: 11″ × 7″. Character: Kanna*d*a. Folios: 52. Lines on a page: 14. Letters in a line: 35. Appearance: Not old. Condition: Good. Complete or incomplete: Incomplete. See K.K. Vol. II, p. 64.

Beginning : folio 1

ಶ್ರೀ ಗಣಪತಯೇ ನಮಃ । ಶ್ರೀ ಶಾರದಾಂಬಾಯೆ ನಮಃ । ಆದಿಪರ್ವ

ಬರವುದಕ್ಕೆ ಶುಭಮಸ್ತು....

। ಭಾ.ಷ । ಶ್ರೀವನಿತೆಯರಸನೆ ವಿಮಲರಾ
ಜೀವಪೀಠನ ಜನಕ ಜಗಕತಿ
ಪಾವನನೆ ಸನಕಾದಿ ಸಜ್ಜನನಿಕರದಾತಾರ ॥
ರಾವಣಾಸುರಮಥನ ಶ್ರವಣಸು
ಧಾವಿನೂತನ ಕಥನ ಕಾರಣ
ಕಾವುದಾನತ ಜನವ ಗದುಗಿನ ವೀರನಾರಯಣ ॥೧॥

End : folio 52

....ಕೋಮಳನ ಮಸ್ತಕವುಷ್ಣವಾರದಿರೆ ॥೭॥
ಅದಕೆ ಗ್ರೀಷ್ಮಂಬರಲುತಾವತಿ ।
ವಿಧಿಸಿದರು ಶ್ರೀ ಬ್ರಹ್ಮದೇವರು ।
ಮುದದಿ ಶ್ರೀ ಕೈಲಾಸವಾಸಿಗೆ ಶೈತ್ಯಧಾರೆಯನು ॥
ಉದಕವನು ವರ ಹತ್ತುಸಾವಿರ
ಸುದತಿಯರು ವರ ಪೂರ್ಣಕುಂಭದ
ಮುದದಿಯಭಿ.. .

Remarks :

ಕುಮಾರವ್ಯಾಸ ಭಾರತದ ಆದಿಪರ್ವದ ಈ ಪ್ರತಿ ಸಂಧಿ 8 ಪದ್ಯ 8ಕ್ಕೆ ನಿಲ್ಲುತ್ತದೆ.

Here is Ādiparva of Kumāravyāsa Bhārata. It is incomplete and stops at the 8th stanza of sandhi 8.

Sl. No. 186. ಉದ್ಯೋಗಪರ್ವ
UDYŌGAPARVA

MS. No. 20/26. Author : Kumāravyāsa. Form : Ṣaṭpadi. Substance : Paper. Size : $8\frac{1}{2}'' \times 6''$. Character: Kannaḍa. Folios: 43. Lines on a page: 20. Letters in a line : 30. Appearance : Not old. Condition : Good. Complete or incomplete: Complete.

Beginning : folio 1

। ಭಾ. ಪ ॥ ಸೂಚನೆ । ನಂಬಿದವರಿಗೆ ತನ್ನತೆತ್ತಿಹ ।
ನೆಂಬ ಬಿರುದನು ಮೆರೆದು ಭಕ್ತರು ।
ಟುಂಬಿ ಸಾರಥಿಯಾದನೊಲಿದರ್ಜುನಗೆ ಮುರವೈರಿ ॥

ಕೇಳು ಜನಮೇಜಯ ಧರಿತ್ರೀ । ಪಾಲಕುಂತೀತನಯರುನ್ನತ ।
ದೇಳಿಗೆಯನೇನೆಂಬೆನೈ ಕಾರುಣ್ಯಸಿಂಧುವಲಾ ।।
ಶ್ರೀಲತಾಂಗಿಯ ರಮಣನೈವರೊ। ಳಾರೊಡೆಯರಾರೆಂಬ ಭೇದವ
ಬೀಳುಕೊಟ್ಟೇ ನಡಸುತಿರ್ದನು ತನ್ನ ಮೈದುನರಾ ।।೧।।

End : folio 43

ಬಲದ ಮುಂಗಡೆ ಭೀಮನದು ಪಿಂ ।
ಗಲಿಯೊಳಾತನ ಕಾವ ಬೀಡಿನ ।
ವಳಿಯ ದಾರೈಕೆಗಳು ಸಾತ್ಯಕಿ ನಕುಲ ಪಾರ್ಥರಿಗೆ ॥
ಬಲಮಹಾಂಬುಧಿಯೊಳಗಿರಲು ಬಲು
ತಳವರಿಕೆ ಹೈಡಿಂಬಿ ಪಾಂಡವ
ರುಳಿದು (?) ಗದುಗಿನ ವೀರನಾರಾಯಣನ ಸುಯಿಧಾನ ।।೪೯।।
ಅಂತು ಸಂಧಿ ೧೨ ಪದ ೫೯೮ ಕ್ಕಂ ಮಂಗಳಂ ಮಹಾ

Remarks :

ಪ್ರತಿಯಕಾಲ ಶಾ. ಶ. 1777 ರಾಕ್ಷಸನಾಮಸಂವತ್ಸರ ಮಾರ್ಗಶಿರ ಶುದ್ಧ ಏಕಾದಶಿ ಹನ್ನೊಂದು ಬುಧವಾರ.

Udyōgaparva of Kumāravyāsa Bhārata is narrated in 12 sandhis.

Sl. No. 187. ಏಕಾಕ್ಷರ ನಿಘಂಟು ಟೀಕೆ

ĒKĀKṢARANIGHAṆṬU ṬĪKE

MS. No. 145/5. Author : ? Form : Prose. Substance : Paper. Size : 15″ × 2″. Character : Kannaḍa. Folios : 2. Lines on a page : 10. Letters in a line : 45. Appearance : Not old. Condition : Good. Complete or incomplete : Complete.

Beginning: folio 1

ಶ್ರೀ ಗುರು ಬಸವಲಿಂಗಾಯ ನಮಃ । ಏಕಾಕ್ಷರ ನಿಘಂಟ ಪ್ರಾರಂಭಃ ।

ಗ್ರಂಥ । ಪೂರ್ವೇ ಸೂರ್ಯೇದಿಗೇರ್ಹಂತೆ । ಧ್ವಜೇ ಗಜೇ ಖಗೇಶ್ವರೇ ।
ಧರೇ ಮರೇ ಚ್ಯುತೇ ಭಾಗ್ಯೇ ಅಕಾರಾರ್ಥೇಷು ದ್ವಾದಶೇ ॥

ಟೀಕು । ಪೂರ್ವದಲ್ಲಿ ಸೂರ್ಯನಲ್ಲಿ ಪೂರ್ವದಿಕ್ಕಿನಲ್ಲಿ ಜಿನೇಶ್ವರನಲ್ಲಿ
ಧ್ವಜಗಳಲ್ಲಿ ಆನೆಯಲ್ಲಿ ಗರುಡಪಕ್ಷಿಯಲ್ಲಿ
ಭೂಮಿಯಲ್ಲಿ ದೇವೇಂದ್ರನಲ್ಲಿ ಕೃಷ್ಣನಲ್ಲಿ ಸಕಲ ಭಾಗ್ಯಂಗಳಲ್ಲಿ
ಈ ಹನ್ನೆರಡರಲ್ಲಿ ಅಕಾರಾಕ್ಷರವು ವರ್ತಿಸಿರುವುದು ॥೧॥

End: folio 2

ಅಶ್ರ...ಕ್ಷಿ ಕ್ಷಯೇ ಚೈವ। ಸುಕ್ಷೇತ್ರೆ ರಾಕ್ಷಸಿ ಪಿಚ
ಏಕಾಕ್ಷರ ನಿಘಂಟೋಯಂ ಕಾವ್ಯಚಾತುರ್ಯ ಸಿದ್ಧಿದಃ ॥೫೨॥
ಇತಿ ವರರುಚಿಕೃತೇಕಾಕ್ಷ ನಿಘಂಟ ಸಮಾಪ್ತಾಃ ಶ್ರೀ

Remarks:

ವರರುಚಿ ಕೃತವಾದ ಸಂಸ್ಕೃತ ಏಕಾಕ್ಷರನಿಘಂಟಿಗೆ ಇಲ್ಲಿ ಕನ್ನಡದ ವ್ಯಾಖ್ಯಾನವಿದೆ; ಶಬ್ದಶಃ ಭಾಷಾಂತರವಿದೆ. ಮೂಲವನ್ನೂ ಕೊಟ್ಟಿದೆ. ವ್ಯಾಖ್ಯಾನವು ಮಾತ್ರ 20ನೆಯ ಪದ್ಯಕ್ಕೆ ನಿಂತಿದೆ.

This work is a commentary and translation of *Ēkākṣara Nighanṭu*, written by Vararuci. The text is also given here. Here the text is complete in two pages where as the commentary stops at stanza 20.

Sl. No. 188 [ಒಂದು ಪ್ರಾಚೀನ ಗ್ರಂಥ] (?)

[ONDU PRĀCĪNA GRANTHA]

MS. No. 154/1. Author: ? Form: Prose. Substance: Paper. Size: 13″×8″. Character:

Kanna*d*a. Folios: 107. Lines on a page: 19. Letters in a line: 40. Appearance: Not old. Condition: Good. Complete or incomplete: Incomplete.

Beginning: folio1

ಈ ಗ್ರಂಥವು ಪ್ರಾಚೀನ ಕಾಲದ್ದು ಇದ್ದು ಇದರ ತರ್ಜುಮೆಯು ಪೂರ್ವದ ವಿಜಾಪುರ ಬಾದಶಾಹೀ ಕಾಲದಲ್ಲಿ ಮಾಡಿದ್ದು ಆದೆ. ಮತ್ತು
ಈ ಗ್ರಂಥವು ದೇವತಾನುದೇವತೆಗಳ ಕಾಲದಿಂದ ನಡೆದದ್ದು ಆದೆ. ಆಕಾಲದ ಇಮಾರತುಗಳೂ ದೇವಾಲಯುಗಳೂ ಮುಂತಾದವುಗಳು ಇದುವರೆಗೂ ಸ್ಥಿರವಾಗಿ ಇರುತ್ತವೆ. ಮತ್ತು ಅವು ಜನರಿಗೆ ಆಶ್ಚರ್ಯ
ಕರವಾಗಿ ತೋರುತ್ತವೆ. ಆಕಾಲದ ಜನರು ಹ್ಯಾಗಿದ್ದರು ಅಂದರೆ ಲೋಕ ಯಾವತ್ತೂ ನಿಶ್ಚಿಂತಿಕೆಯಲ್ಲಿ ಇಟ್ಟಿದ್ದರು....

End: folio 107–108

....ಇದನ್ನು ತಿಂದ ಮನುಷ್ಯನನ್ನು ಯಾವ ವಿಷವೂ ಬಾಧಿಸಲಾರದು. ಪರೀಕ್ಷೆಗಾಗಿ ಇವನಿಗೆ ಅಫೀಮು, ಸುಂಬಳಕಾರ (ಶಂಖ ಪಾಷಾಣ) ಮುಂತಾದ ವಿಷಗಳನ್ನು ಕೊಟ್ಟು ಬಳಿಕ ಇದರ
ತುಕುಡವನ್ನು ತಿನ್ನಿಸಿದರೆ ಅವು ಇವನಿಗೆ ಅಮೃತ ಪ್ರಾಯುವಾಗಿ ಪರಿಣಮಿಸಿ ಬಲವನ್ನು ಕೊಡುವವು: ಅನೇಕ ರೋಗಗಳನ್ನು ಹೋಗಲಾಡಿ
ಸುವ ಭಾವಿ:

Remarks:

ಆರಂಭದಲ್ಲಿ ಇದು ಒಂದು ಪ್ರಾಚೀನ ಗ್ರಂಥವೆಂತಲೂ ಬಿಜಾಪುರದ ಬಾದಶಾಹೀಕಾಲದಲ್ಲಿ ಇದರತರ್ಜುಮೆಯಾಗಿದೆಯೆಂತಲೂ ಹೇಳಿದೆ. ಕವಿಯು ಹೆಸರಾಗಲೀ ಗ್ರಂಥದ ಹೆಸರಾಗಲೀ ಹೇಳಿಲ್ಲ.

The name of the author or of the work is not given. In the beginning lines of the work it is said that this is an ancient

book translated in the times of Bādas'āhī of Bijāpur. The language used here is colloquial. See Sl. No. 235.

Sl. No. 189. [ಔಷಧ, ಜ್ಯೋತಿಷ್ಯ ಇತ್ಯಾದಿ]

[AUṢADHA, JYŌTĪṢYA]

MS. No. 148/12. Author : ? Form : Prose. Substance : Paper. Size : $8\frac{1}{2}'' \times 6''$. Character : Kannaḍa. Folios: 58. Lines on a page: 35. Letters in a line: 35. Appearance : Not old. Condition: Good. Complete or incomplete : Incomplete.

Beginning : folio 1

ಶ್ರೀ ಗುರು ಬಸವಲಿಂಗಾಯ ನಮಃ । ಔಷಧ ಬರೆಯುವದಕ್ಕೆ
ಶುಭಮಸ್ತು । ಹಳೀ ನೋತಕ್ಕೆ ಒಂದು ಪುಷ್ಟಿ । ಮೂರುವರಿ ಶೇರು
ತರೆದ ಅಂಟು ಮೂರುವರಿಸೇರು....ಸಕ್ಕರಿ ಬಾದಾಮಿ ಬೀಜ
ಮೂರುತೊಲಿ। ಒಂದುತೊಲಿ ಜಾಜೀಕಾಯಿ ಒಂದು ತೊಲಿ ಪತ್ರಿ
ಮೂರು ಮಾಸಿ ಲವಂಗ। ಅಂಟು ಸ್ವಲ್ಪ ಹುರಿದು ಸಣ್ಣಾಗಿ ಬೀಸಿ
ಇಷ್ಟನ್ನೂ ಅರದು ಪುಡಿಮಾಡಿ ಅದರೊಳಗೆ ಕೂಡಿಸಿ ಏಳು ಭಾಗ ಮಾಡಿ
ಅದರತಕ್ಕಷ್ಟು ಆಕಳಹಾಲಿನಲ್ಲಿ ಒಂದು ಪಾಲು ಪುಡಿಹಾಕಿ ಒಂದು
ಕುದಿ ಬರೋತಂಕ ಕುದಿಸಿ ತುಪ್ಪದ ಸಂಗಡ ತಕೋಬೇಕು.

ಹೀಗೆ ೭ ದಿನ ತಕ್ಕೊಳಿ ಹಳೆ ನೋವು ಮಾಣ್ಬ್ಗಂ ॥

End : folio 58

ಅಂಗಹಾರಿದ ಫಲ ಮುಡಿಹಾರಲು ರಾಜಸ್ಥಾನ ಹಾನಿ । ಹಣೆ ಹಾರಲು
ಲಾಭ ಬಲಹುಬ್ಬು ಹಾರಲು ಸ್ತ್ರೀಭೋಗ। ಎಡಹುಬ್ಬು ಹಾರಲು ಕಲಹ ।

ಬಲಗಣ್ಣು ಹಾರಲು ಲೇಸು । ಎಡಗಣ್ಣು ಹಾರಲು ಕೇಡು.
ಮೂಗು ಹಾರಲು ಕಷ್ಟ । ಬಲದ ಗಲ್ಲ ಹಾರಲು ಉತ್ತಮ
ಸ್ತ್ರೀಯಳಹಳು ।
....ಇಂತಿ ಅಂಗಹಾರಿದ ಫಲ ಸಮಾಪ್ತ. ಮಂಗಳ ಮಹಾಶ್ರೀ

Remarks :

ಇದರಲ್ಲಿ ವಿವಿಧ ಔಷಧಿಗಳು, ಫಲಜ್ಯೋತಿಷ್ಯ ಇತ್ಯಾದಿ ವಿಷಯಗಳಿವೆ.

The MS. deals with minor cures through miscellaneous medicines. It gives an account of Phalajyōtiṣya also. Some other pages are also attached to the MS. which are not pertaining to it.

Sl. No 190. ಕದಂಬನೀತಿ
KADAMBANĪTI

MS. No. 141/16. Author : Koṭṭūra Basavēśa. Form : Different forms. Substance : Paper. Size : $8\frac{1}{2}'' \times 6''$. Character : Kannaḍa. Folios : 50. Lines on a page : 20. Letters in a line : 25. Appearance : Not old. Condition : Ordinary. Complete or incomplete : Incomplete.

Beginning : folio 1

ಗುರುವೆ ನರನೆಂದಾಡುವವರಿಗೆ
ಲಿಂಗವು ಶಿಲೆಯು ಇರುವೆಂದು ನುಡಿವವಗೆ
ಜಂಗಮವ ಜರಿವವಗೆ ಪರಮಪಾದೋದಕವ
ನೀರೆಂದು ನಿಂದಿಪಗೆ ಶೇಷಮಂ ದೂಷಿಸುವಗೆ ॥....

End : folio 13

....ತಟ್ಟನದ ಬರಿಸಿ ತವೆ ಮಳೆಗರಿಸಿ ಡಿಳ್ಳಿಯೊಳು
ದೃಷ್ಟವಂ ತೋರಿ ಚರನಿವಹಕುಣಬಡಿಸುತ್ತ
ಕೊಟ್ಟೊರೊಳಿರ್ಪ ಬಸವೇಶ ಶಿವಭಕ್ತಿಯಂ ಕೊಟ್ಟು
ರಕ್ಷಿಪುದು ಅನುದಿನಂ ಶ್ರೀ ಚಂದ್ರಚೂಡಾಮಣಿ ॥೧೦೫॥

Remarks :

ವೀರಶೈವ ಮತವನ್ನೂ ಆ ಮತದ ಆಚಾರಗಳನ್ನೂ 105 ಪದ್ಯಗಳಲ್ಲಿ ಈ ಕೃತಿ ನಿರೂಪಿಸಿದೆ. ಮೊದಲಲ್ಲಿ 11 ಪದ್ಯಗಳು ಕಳೆದುಹೋಗಿವೆ. ಪದ್ಯಗಳೆಲ್ಲಾ 'ಶ್ರೀ ಚಂದ್ರಚೂಡಾಮಣೀ' ಎಂದು ಮುಗಿಯುತ್ತವೆ.

ಇದೇ ಪುಸ್ತಕದೊಂದಿಗೆ ನಿಜಲಿಂಗಶತಕದ ಕೆಲವು ಪದ್ಯಗಳೂ, ಯಂತ್ರದ ಚಿತ್ರಗಳೂ ಜ್ಯೋತಿಷ್ಯ ವಿಚಾರವೂ ಸೇರಿಕೊಂಡಿವೆ.

The work deals with Vīras'aivism in 105 stanzas. Each stanza ends with 'ಶ್ರೀಚಂದ್ರಚೂಡಾಮಣೀ'. The MS. contains a few stanzas form 'Nijaliṅgas'ataka' also.

Sl. No. 191. ಕನಿಷ್ಟಬೆಸಗೆ

KANIṢṬABESAGE

MS. No. 154/9. Author : ? Form : Prose. Substance : Paper. Size : $8\frac{1}{2}'' \times 6''$. Character : Kannaḍa. Folios : 61. Lines on a page: 21. Letters in a line: 20. Appearance : Not old. Condition : Good. Complete or incomplete : ?

Beginning :

ಜ್ಯೇಷ್ಠಮಾಸದಲ್ಲಿಯು ಉತ್ತರ ಮುಖಕ್ಕೆ । ? ? ? ?
ಮಿಕ್ಕಾದ ದೇಶದವರೆಲ್ಲ ಸುಖಿಯಾಗಿ ಇಹರು ।
ವಿಷಯೆಮೆಪರಿಯೆಂಬನಾಡು ಫಲಪ್ರದನಾಡು ।

ಅವರೆಲ್ಲ ಸುಖಿಗಳಾಗಿಹರು ॥೪॥ ಪ್ರಜೋತ್ಪತ್ತಿ ಸಂವ
ತ್ಸರದಲ್ಲಿಯು ಅದರ ಫಲವಮಂ ಪೇಳ್ವೆನು । ಆಷಾಢದಲ್ಲಿ
ಮಳೆ ಪ್ರಬಲಂ ಸುಭಿಕ್ಷೆ ।

End :

ಶ್ರೀ ಗುರುಭ್ಯೋ ನಮಃ । ಈ ಚಕ್ರ ಅಲ್ಲಮಪ್ರಭುವಿನ ವೃದಂಗ
ಚಕ್ರ । ....
....
....
ಈ ಶಕುನವ ನೋಡುವ ಪುರುಷನು ಒಂದು ವಸ್ತುವನ್ನು ಯಾವ
ಮನೆಯಲ್ಲಿಡುತ್ತಾನೋ ಆ ಮನೆಯ ಒಳಗಣ ಬರೆದ ಬರಹ ಗುರುತು
[ಬರೆವುದು ?]. ಅದನ್ನು ಬಿಟ್ಟು ಅಲ್ಲಿಂದ ಹದಿಮೂರನೇ ಮನೆ
ಎಣಿಸುವುದು. ಆ ಮನೆ ಅಕ್ಷರ ಬರೆವುದು. ಈ ಪ್ರಕಾರ ಕೆಳಗಣ
ಮನೆ ಎಣಿಸಲು ಮೊದಲು ಕೂಡಿದ ಮನೆಗೆ ಬರುತ್ತ ಇದ್ದೀತು.
ಆ ಬರೆದ ಅಕ್ಷರಗಳನ್ನೆಲ್ಲ ಕೂಡಿಸಿ ಓದಲು ಶುಭ ಅಶುಭ
ತಿಳಿದೀತು ॥೧॥

Remarks :

ಇಲ್ಲಿ ಫಲ ಜ್ಯೋತಿಷ್ಯ, ಸಂವತ್ಸರ ಫಲ ಇತ್ಯಾದಿ ವಿಷಯ
ಗಳನ್ನು ಹೇಳಿದೆ.

This work gives an account of 63 Saṁvatsaras and their effects. The MS. also contains 'Svaracintāmaṇi' and other minor topics pertaining to 'Phala Jyōtiṣya'.

Sl. No. 192. ಕರಣಹಸಗೆಯ ನುಡಿ
KARAṆAHASAGEYA NUḌI

MS. No. 65/13 (C). Author: ? Subject: Prose. Substance: Paper. Size: 12″×4½″. Character: Kannaḍa. Folios: 220. Lines on a page: 16. Letters in a line: 54. Appearance: Not old. Condition: Good. Complete or incomplete: Complete.

Beginning: folio 26

ಕರಣ ಹಸಿಗೆಯ ನುಡಿ ಬರೆವುದಕ್ಕೆ ಶುಭಮಸ್ತು । ಐಶ್ವರ್ಯಸ್ಯ
ಸಮಗ್ರಸ್ಯ ವೀರ್ಯಶ್ಯ ಯಶಾಶ್ರಯಃ ॥
ಜ್ಞಾನ ವೈರಾಗ್ಯಯೋಶ್ಚೈವ ಷಂಣಾಂ ಭಗಯತೀರಿತಃ ।
ಐಶ್ವರ್ಯ ಆಯುರಾರೋಗ್ಯಕುಲ ಪರಾಕ್ರಮ ರೂಪ ವಿದ್ಯ
ಯೌವನ
ಕುಲಕೀರ್ತಿಗಳೆಂಬ ಅಷ್ಟಮಹದೈಶ್ವರ್ಯಗಳನ್ನುಳ್ಳ ಸಮಗ್ರಸ್ಯ
ಸಂಪೂರ್ಣವಾದಂಥ । ವೀರ್ಯಸ್ಯ ಪರಾಕ್ರಮವನ್ನುಳ್ಳಂಥ...

End: folio 225

....ಸ್ತ್ರೀ ಶ್ರೀ ಯೆಂದೊಡೆ ಜ್ಞಾನಕ್ಕೆಹೆಸರು. ಇಂತಪ್ಪ ಜ್ಞಾನಾದಿ
ಐಶ್ವರ್ಯವನ್ನುಳ್ಳ
ಶಾಸ್ತ್ರವನ್ನು ಬರದ ಓದಿ ಹಾಡಿ ಕೇಳಿದವರು ನಿಜಮೋಕ್ಷದ
ನಿರತಿಶಯ ಜ್ಞಾನವನ್ನೈದಿ
ನಿತ್ಯಮುಕ್ತರಾಗಿ ಬಾಳುವರೆಂಬುದೀಶಾಸ್ತ್ರದ ಫಲಶ್ರುತಿಯೆಂಬು
ದೀಗ ಮಂಗಳಂ
ಕರಣಹಸಿಗೆಯ ನುಡಿಯ ವಾಚ್ಯ ಮುಗಿಯಿತು.
ಪ್ರತಿಯ ಕಾಲ: ಶೋಭನಕೃತು ಸಂವತ್ಸರ ಶ್ರಾವಣ ಶುಕ್ಲ
ದ್ವಾದಶಿ ಸೋಮವಾರ

Remarks *:*

ಇದು ಕರಣ ಹಸಿಗೆಯೆಂಬ ವೀರಶೈವಸಿದ್ಧಾಂತ ಪ್ರತಿಪಾದಕ
ಗ್ರಂಥಕ್ಕೆ ವ್ಯಾಖ್ಯೆ. ಪ್ರತಿ ತುಂಬ ಅಶುದ್ಧವೂ ಓದುವುದಕ್ಕೆ
ಅಸಾಧ್ಯವೂ ಆಗಿದೆ.

The work is a commentary to 'Karaṇa Hasige', a religious work on Vīraśaiva system. The script is full of mistakes and unreadable.

Sl. No. 193. ಕರಣಹಸುಗೆ

KARAṆAHASUGE

MS. No. 1/10. Author: Cennabasaveśa. Form: Prose. Substance: Paper. Size: 12″×4″. Character: Kannaḍa. Folios: 52. Lines on a Page: 12. Letters in a line: 45. Appearance: Not old. Condition: Good. Complete or incomplete: Complete. See K.K. Vol. I, p. 178.

Beginning : folio 1

....ಚೆನ್ನಬಸವೇಶ್ವರ ದೇವರು ನಿರೂಪಿಸಿದ ಕರಣಹಸಿಕೆ ಬರವುದಕ್ಕೆ ಶೋಭನಮಸ್ತು ಶುಭಮಸ್ತು ನಿರ್ವಿಘ್ನಮಸ್ತು ॥ ಶ್ರೀ ಷಡ್ಗುಣೈಶ್ವರ್ಯ ಗಳನ್ನುಳ್ಳಂಥ ಗುರು। ಸ್ವಯಂಜ್ಯೋತಿಸ್ವರೂಪವಾದಂಥ ಬಸವ। ಚಿನ್ನಾದ ಚಿದ್ಬಿಂದು ಚಿತ್ಕಲಾಸ್ವರೂಪವಾದಂಥ ಲಿಂಗಾಯ। ಸೃಷ್ಟಿಸ್ಥಿತಿಲಯಕ್ಕೆ ಕಾರಣವಾದಂಥ ಪರವಸ್ತುವಿಂಗೋಸ್ಕರ ನಮಃ ನಮಸ್ಕಾರವೆಂಬುದೀಗ।ಶ್ರೀಗುರು ಬಸವಲಿಂಗಾಯ ನಮಃ ಎಂಬ ಶಬ್ದಕ್ಕರ್ಥ.

End : folio 52

....ಇನ್ನು ಉದರಾಗ್ನಿ ಮಂದಾಗ್ನಿ ಕಾಮಾಗ್ನಿ ಶೋಕಾಗ್ನಿ ವಡಬಾಗ್ನಿ ಇಂತಿವು ಪಂಚಾಗ್ನಿಗಳು ಇವಕ್ಕೆ ವಾಚ್ಯ। ಉದರಾಗ್ನಿ। ಅನುಭವಿಸಿದನ್ನ

ಪಂನಾದಿಗಳ ಜೀರ್ಣೀಕರಿಸಿ । ಆಹಾರ ವ್ಯಾಪ್ತಿಯು ಪುಟ್ಟಿಸಿ ಒಡಲ ತಾಪಿಸುವುದೇ
ಕ್ಷುದಾಗ್ನಿ....ಇಂತಿವು ಪಂಚಾಗ್ನಿಗಳು । ಚೆನ್ನಬಸವದೇವರು ನಿರೂಪಿಸಿದ
ಕರಣಹಸಿಕೆ ಸಮಾಪ್ತ ಮಂಗಳಂ ಮಹಾ.

Remarks :

ವೀರಶೈವ ಸಿದ್ಧಾಂತದ ಶಾಸ್ತ್ರ ವಿಚಾರಕ್ಕೆ ಸಂಬಂಧಿಸಿದ್ದು. ಕೆಲವೆಡೆ ಸಂಸ್ಕೃತ ಶ್ಲೋಕಗಳ ಅನುವಾದವೂ ಇದೆ.

The work explains some significant concepts pertaining to Vīraśaiva philosophy.

Sl. No. 194. ಕರಿಯಭಂಟನ ಕಥೆ

KARIYABHANṬANA KATHE

MS. No. 1/11. Author : ? Form : Yakṣagāna. Substance : Paper. Size : 12″×5″. Character : Kannaḍa. Folios: 31. Lines on a page: 8. Letters in a line : 34. Appearance : Not old. Condition : Good. Complete or incomplete : Incomplete. See K.K. Vol. III, pp. 101,162,227.

Beginning : folio 7

ವೀರೇಶಗೆ ಜಯಮಂಗಳಂ ನಿತ್ಯ ಶುಭಮಂಗಳಂ । ಪಲ್ಲ ।
ಮಾರಭೂಪನಪುತ್ರ ಮಾರಾಶ್ವರೂಪಂಗೆ ಮಾರಾರಿ
ಪದಸೇವಮುನದನಂಗೆ । ವೀರಾಧಿವೀರಂಗೆ ವೀರಾವತಾರಂಗೆ
ವೀರನೆನಿಸುವ ವರ ಕರಿವೀರಗೆ ।।೧।। ವಾಜೀರೆವಂತನಿಗೆ
ವರಕೀರ್ತಿವಂತನಿಗೆ ಭೂಜನಾಶ್ರುತ ನಿತ್ಯ ಪುಣ್ಯನಿಧಿಗೆ ।
ರಾಜಾಧಿರಾಜನಿಗೆ ರಾಜಮಾರ್ತಾಂಡನಿಗೆ ರಾಜಶೇಖರವರದ ಕರಿರಾಯಗೆ ।।೨।।

End: folio 37

....ಅವರಿಗೆ ಸ್ಥಾನಮಾನಂಗಳಂ ಸಾಗಿಸಿ। ಶಿಲಾಸ್ಥಾಪ್ಯಂಗಳಂ
ಮಾಡಿಕೊಟ್ಟು ಆವರಕ್ಕೆಯು ಕಳುಹಿಸಿಕೊಂಡು ತಾಯು ಬಸ(ನ)
ವಂತದೇವಿ
ಪುಂಡರೀಕಾಕ್ಷಿ ಮೋಹನಾಂಗಿಯು ಮಂತ್ರಿಯು ಮೊದಲು
ಮಾಡಿಕೊಂಡು ದಾರಾಪುರಕೆ ತಂದು ಸೌಭಾಗ್ಯಸಾಮ್ರಾಜ್ಯದಿಂದ
ಧರ್ಮಾರ್ಥ ಹಿಡಿದು ರಾಜ್ಯ ಪಾಲಿಸುತಿರ್ದ್ದನದೆಂತೆನೆ ॥ ೧

। ಕಂದ । ಚಿತ್ರಜವೈರಿಯು ಮೆಚ್ಚಿದಾ । ಉತ್ತಮದ ಕಥೆ ಪೇಳಿದರ್ಗೆ
ಕೇಳಿದವರ್ಗೆ ॥ ಇಷ್ಟಾರ್ಥ

Remarks:

ಬೇರೆ ಬೇರೆ ಕವಿಗಳು ರಚಿಸಿರುವ ಇದೇ ಹೆಸರಿನ ಮೂರು ಕೃತಿಗಳಿವೆ. ಆದ್ಯಂತಗಳಲ್ಲಿ ಕೆಲವು ಪುಟಗಳು ಕಳೆದಿವೆ. ಕರ್ತೃವಿನ ವಿಚಾರ ತಿಳಿಯುವುದು ಇದರಿಂದ ಕಷ್ಟವಾಗಿದೆ.

There are three works with the same title by three different authors. Here some pages in the beginning and some at the end are lost. So it is difficult to make out the name of the author.

Sl. No. 195. ಕಾಲಜ್ಞಾನ ವಚನ
KĀLAJÑĀNA VACANA

MS. No. 142/8. Author: Different authors. Form: Vacana. Substance: Paper. Size: $9\frac{1}{2}'' \times 6\frac{1}{2}''$. Character: Kannaḍa. Folios: 51. Lines on a page: 22. Letters in a line: 25. Appearance: Not old. Condition: Ordinary. Complete or incomplete: Complete.

Beginning : folio 2

ಸಿದ್ಧರಾಮಯ್ಯನವರಿಗೆ ಶಿವನಾಗಮಯ್ಯನವರು ಹೇಳಿದ ಕಾಲ ಜ್ಞಾನವು ।
ಮಹದಂಡು ಬಂದಿತ್ತು । ವನದಲ್ಲಿ ಆಡಗಿತ್ತು। ಗಿಜಗನ ಪಟ್ಟಣ ಗಳೆಲ್ಲಾ ಸೆರೆಕಾಳು
ಆದಾವು । ಶರಣರ ಉದಯದ ಮುಂದೆ ಹುಟ್ಟೀತು ಒಂದು ಹೊಸಮಾತು ।
ಶ್ರೀಯಾಲಗಿದು ಶಿವನ ಕಟ್ಟಳೆ ಅಂದು ಕೆಟ್ಟೀತು । ಜಗವು ಶರಣರ ಉದಯದ
ಮುಂದೆ ಹುಟ್ಟೀತು ಒಂದು ಹೊಸಮಾತು । ಹೊಸಪುರದ ಯಂಕಯ್ಯ....

End : folio 51

[ಪುಟ ೫೦ ರಿಂದ ಪ್ರಭುದೇವರ ಕಾಲಜ್ಞಾನ]
ಇನ್ನು ಅಂಜನದ ಕ್ರಮ । ಆದೀತೆ ಭಕ್ತನ ಬೇರು
ಕಾಗಿಮಾರಿಯಾ ಕಾಯಿ ಜೇನತುಪ್ಪದಲಿ ಹಚ್ಚಲು
ಸರ್ವಜನವು । ಕರೆಹಾಲಿಯಾ ಬೇರು ಜೇನುತುಪ್ಪದಲಿ....

Remarks :

ಶಿವನಾಗಯ್ಯ ಮಾಚಯ್ಯ ಮುಂತಾದವರ ಕಾಲಜ್ಞಾನದ ವಚನಗಳನ್ನು ಕೊಡಲಾಗಿದೆ. ಕೆಲವು ಪುಟಗಳಲ್ಲಿ ಶಿವಗಣ ಸಹಸ್ರನಾಮಾವಳಿಯನ್ನೂ ಬರೆದಿದೆ. ಪ್ರತಿಯುಕಾಲ 1766 ಶಕೆ, ಕ್ರೋಧಿ ಸಂವತ್ಸರ ವೈಶಾಖಶುದ್ಧ 15 ಮಂಗಳವಾರ.

The work deals with a few Kālajñāna Vacanas by some Vacanakāras like S'iva-nāgayya and Mācayya etc.,

Sl. No. 196· ಕುರುಬರಟ್ಟೆ
KURUBARAṬṬA

MS. No. 155/23. Author : ? Form : Prose. Substance : Paper. Size : 8″×6″. Character : Kan-

na*d*a. Folios: 24. Lines on a page: 11. Letters in a line: 27. Appearance: Not old. Condition: Good. Complete or incomplete: Complete.

Beginning: folio 1

ಶ್ರೀ ಗುರುಭ್ಯೋನಮಃ। ಕುರುಬರಟ್ಟ ಬರೆವುದಕ್ಕೆ
ಶುಭಮಸ್ತು ಶೋಭನಮಸ್ತು । ನಿರ್ವಿಘ್ನಮಸ್ತು । ಆಯುರಾ
ರೋಗ್ಯಮಸ್ತು ।
ಪ್ರಭುನಾಮ ಸಂವತ್ಸರದಲ್ಲಿ ಬ್ರಹ್ಮಸ್ವಾಮಿ । ರಾಯರು ಪ್ರಜೆ
ಗಳು
ಸುಖದಲ್ಲಿ ಇಹರು । ಮಳೆ ಬೆಳೆ ಬಹಳವೂ ಹನ್ನೆರಡು ತಿಂಗಳು
ಸುಭಿಕ್ಷವೂ । ಮಾನ್ಯೆಯರು ಸುಖವಾಗಿಹರು ॥೧॥

End: folio 24/2

....ದಶಮಿಯಲ್ಲಿ [ಮೈನೆರೆದರೆ] ಭೂಮಿಯಾಳುವಳು
೧೧ ಯಲ್ಲಿ ಸುಖಿಯುಹಳು । ೧೨ ಯಲ್ಲಿ ಮಾರಿಯುಹಳು
೧೩ ಯಲ್ಲಿ ಭಾಗ್ಯವಂತೆ । ೧೪ ದಲ್ಲಿ ಸೌಖ್ಯವುಳ್ಳವಳು। ಹುಣ್ಣಿಮೆ
ಯಲ್ಲಿ
ಸಮಸ್ತರಿಗೆ ಪ್ರೀತಿಯುಳ್ಳವಳು । ಅಮಾವಾಸ್ಯೆಯಲ್ಲಿ ಬಂಜೆ
ಯಹಳು ।
ಇಂತೀ ಮೈನೆರೆದ ಫಲ ಸಮಾಪ್ತಂ ।
ಇಂತೀ ರಟ್ಟಶಾಸ್ತ್ರ ಸಂಪೂರ್ಣಂ ಮಂಗಳಂ ಮಹಾ ॥

Remarks:

ಈ ಕೃತಿ ರಟ್ಟಕವಿಯು ಬರೆದ ರಟ್ಟಮತದ ಗದ್ಯರೂಪವಾಗಿರಬಹುದು. ಇಲ್ಲಿ ಸಂವತ್ಸರ ಫಲ ಮತ್ತು ಮೈನೆರೆದ ಫಲಗಳನ್ನು ಹೇಳಿವೆ.

Ra*tt*akavi has written 'Ra*tt*amata' or 'Ra*tt*asūtra' dealing with the science of Phalajyōtiṣya. The present MS. may be

the prose form of it. Here two topics are dealt with viz. Sa*m*vastara phala and Mainereda phala.

Sl. No. 197. ಕುರುಬರಟ್ಟು

KURUBARAṬṬU

MS. No. 20/22. Author : ? Form : Prose. Substance : Paper. Size: 8½″×6″. Character : Kanna*d*a. Folios : 59. Lines on a page: 20. Letters in a line : 22. Appearance : Not old. Condition : Good. Complete or incomplete : Incomplete.

Beginning : folio 1

ಕುರುಬರಟ್ಟು ಬರಿಯುವದಕ್ಕೆ ಶುಭಮಸ್ತು ।
ದ್ವಾಪರ ಹೋಗಲಿಕ್ಕೆ ಕಲಿಯಲ್ಲಿ ೧೫೪೯ ಶಾಲಿವಾಹನ ಶಕೆ
ವರುಷ ೧೬೭೯ ಇಂತು ಕಲಿಯುಗ ಪ್ರಮಾಣ ಎಷ್ಟು ಎಂದರೆ
೪೩೨೫೦ ವರುಷ ಅರವತ್ತು ಸಂವತ್ಸರವು
ಗಾಣದ ಹೊರಳಿ ತಿರುಗಿದ ಹಾಂಗೆ ತಿರುಗುವುದು....

End : folio 59

ಶ್ರೀ ಮಣ್ಣೆತ್ತಿನ ಅಮಾವಾಸಿಯದಿನ....ಮಹಾನಕ್ಷತ್ರ
ಆರುದ್ರ ನಿತ್ಯ ನಕ್ಷತ್ರ । ಆರ್ದ್ರ ಬಂದರೆ ಸಕಲ
ಮಳೆಯಾಗಿ ಮುಂಗಾರು ಫಲನುಕ್ಕುಂ । ಹಿಂಗಾರು
ಫಲಗೋಧಿ ಕಡ್ಲಿ ಅಗಸಿ ಕುಸುಬಿ ಹತ್ತಿ ಹರಳೆ
ಇಂತು ಇಲ್ಲಿಯು ಭಯ....ಕ್ಕು । ಇಲ್ಲಿಯು
ಭಯ ತಪ್ಪಿದರೆ ರಜಭಯದಿಂದ ಆರಫ....

Remarks :

ಈ ಕೃತಿಯಲ್ಲಿ ಜ್ಯೋತಿಷ್ಯಶಾಸ್ತ್ರ, ಸಂವತ್ಸರಫಲ, ಗ್ರಹಚಕ್ರ ಫಲ, ಸೀನಿನ ಫಲ, ಹಲ್ಲಿ ಬಿದ್ದ ಫಲ ಇತ್ಯಾದಿಗಳನ್ನು ಹೇಳಿದೆ.

The work deals with Jyōtiṣyas'astra, Saṁvatsaraphala, Grahacakraphala, Sinina phala, Hallibidda phala and some other phalas etc.

Sl. No. 198. [ಕೆಲವು ಕಂದಪದ್ಯಗಳು ಮತ್ತು ಹಾಡುಗಳು]

[KELAVU KANDAPADYAGAḶU MATTU HĀḌUGAḶU]

MS. No. 151/14. Author: Different authors. Form: Different forms. Substance: Paper. Size: 9½″ × 6″. Character: Kannaḍa. Folios: 28. Lines on a page: 19. Letters in a line: 24. Appearance: Not old. Condition: Defective. Complete or incomplete: ?

Beginning:

ಶ್ರೀಗುರು ಬಸವಲಿಂಗಾಯ ನಮಃ

ವರವೀರಶೈವ ಸಾಗರ ।
ಕರುಣಾಗತ ರಕ್ಷಾಮಣಿಯೆ ಪರುಷದ ಕಣಿಯೆ ।
ಕರುಣಾಕರ ಗುರು ನಿಮ್ಮಯ
ಚರಣಾಂಬುಜಕ್ಕೆ ನಾ ಶಿರವೆರಗುವೆ ಸಲಹೋ ।೧॥

End: folio 28

ಶ್ರೀಗುರುವೇ ಗತಿ .... ಲಿಂಗ । ಎನ್ನಂಗದೊಳು
ಬೆರೆದಾ । ..ವನೆ ತೋರಿದು । ಅಂಗಜನನಾರೂಪನೆಳಿದಾ ।
ಮಾತು ಮುರಿದಾ । .... ಗಿರಿಯರ ರಮಣನು ಘನಮುನಿ-
ಮಾಡಿತ । ತಿಂಗಳ ನೋಡಿದ ಮಂಗಳ ಮಹಿಮಾ ॥ಪಲ್ಲ॥

Remarks:

ಪುಟ 3 ರಿಂದ 5 ವರೆಗೆ 28 ಕಂದ ಪದ್ಯಗಳಿವೆ. ಪ್ರತಿ ಕಂದ ಪದ್ಯವೂ ಅದನ್ನು ರಚಿಸಿದ ಕವಿಯ ಬಿರುದಿನಿಂದ ಅಂತ್ಯವಾಗು

ತ್ತದೆ. ಚಿನಾರತ್ನ, ಸರಸ ಕವೀಂದ್ರ, ಶ್ರೀ ಮುಕ್ತಿರಾಮೇಶ್ವರ ಮತ್ತು ವಾಣಿಯ ಮುಕುರ ಎಂಬಿವೇ ಆ ಬಿರುದುಗಳು. ಇವಲ್ಲದೆ ಗುರುಸಿದ್ಧ, ಬಸವ ಮತ್ತು ಇತರ ಕವಿಗಳಿಂದ ರಚಿತವಾದ ಶೋಭಾನ ಪದ, ಆರತಿಪದ ಇತ್ಯಾದಿ ಹಾಡುಗಳೂ ಇಲ್ಲಿ ಇವೆ.

The pages 3 to 5 of the MS. have 28 Kandapadyas ending with the pen-names or titles of their authors. They are cinā-ratna, Sarasakavīndra, Srīmukti Rāmeśvara and Vāṇiya Mukura. The MS. also contains some minor songs like śō-bhānapada, Āratipada etc. by Gurusiddha, Basava and other minor poets.

Sl. No. 199. ಕೊರವಂಜಿಯ ವಚನ
KORAVAÑJIYA VACANA

MS. No. 65/9 (B). Author : ? Form : Vacana. Substance : Paper. Size : $8\frac{1}{2}'' \times 6''$. Character : Kannaḍa. Folios: 15. Lines on a page : 18. Letters in a line : 15. Appearance : Not old. Condition : Fair. Complete or incomplete : Complete.

Beginning : folio 1

ಶ್ರೀ ಗುರು ಪರಬ್ರಹ್ಮವೇ ಗತಿ । ಅಕ್ಕಗಳ ವಚನ । ರಾಗ ಸಾಳಂಗವು ।
ಕೈಯ ತೋರೆಯಮ್ಮ ಕೈಯ ನೋಡುವೆನು । ವೈಯಾಲಪುರ ದಿಂದ ಇಳಿದು
ಬಂದೆನು । ನಿನ್ನ ವೈಯೊಳಗಿರ್ದ ವಸ್ತುವ ಪೇಳ್ವೆನವ್ಮಾ । ಕೈಯ ತೋರೆಯಮ್ಮ
ಕೈಯ ನೋಡುವೆನು। ಅದು ಎಂಥಾ ಕೈಯಮ್ಮ। ಅದು ಎಂಥಾ ಕೈಯೆ ತಾಯಿ ।
ಬರುವದು ಭಕ್ತಿ ಜ್ಞಾನ ವೈರಾಗ್ಯದ ಕೈ । ಸುಕೃತರು ಮುದ್ದಾಡಿದ ಕೈ....

End : folio 15

ಇಂತು ಈ ಲಿಂಗದೇವರು ತೃಪ್ತಿಯಾಗಿತ್ತು ನೋಡೆ ಅವ್ವಾ ।
ಇಷ್ಟದೇವರಿಗೆ ಒಂದೇ ದೇವರ ವರ ಉಂಟೀ ಅವ್ವಾ
ಅದು ಎಲ್ಲಿ ಉಂಟೆಂದರೆ । ಒಂದೇ ಎರಡೇ ಮೂರೇ ನಾಲ್ಕೇ
ಐದೇ ಆರೇ ಮಿಾರಿ ಏಕನಾಳವಾಗಿ । ಎಕ್ಕೆಯ ಬೆನಕನ ಮರ
ಉಂಟೀಯಮ್ಮಾ। ಒಳಹೊರಗೆ ಸಂಪೂರ್ಣವಾಗಿ ಪೇಳಿದೆನಮ್ಮಾ
॥ ೭ ॥

ಇಂತೀ ಕೊರವಂಜಿಯ ವಚನ ಸಂಪೂರ್ಣ ಮಂಗಳಂ ಮಹಾ ॥

Remarks :

ಅಕ್ಕಗಳ ಕೊರವಂಜಿಯ ವಚನ ಪೂರ್ತಿಯಾಗಿ ಕೊಟ್ಟಿದೆ.

There are seven predictions in this work known as Akkagaḷa Koravañjiya Vacana.

Sl. No 200. ಗಂಗೆ ಗೌರಿ ಚೌಪದನ
GAṄGE GAURI CAUPADANA

MS. No. 65/5 (A). Author: Cennamallēśa. **Form**: Caupadi. **Substance**: Paper. **Size**: $8\frac{1}{2}'' \times 6''$. **Character**: Kannaḍa. **Folios**: 11. **Lines on a page**: 15. **Letters in a line**: 15. **Appearance**: Not old. **Condition**: Good. **Complete or incomplete**: Incomplete.

Beginning : folio 7

....ಕಂಡ ಸತಿಯರಿಗೆ
ಜನಮೆಚ್ಚಿ ನಡೆಬೇಕು ಮೂರು ಜಗದೊಳಗೆ
ಮನಮುನಿಸು ಬೇಡಯ್ಯ ನಮ್ಮನಿಮ್ಮೊಳಗೆ ॥೧೫॥

End : folio 17

ಭುವನದೊಳು ಮೇಲು ಅಂಬುಲಿಗಿ ನೆಲೆವಾಸ
ಚವುಪದನ ಪೇಳಿದನು ಚೆನ್ನಮಲ್ಲೇಶ
ತವನಿಧಿಯ ಕೊಡು ಎನಗೆ ಮೇಲುಗಿರಿವಾಸಾ
ಗವುರಿವಲ್ಲಭ ಸಲಹೋ ಗಂಗಾಧರೇಶಾ ॥೯೬॥

ಗಂಗೆ ಗೌರಿಯ ಮನೋಹರನೆ ಶರಣಾರ್ಥಿ
ಕೆಂಗಣ್ಣ ಕಪ್ಪ ಕಂಧರನೆ ಶರಣಾರ್ಥಿ
ಜಂಗುಳಿಯ ದೈವದೊಲ್ಲಭನೆ ಶರಣಾರ್ಥಿ
ಸಂಗನ ಬಸವ ಶರಣು ಶರಣಾರ್ಥಿ ॥೯೭॥

ಗಂಗೆ ಗೌರಿ ಚೌಪದನ ಇಲ್ಲಿಗೆ ಸಮಾಪ್ತ

Remarks :

ಗಂಗೆ ಗೌರಿಯರು ವೈಮನಸ್ಯ ಬಿಟ್ಟುಕೊಟ್ಟು ಸಾಮರಸ್ಯ ದಿಂದ ಒಡಗೂಡಿದ್ದರ ಕಥೆಯನ್ನು ಇಲ್ಲಿ ಹೇಳಿದೆ.

The story of the two wives of S'iva, who gave up their mutual hostility is told here.

Sl. No. 201. ಗಂಗೆ ಗಿರಿಜೆ ಚೌಪದನ
GAṄGE GIRIJE CAUPADANA

MS. No. 20/21(A). Author : ? Form : Caupadi. Substance : Paper. Size : $8\frac{1}{2}'' \times 6''$. Character : Kanna*ḍ*a. Folios ; 5. Lines on a page : 12. Letters in a line : 22. Appearance : Not old. Condition : Fair. Complete or incomplete : Complete.

Beginning :

ಗಂಗೆ ಗೌರೀ ಚೌಉಪದನ ಬರವುದಕ್ಕೆ ಶುಭಮಸ್ತು ।
ಶ್ರೀಮದಗಜವರ ಶಾಂತಮಲ್ಲೇಶ

ಶ್ರೀ ಮಹಾಮೇರುಗಿರಿ ಮಂದರವಾಸ
ಶ್ರೀಮದಜಭಾಮಗುರು ಚೆನ್ನಮಲ್ಲೇಶ
ಶ್ರೀ ಮನೋಹರ ಕೊಡು ಮತಿಗೆ ಪ್ರಕಾಶ ॥೧॥

End:

ಬಲೆಯ ಹಾಕಿದರೆ ಬೀಳುವಳು ನಾನಲ್ಲ
ಬಳಲಿಕೆಯು ಹೋಯಿತು ನಿನ್ನಿಂದ ಎನಗೆಲ್ಲ
ಬಳುಕು ನಡುವಿನ ಬಾಲೆ ಬ್ರಹ್ಮಸಭೆಗೆಲ್ಲಾ
ಕಳಶ ಕನ್ನಡಿ ನೀನು ಸರ್ವಜಗಕೆಲ್ಲಾ ॥೩೪॥

ಸರ್ವಜಗವನು ಸಲಹುವಂಥ ಶಿವಯೋಗಿ ।
ಗರ್ವಯಿಂದಿಗೆ ತಳೆದನೆಂದು ತಲೆಬಾಗಿ ॥
ನಿರ್ವಾಣದೊಳು ಬಂದೆ ಎನ್ನ ಸಲುವಾಗಿ
ಪೂರ್ವ ನಿನ್ನಾಶ್ರಮಕೆ ತೆರಳು ಮರಕಾಗಿ ॥೩೫॥

Remarks:

ಈ ಕೃತಿಯಾದ ಮೇಲೆ 'ಸಿರಿಯಾಳ ಸೇವೆ'ಯೆಂಬ ಕೃತಿಯೂ ಇದೆ.

Kar*ṇāṭ*aka Kavicarite does not mention this work. This work is in the form of discussion between Girije and Ga*ṅ*ge, wives of *S'*iva. It has 35 stanzas in Caupadi.

Sl. No. 202 ಗಂಗೆ ಗಿರಿಜೆಯರ ಸಂವಾದ
GAṄGEGIRIJEYARA SAMVĀDA

MS. No. 148/11 Author: Tara*ḷ*ac*ē*rapati. Form: S*āṅ*gatya. Substance: Paper. Size: 8″ × 6½″. Character: Kanna*ḍ*a. Folios: 65. Lines on a page: 13. Letters in a line: 30. Appearance: Not old. Condition: Good. Complete or incomplete: Incomplete.

Beginning : folio 1

ಶ್ರೀಗುರು ಬಸವಲಿಂಗಾಯ ನಮಃ । ಶ್ರೀ ವಿಘ್ನೇಶ್ವರಾಯ ನಮಃ ।
ಗಂಗೆ ಗಿರಿಜೆ ಸಂವಾದ ಬರುವುವದಕ್ಕೆ ಶುಭವುಸ್ತು । ಶ್ರೀರಸ್ತು
ಶ್ರೀ ಮಹಾ ಕಲ್ಯಾಣವೆಂಬ ಪಟ್ಟಣದಲ್ಲಿ । ಪರಮಜ್ಞಾನ
ಶಕ್ತಿಯಾದಂಥ । ನೀಲಲೋಚನೆ ತನ್ನಂ ಪುರುಷ ಬಸವೇಶ್ವರ
ದೇವರಿಗೆ ನಿರೂಪಿಸಿ ಪೇಳ್ದ ಗಂಗೆ ಗಿರಿಜೆ ಸಂವಾದವಾ ।
ಅರುವೆಂಬ ಗುರುವಿಂಗೆ । ಜ್ಞಾನವೆಂಬ ಶಿಷ್ಯನು ನಿರೂಪಿಸಿ
ಪೇಳ್ದ ಶ್ರೀವರ್ಣದ ಸಂವ್ವಾದಕ್ಕೆ ಶುಭವುಸ್ತು.

End : folio 65

ಗಂಗೆ ಗೌರಿ ರಮಣ ಜಯತು ಗುರುರಾಯಾ ।
ನಮ್ಮ ತುಂಗಭದ್ರೆಯರಸ ಜಯತು ಗುರುರಾಯಾ ।
ಅಂಗಭವದ ಹರನೆ ಜಯತು ಗುರುರಾಯಾ ।
ನಮ್ಮ ಸಂಗಮೇಶನೆ ಜಯತು ಜಯತು ಗುರುರಾಯಾ ॥೨೮॥
ಶರಣು ಶರಣಾರ್ಥಿ ಗುರುವೆ ನೀ ಎಮ್ಮ
ಮರಣಭವ ಪರಿಹರಿಪನೆ। ಧರಣಿ ಬ್ರಹ್ಮಾಂಡಗಳ....

Remarks :

ಶಿವನ ಸತಿಯರಾದ ಗಂಗೆ ಗಿರಿಜೆಯರ ನಡುವೆ ಉಂಟಾದ ಸಂವಾದವನ್ನು ಇಲ್ಲಿ ನಿರೂಪಿಸಿದೆ. ಕೊನೆಗೆ ಒಂದೆರಡು ಪುಟಗಳಿಲ್ಲದೆ ಕೃತಿ ಅಸಮಗ್ರವಾಗಿದೆ.

The dispute between the two wives of S'iva is narrated here. The metre adopted is not completely Sāṅgatya. The work here is incomplete missing a page or two at the end.

Palm-leaf MS. 1118 (A) is the same work and the work is complete there. See Sl. No. 27.

Sl. No. 203. ಗಣಸಹಸ್ರನಾಮ
GAṆASAHASRANĀMA

MS. No. 146/13. Author: Mallikārjuna. Form: Stōtra. Substance: Paper. Size: 6½″ × 5″. Character: Kannaḍa. Folios: 29. Lines on a page: 14. Letters in a line: 13. Appearance: Not old. Condition: Good. Complete or incomplete: Incomplete.

Beginning:

ಪೆರ್ಮ್ಮಡಿ ದೇವಯ್ಯ । ವೀರ ಚೋಳನು । ಜಡೆಯ
ನೈನಾರು । ಇರುವಾಳ್ತಾಂಡರು । ಇಲ್ಪಗಸಿಯ ನಂದಿ
ವಾಗೀಶ ನೈನಾರು । ಕೊಲ್ಪುಲಿಯರು । ಇಳಿಯ ಜಂಗುಳಿಯ
ನೈನಾರು । ಚಿರುಪುಲಿಯರು । ಕುಲಶ್ಚರಿಯರು । ಮೆರೆ
ಮಿಂಡ ದೇವರು । ನಮಿತ್ತಾಂಡಿಯರು । ಕಲಿಯಂಬರು
ಅರಿವಾಳ್ತಾಂಡರು । ಕಂಡ ವಲ ನಂಬಿಯಣಾಂಧಣರು ।
ಇಹಪ್ಪಗೆಯಾಂಡರು । ವೆಳ್ಳುತ್ತರು । ವಲ ಗಂಡ ಮೂರ್ತಿಗಳು।
ಊರ್ಧ್ವಶಿಲೆಯಾಂಡರು । ಕಳಚಂಗ ಪೆರುಮಳೆಯರು....
....

End:

....
ಸುರತರುವುಂ ಸುರಧೇನುವು
ವರ ಚಿಂತಾಮಣಿಗಳೆಂದು ಪೆಸರಂ ಪೇಳ್ವರು
ಹರಗಣಮಾಲೆಯ ಜಪಿಸಲು
ಭರದಿಂದಂ ಸಿದ್ಧಿಯಕ್ಕು ಶಿವ ಬಸವೇಶ ॥೩॥
ಹರ ಬಸವೇಶ ಗುರು ಬಸವೇಶ । ಸಂಗನ ಬಸವೇಶ
ಬಸವೇಶ್ವರಾರ್ಪಣಮಸ್ತು । ಶಿವಲಿಂಗಾರ್ಪಣಮಸ್ತು ।
ಇತಿ ಗಣಸಹಸ್ರನಾಮ ಸಮಾಪ್ತಿಃ ಮಂಗಳ ಮಸ್ತು

Remarks :

ಪ್ರಾರಂಭದ 64 ಪುಟಗಳು ಕಳೆದು ಹೋಗಿವೆ. ಈ ಕೃತಿ ಪುಟ 65–73ರಲ್ಲಿ ಅಡಕವಾಗಿದೆ. ಇದರಲ್ಲಿ 63 ಪುರಾತನರ ಮತ್ತು ಅಸಂಖ್ಯಾತರ ಹೆಸರುಗಳನ್ನು ಕೊಟ್ಟಿದೆ.

Here the MS. page-number begins from 65. So 64 pages in the beginning are lost. The main work is in the pages 65–73. It gives the names of 63 Purātanas and Asaṅkyātas. The remaining pages contain some Vīraśaiva mantras in Sanskrit. See Sl. No. 204.

Sl. No. 204. ಗಣಸಹಸ್ರನಾಮ
GAṆASAHASRANĀMA

MS. No. 144/2. Author: Mallikārjuna. Form: Stōtra. Substance: Paper. Size: 6″×4″. Character: Kannaḍa. Folios: 52. Lines on a page: 15. Letters in a line: 12. Appearance: Not old. Condition: Ordinary. Complete or incomplete: Complete. See K.K. Vol. I, p. 214.

Beginning : folio 6

ವೀಶ್ವರಃ ಸರ್ವಭೂತಾನಾಮ್ ವಿಶ್ವತಃ ಚಕ್ಷುಭೂತಾನಾಂ
ವಿಶ್ವತೋಮುಖೋ ವಿಶ್ವಾದಿಕೋ ದ್ರೋ (?) ಮಹಾಋಷಿಃ
ಸರ್ವಂ ಮಹೇಶ ರುದ್ರಃ
ತಸ್ಮೈಃ ರುದ್ರಾಯತೇನ್ನಮೋ ರುದ್ರೋ ವೈಕ್ರೂರೋ ರುದ್ರಃ
ಹೇ ರುದ್ರೋ ಪಶೂನಾಮ್....

End: folio 34/2

ವಿಲಸತ್ಪ್ರಮಥಗಣಂಗಳಿಗೆ । ರುದ್ರಗಣಾವಳಿಗೆ। ಅಲಘುತರದ ವೃಷಭಯೋಗಾಚಾರ್ಯರ ಕುಲಕೆ ನಿರ್ಮಲರಪ್ಪ ಆರುವತ್ತು ಮೂವರ್ಗೆ
ಷೋಡಶಗಣಂಗಳಿಗೆ ತೇರಸರ್ಗೆ। ಸುಲಕ್ಷಣೆನಿಸುವ ದಶಗಣಂಗಳಿಗೆ ಅಮರಗಣಾವಳಿಗೆ ಉಳಿದ ಅಸಂಖ್ಯಾತ ಭಕ್ತರ್ಗೆ ಮನ್ಮನದ ಛಲನಮಂ
ತೊಲಗಿಸಿ ಶಿವಾಂಘ್ರಿಯೊಳ್ ನೆಲಸುಗೆಂದಾಂ ವಂದಿಪೆಂ ।।
ಇಂತೀ ಗಣಸಹಸ್ರನಾಮ ಸಂಪೂರ್ಣ ಸಮಾಪ್ತಂ ।।

Remarks :

ಮೊದಲ ಆರು ಪುಟಗಳು ಹೋಗಿವೆ. ಪುಟಗಳು 1ರಿಂದ 34ರ ವರೆಗೆ ಈ ಕೃತಿ ಬರುತ್ತದೆ. ಕರ್ತೃವಿನ ಹೆಸರು ಇಲ್ಲಿ ಕಾಣದು. ಕವಿಚರಿತೆಯಲ್ಲಿ ಮಲ್ಲಿಕಾರ್ಜುನ ಎಂದು ಹೇಳಿದೆ, ಪುಟ 35 ರಿಂದ 59 ರಲ್ಲಿ 'ರುದ್ರಪಾರಿಜಾತ'ದಂತಹ ಕೆಲವು ಪದ್ಯಗಳಿವೆ.

Six pages in the beginning are lost. The name of the author is not found here. According to Kavicarite the author is Mallikārjuna. There are some songs like Rudrapārijāta etc. in pages 35 to 59. See Sl. No. 203.

Sl. No. 205. ಗರ್ಭಗೀತೆ

GARBHAGĪTE

MS. No. 85/9. Author : Gurunātha (?) Form : Ṣaṭpadi. Substance : Paper. Size : 8″ × 6½″. Character : Kannaḍa. Folios : 10. Lines on a page : 12. Letters in a line : 25. Appearance : Not old. Condition : Good. Complete or incomplete : Incomplete.

Beginning: folio 3

ಭಾ. ಷ॥ ಗೂಢಶಬ್ದವ ಕೇಳಿ ಕೃಷ್ಣನು
ಮೂಢಮನುಜರು ಮಂದಮತಿಗಳು
ಖೋಡಿಗಳು ಸಂಸಾರಶರಧಿಯ ಕೂಡಿ ಕರಗಿಹರು ।
ಬೇಡಿಬಿಗಿದಿಹರೆರಡು ಕಾಲಿಗೆ
ಆಡಿದರೆ ಆಲಿಸ ು ಮಾತನು
ಪ್ರೌಢತನದಲಿ ಹೊನ್ನು ಹೆಣ್ಣಿಗೆ ಶಕ್ತರಾಗಿಹರು ।೧೪।

End: folio 12

ಎಲ್ಲರಿಗೆ ಗುರುನಾಥ ನುಡಿದನು
ಎಲ್ಲರಿಗೆ ಗುರು ಕೊಡುವ ಕೊಂಬನು
ಎಲ್ಲರಲಿ ಗುರುವಾಗಿ ಬರುವನು ಎಲ್ಲು ತಾನಿಹನು ।
ಎಲ್ಲ ಮಾಯಾಮೋಹವಳಿಸುವ
ನೆಲ್ಲರಲಿ ತಾ ವ್ಯಾಪಕಾಗಿಹ
ನೆಲ್ಲ ತಾನೆಯೆ ತಾನೆಯಾಗಿಯ ತಾನೆ ರಂಜಿಸುವಾ ॥೭೨॥

Remarks :

ಮೊದಲೆರಡು ಹಾಳೆಗಳು ಹರಿದಿವೆ. ಭಗವದ್ಗೀತೆಯ ಸಾರ ವನ್ನು ೭೨ ಪದ್ಯಗಳಲ್ಲಿ ಹೇಳಿದೆ. ಗರ್ಭಗೀತೆಯೆಂಬ ಸಂಸ್ಕೃತ ಗ್ರಂಥದಿಂದ 26 ಪದ್ಯಗಳನ್ನು ಆಧಾರವಾಗಿ ಕೊಟ್ಟಿದೆ.

The first two pages of the text is torn. The essence of Bhagavadgīta is told in 72 stanzas.

Sl. No. 206. ಗರ್ಭಗೀತೆ

GARBHAGĪTE

MS. No. 65/9 (A). Author : Gurunātha (?) Form : Ṣaṭpadi. Substance : Paper. Size : $8\frac{1}{2}'' \times 6''$. Character : Kannaḍa. Folios : 20. Lines on a page : 22.

Letters in a line: 20. Appearance: Not old. Condition: Fair. Complete or incomplete: Complete.

Beginning: folio 1

ಶ್ರೀ ಗರ್ಭಗೀತಾ ಲಿಖ್ಯತೆ ।
ಭಾ. ಷ॥ ಶ್ರೀ ಗಣಪನಂಘ್ರಿಯನು ಭಜಿಸಲಾ
ಕಾಗೆ ತಾನೇ ಕೃಪೆಯ ಮಳೆಯನು
ಕೂಗಿ ಕರೆದನು ತನ್ನ ಲೀಲಾನಂದ ನಿಜಸುಖಯಾ ।
ಭೋಗಿ ಭೂಷಣ ಪ್ರಿಯ ಕುಮಾರನು
ಯೋಗ ಮಾಯಾ ರೂಪದಿಂದಲಿ
ಆಗ ಬಂದನುಕೂಲವಾದನು ವಿಘ್ನನಾಯಕನು ॥೧॥

End: folio 20

ತನ್ನ ಲೀಲಾನಂದವಿಭವದಿ
ಯೆನ್ನ ಒಳಹೊರಗೇಕವಾದನು
ತಾನು ನಾನೆಂಬುಭಯವಳಿದನು ನಾನೆ ತಾನಾದ ।
ಎನ್ನ ಭಾಗ್ಯವನೇನ ಹೇಳಲಿ
ಬಿನ್ನವಿಸಲಿನ್ನಾರಕಾಣೆನು
ಬಿನ್ನಭಾವದ ಭ್ರಮೆಯ ಕಳೆದನು ಕೃಷ್ಣನಾನೆಂಬ ೭೩॥
ಗರ್ಭಗೀತಾಪುಸ್ತಕಂ ಸಂಪೂರ್ಣಂ

Remarks

73 ಷಟ್ಪದಿಗಳಲ್ಲಿ ಮೂಲ ಭಗವದ್ಗೀತೆಯ ಸಾರವನ್ನು ಇಲ್ಲಿ ಕೊಟ್ಟಿದೆ. ಆಧಾರವಾಗಿ ಸಂಸ್ಕೃತ ಪದ್ಯಗಳನ್ನೂ ಕೊಟ್ಟಿದೆ.

The essence of Gīta is explained here in 73 stanzas of Ṣaṭpadi metre.

Sl. No 207. ಗೀರ್ವಾಣ ಭಾಷಾ ಸಂಗ್ರಹ

GĪRVĀṆABHĀṢĀ SAṄGRAHA

MS. No. 143/7. Author: ? Form: Prose, Substance: Paper. Size: 8″×6½″. Character: Kan-

naḍa. Folios : 26. Lines on a page : 20. Letters in a line : 18. Appearance : Modern. Condition : Good. Complete or incomplete : ?

Beginning : folio 1

ಶ್ಲೋಕ । ಶ್ರೀ ಗುರುಂ ಶಂಕರಂ ಗೌರೀಂ ತಯೋಃಪುತ್ರವಿನಾಯಕಂ ।
ಏತಾನ್ಸಮಮನಸೀ ಧ್ಯಾತ್ವಾ ವದಾಮಿ ದೇವಭಾಷಿತಂ ॥೧॥
ಟೀಕು । ಶ್ರೀ ಶೋಭಾಸಮೇತನಾದ । ಗುರುಂ ವಿದ್ಯಾಗುರುವನ್ನೂ ।
ಶಂಕರಂ ಸುಖವನ್ನುಂಟುಮಾಡುವಂಥ ಶಿವನನ್ನೂ । ಗೌರೀಂ
ಆತನ ಹೆಂಡತಿಯಾದ ಸರ್ವಮಂಗಳೆಯನ್ನೂ...

End : folio 21

....ತತ್‌ಜ್ಞಾತ್ವಾ ದಂಪತಯೌತು ತೋಷ, ಆದನ್ನು ತಿಳಿದು ಗಂಡು ಹೆಂಡಿರು
ಸಂತೋಷವುಳ್ಳವರಾದರು । ಇತಿ ಪುತ್ರಾ, ದೈವಬಲಂ ಮಹನ್, ಹೀಗೆ ಮಗನೇ,
ದೈವಬಲವೆಂಬುವುದು ದೊಡ್ಡದು ಖಲು ಸ್ವಾಮಿನ್ ಏತತ್ಕಥಾಂ ಶ್ರುತ್ವಾ
ಸಂತೋಷಜ್ಯಾತಂ । ಖರೇದು ಸ್ವಾಮೀ ಈ ಕಥೆಯನ್ನು ಕೇಳಿ ಸಂತೋಷವಾಯಿತು.

Remarks :

ಈ ಗ್ರಂಥವು ರಾಜಕುಮಾರ ಶಂಕರನ ಪತ್ನಿ ಶಿವಪುರದ ಹೇಮಾವತಿಯ ಕಥೆಯನ್ನು ಗುರುಶಿಷ್ಯಸಂವಾದ ರೂಪದಲ್ಲಿ ಸಂಸ್ಕೃತ ಭಾಷೆಯಲ್ಲಿ ರಚಿಸಿದೆ. ಮೂಲವನ್ನೂ ಕನ್ನಡ ಭಾಷಾಂತರವನ್ನೂ ಒಟ್ಟಿಗೆ ಕೊಟ್ಟಿದೆ.

This work gives the Story of Hēmāvati of Śivapura, wife of the prince Śaṅkara, in the form of a dialogue between a teacher and a student. The author was born in Śaka (?) 1783.

Sl. No. 208. ಗುರುಗುಹೇಶ್ವರತತ್ತ್ವ
GURUGUHĒS'VARATATTVA

MS. No. 148/1. Author: [Guhēs'vara]. Form: Prose. Substance: Paper. Size: 8″×6½″. Character: Kannaḍa. Folios: 37. Lines on a page: 17. Letters in a line: 22. Appearance: Not old. Condition: Good. Complete or incomplete: Complete.

Beginning: folio 1

ಶ್ರೀ । ಶುಭಮಸ್ತು । ಶ್ರೀ ಸದ್ಗುರು ಮೂರ್ತಯೇ ನಮಃ ।
ಶ್ರೀ ಗಣಾಧಿಪತಾಯ ನಮಃ। ಗುರು ಬ್ರ್ಹಮ್ಮಾ ಗುರು ವಿಷ್ಣು।
ಗುರುದೇವೋ ಮಹೇಶ್ವರಾಃ । ಗುರು ಸಾಕ್ಷಾತ್ ಪರಬ್ರಹ್ಮ
ಸ್ತಸ್ಮೈಃ
ಶ್ರೀ ಗುರುವೇ ನಮಃ ।। ಗುಹೇಶ್ವರ ಸ್ವಾಮಿಗಳು ಹೇಳಿದಂಥ
ತತ್ತ್ವಶಾಸ್ತ್ರನಿರ್ಣಯ ಬರೆಯುವದಕ್ಕೆ ನಿರ್ವಿಘ್ನಮಸ್ತು ।

End: folio 14

ಈ ಪರಬ್ರಹ್ಮನ ಕಂಡಲ್ಲಿ ಜೀವನ್ಮುಕ್ತನಾಗಿ ಅಂತ್ಯದಲ್ಲಿ
ಶಿವ ಸಾಯೋಜ್ಯ ಮುಕ್ತಿಯಂ ಪಡೆವನಯ್ಯ । ಎನ್ನಪ್ಪ
ನಿರಾಕಾರನಿರಂಜನ ಆನಂದ ಬ್ರಹ್ಮಕಾಣಯ್ಯ ಗುರುಗುಹೇಶ್ವರಾ
॥೧೨॥
ಗುರು ಗುಹೇಶ್ವರ ಸ್ವಾಮಿಯವರ ತತ್ವ ಸಂಪೂರ್ಣಂ
ಮಂಗಳಂ...

Remarks:

ಈ ಕೃತಿ 14 ಪುಟಗಳಲ್ಲಿ ಇದೆ. ಗುಹೇಶ್ವರ ವಚನಗಳಿಗೆ ಇಲ್ಲಿ ವ್ಯಾಖ್ಯಾನವಿದೆ. ವ್ಯಾಖ್ಯಾನಕಾರನ ಹೆಸರು ಕಂಡು ಬರುವುದಿಲ್ಲ. ಕೆಲವು ಹಾಳೆಗಳಲ್ಲಿ ಫಲಜ್ಯೋತಿಷ್ಯ, ಬಾಲಗ್ರಹ ಚಿಕಿತ್ಸೆಯಲ್ಲಿ ರಾವಣಮತ ಇತ್ಯಾದಿ ವಿಷಯಗಳೂ ಇವೆ. ಒಂದು ಪುಟದಲ್ಲಿ ಆರೂಢ ಶಾಂತಸಿಂಡ ರಚಿತವಾದ ಒಂದೆರಡು ಹಾಡುಗಳೂ ಇವೆ.

The present work consists of 14 pages here. Vacanas by Guhēs'vara are taken and expanded in this work. The name of the Vyākhyānakāra is not given.

The MS. has some pages dealing with 'Phalajyōtiṣya, Rāvaṇamata in Bālagrahacikitsa' etc. one or two minor songs by Ārūḍhas'ānta are written on one page.

Sl. No 209. [ಗ್ರಹಬಂಧು]
[GRAHABANDHU]

MS. No. 38/2. Author: ? Form: Prose. Substance: Paper. Size: 8½″ × 6″. Character: Kannaḍa. Folios: 34. Lines on a page: 15. Letters in a line: 13. Appearance: Not old. Condition: Ordinary. Complete or incomplete: Incomplete.

Beginning: folio 1

ಜ್ವರಕ್ಕೆ ಈ ಯಂತ್ರವನ್ನು ಮಂತ್ರವನ್ನು ಎರಡು ಚೀಟಿ ಬರೆದು....
ಕೊದಲು ಹಾಕಿ ಕಟ್ಟಿ ಇಪ್ಪತ್ತಾವರ್ತಿ ಜಪಿಸಿ ಕಟ್ಟಿದರೆ ಅಂಜಿಕೆಯು ಜ್ವರ
ಮಣಯುವುದು । ಸೋಜಿಗ ಹಣ್ಣು ಕಾಯಿ ಧೂಪ ದೀಪ ಗಂಧ ಅಕ್ಷತೆ
ಐದು ದುಡ್ಡು ೯ ದಿನಸಿನ ಹೂವು ಅಷ್ಟವಿಧಾರ್ಚನೆಯಿಂದ
ಪೂಜಿಸಿ ಕಟ್ಟುವುದು. (ಈ ಕೆಳಗೆ ಯಂತ್ರದಲ್ಲಿ ಬರೆಯುತಕ್ಕ ಚಿತ್ರವಿದೆ)
ಚಿನ್ನದ ತಗಡಿನ ಮೇಲೆ ಬರೆಯುವುದು (ಗಟಿಗಟಿ) ಪಿಗಾಳಿಗೆ ಬರೆಯುವುದು.

End : folio 34

ಶ್ರೀಮಂಡಕಳ್ಳಿಬೀಜ, ಕಾಡ ಉತ್ರಾಣಿ ಬೀಜ ಕೆಂಪು
ಚಿತ್ರಾಮುಲ್ಲಿಬೇರು ತಂದು ಅರದು ಕೃಲೇಪವನ್ನು ಮಾಡಿ
ಕೈಯಲ್ಲಿ ಹಿಡೆದರೆ ಕಾಯಿ ಒಡೆಯುವುದು ॥ ಶ್ರೀ ಪುಷ್ಟಿಗೆ
ವ್ಯೆನೋವಿಗೆ ಔಷಧ. ಬಾಳವಿಬೀಜ ಚೀನಿ ಸಕ್ಕರೆ ಹಾಲಿ ನೊಳಗೆ
ತೆಗೆದುಕೊಳ್ಳುವುದು । ಇಪ್ಪತ್ತೊಂದು ದಿವಸ ತೆಗೆದುಕೊಳ್ಳು ವುದು
ಪಾಕ....(?) ಏಳು ಮೆಣಸು ಏಳು ಬೆಳ್ಳುಳ್ಳಿ.

Remarks :

ಅನೇಕ ವ್ಯಾಧಿಗಳಿಗೆ 'ಗ್ರಹಯಂತ್ರ'ಗಳ ಮೂಲಕ ಮತ್ತು ಆಯುರ್ವೇದದ ಔಷಧಗಳ ಮೂಲಕ ಇಲ್ಲಿ ಚಿಕಿತ್ಸೆಯನ್ನು ಹೇಳಿದೆ.

The work deals with the cure for many diseases through 'Grahayantras' and medicines of Āyurvēda. Here and there Sanskrit s'lōkas as an authority are quoted. Figures of Yantras are drown along with 'Vidhānas' of them. The script is incorrect.

Sl. No. 210. ಚಿತ್ರಶೇಖರ ಸೋಮಶೇಖರ ಚೌಪದನಗಳು

CITRAS'ĒKHARA SŌMAS'ĒKHARA CAUPADANAGAḶU

MS. No. 144/11. Author : Beratūra Karibasava. Form : Caupadi. Substance : Paper. Size : 9″ × 6¼″. Character : Kannaḍa. Folios: 62. Lines on a page : 23. Letters in a line : 20. Appearance : Not old.

Condition : Good. Complete or incomplete : Incomplete.

Beginning : folio 8

ಚಿತ್ರಶೇಖರ ಸೋಮಶೇಖರ ಚೌಪದನ ಬರೆಯಲಿಕ್ಕೆ ಶುಭ ಮಸ್ತು ।

ಪಲ್ಲ । ಚೌಪದನ ಚೌಪದನವೆನುತ ಕೊಂಡಾಡಿ
ಚದುರ ಗಣನಾಥನs ಲೀಲೆಯನು ಪಾಡಿ
ಚೌದಳದಿ ಪೂಜಿಸುತ ಫ. ಗಳನು ಬೇಡಿ
ಚೌಷಷ್ಠಿ ವಿದ್ಯೆಗಳ ಗಣಪತಿಗೆ ಬೇಡಿ ॥

End : folio 31

ಶರಣು ಶರಣಾರ್ಥಿ ಶಿವಶರಣ ಮುಖ್ಯರಿಗೆ
ಶರಣು ಶರಣಾರ್ಥಿ ಬಸವಾದಿ ಪ್ರಮುಥರಿಗೆ
ಶರಣು ಶರಣಾರ್ಥಿ ಸದ್ಭಕ್ತ ಸಜ್ಜನಕೆ
ಶರಣು ಶರಣಾರ್ಥಿ ಗುರುಮೂರ್ತಿಯೆಲ್ಲರಿಗೆ ॥೧೨೩॥ ಇಂತೀ ...

Remarks :

ಮೊದಲ 7 ಪುಟಗಳು ಫಲಜ್ಯೋತಿಷ್ಯವನ್ನು ಕೆಲಮಟ್ಟಿಗೆ ಕುರಿತಿದೆ. ಮುಖ್ಯವಾದ ಗ್ರಂಥ ಪುಟ 8 ರಿಂದ 31ರವರೆಗಿದೆ. ಕೃತಿಯು ಎರಡು ಭಾಗಗಳಲ್ಲಿದೆ–ಒಂದು ಚಿತ್ರಶೇಖರ ಚೌಪದನ; ಎರಡು ಸೋಮಶೇಖರ ಚೌಪದನ. ಮೊದಲ ಭಾಗದಲ್ಲಿ 153 ಪದ್ಯಗಳೂ ಎರಡನೆಯ ಭಾಗದಲ್ಲಿ 123 ಪದ್ಯಗಳೂ ಇವೆ.

The work narrates the story of the two sons of Vajramukuṭa.

The work is divided into two parts as Citraśēkhara Caupadana and Sōmaśēkhara Caupadana. The first part has 153 stanzas and the second part has 123 stanzas.

The name of the author is not clear. The work is dedicated to Beratūrēs'a. The remaining pages of the MS. contain minor songs.

Sl No 211. ಚೆನ್ನಬಸವೇಶ್ವರನ ಜೋಗುಳ
CENNABASAVĒS'VARANA JŌGUḶA

MS. No. 65/5(B). Author: ? Form: Song. Substance: Paper. Size: 8½"×6". Character: Kannaḍa. Folios: 4. Lines on a page: 17. Letters in a line: 15. Appearance: Not old. Condition: Good. Complete or incomplete: Complete.

Beginning: folio 1

ಶ್ರೀ ಗುರುವೇಗತಿ । ಚೆನ್ನಬಸವೇಶ್ವರನ ಜೋಗಳಪದ
ಜೋಯೆನ್ನಿ ಶರಣಸತಿಯರೆಲ್ಲ ಕೂಡಿ
ಜೋಯೆಂದು ಪಾಡಿರಿ ನಲಿನಲಿದಾಡಿ
ತಾಯಿ ನಾಗವ್ವನ ಮಗನ ಮುದ್ದಾಡಿ
ಹೆಂಗ ಜೋ ಎಂದು ಚೆನಬಸವನ ಕೊಂಡಾಡಿ ॥೧॥

End: folio 4

ಕಣ್ಣಕಪ್ಪನೆ ಹಚ್ಚಿ ಬಹುಅಂದವಾಗಿ
ಬಣ್ಣದ ತೊಟ್ಟಿಲಕಟ್ಟಿ ಚೆನ್ನಾಗಿ
ಚಿಣ್ಣನ ಮಲಗಿಸಿ ಜೋಯೆಂದು ತೂಗಿ
ಚೆನ್ನಬಸವನೆಂದು ಹೆಸರಿಟ್ಟುಕೂಗಿ ॥೨೬॥

ಗುರುಚೆನ್ನಬಸವನ ಜೋಗುಳಪದವಾ
ಹರುಷದಿ ಕಿವಿಗೊಟ್ಟು ಕೇಳ್ದವರಿಗೊಲಿವಾ ।
ಕರುಣದಿ ಕೊಡುವನು ಬೇಡಿದ ವರವಾ
ತುರುಬಿಯು ಗುಡ್ಡದ ಶಿವಲಿಂಗ ಕೊಡುವಾ ॥೨೭॥
ಚೆನ್ನಬಸವೇಶ್ವರದೇವರ ಜೋಗುಳಪದ ಸಂಪೂರ್ಣ ಮಂಗಳ ಮಹಾಶ್ರೀ ॥

Remarks :

ಈ ಕೃತಿ 27 ಪದ್ಯಗಳಿರುವ ಒಂದು ಜೋಗುಳ ಪದ. ಇದು ನಾಗಮ್ಮನ ಮಗ ಚೆನ್ನಬಸವನನ್ನು ಕುರಿತಿದೆ. ಇದಲ್ಲದೆ ಈ ಪ್ರತಿಯಲ್ಲಿ ಎರಡು ಲಾವಣಿ ಪದಗಳೂ ಕೆಲವು ಚಿಕ್ಕ ಹಾಡುಗಳೂ ಇವೆ.

The work is a Jōguḷapada having 27 padyas. It is about Cennabasavēśa son of Nāgamma. The MS. contains two Lāvaṇi padas and other minor songs.

Sl. No. 212. ಚೆನ್ನಬಸವೇಶ್ವರ ಪುರಾಣ
CENNABASAVĒŚVARA PURĀṆA

MS. No. 85/2. Author : Virūpākṣa. Form : Ṣaṭpadi. Substance : Paper. Size : 12″ × 4¼″. Character : Kannaḍa. Folios : 95. Lines on a page : 10. Letters in a line : 42. Appearance : Not old. Condition : Good. Complete or incomplete : Incomplete. See K.K. Vol. II, p. 308.

Beginning : folio 1

ವಾ. ಷ॥ ಪಲ್ಲ। ಪರಮಗುರು ಚೆನ್ನಬಸವಂ ಸಿದ್ಧರಾಮಂಗೆ
ಪರಮಭವತತ್ತ್ವಮಂ ತಿಳಿಪಿ ದೀಕ್ಷೆಯನಿತ್ತು
ಪರಮ ಸತ್ಕಥೆಯ ವರ ಸದ್ಭಕ್ತರೊಲವಿನಿಂ ಕೇಳಿ
ಕೃತಕೃತ್ಯರಹುದೂ ॥

End : folio 95

ಇಂತೆಸೆವ ಚೆನ್ನಬಸವೇಶ್ವರ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪ●ಸಿದವರ್ಗೆ ಭಕ್ತಿಯಿಂ ಕೇಳ
ದವರ್ಗೆ।

ಸಂತತಂ ಸಕಲಸುಖವುಂ ಸಕಲಭೋಗವ
ನಂತ ಸೌಭಾಗ್ಯವುಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ
॥ ೪೧ ॥

Remarks :

ಕೃತಿ ಅಸಮಗ್ರ. 24 ಸಂಧಿಗಳವರೆಗೆ ಮಾತ್ರವಿದೆ.
This MS. has only 24 sandhis.

Sl. No. 213. ಚೋರಕಥೆ
CŌRAKATHE

MS. No. 155/12. Author: Kastūri Siddha. Form: Yakṣagāna. Substance: Paper. Size: ″×6″. Character: Kannaḍa. Folios: 37. Lines on a page: 26. Letters in a line: 22. Appearance: Not old. Condition: Defective. Complete or incomplete: Incomplete. See K.K. Vol. III, p. 157.

Beginning : folio 10

ಉತ್ತಮ ವಜ್ರಮುಕುಟನ ಪುತ್ರರು । ನಾವಿರ್ವರೀಗ ಎಂದು ।
ಚಿತ್ರಶೇಖರ ಸೋಮಶೆ ಖರರು। ಬಿತ್ತರದಿ ನೀಲಾವತಿಗೆ ಕಳವಿಗೆ
ಬಂದೆವು॥ ದ್ವಿಪದಿ॥ ಕುವರರಾಡಿದ ನುಡಿಗೆ ಕಡುದುಃಖ ಮಾಡಿ
ತಮಗೆ ಬಂದುದ ಪೇಳುತಿರ್ದ ವಾಸ್ತವವು। ಅನುಮಿಸಪುರ
ದೊಳಿಹೆವು
ನಾವೇಳು ಬಂಧು। ಜನನಿ ಒಬ್ಬಳೆ ಪಡೆದಳೆಮ್ಮ ಸಂತೋಷದಲಿ।
ಸುರಲೋಕದಲಿ......

End : folio 46

.....ಕಪ್ಪುಗೊರಳನ ಸುತನ ಕರುಣದ ಕೃತಿಯಾ । ಮನಹರ್ಷ
ದಿಂದ
ಕೇಳಿ ಓದಿ ಬರೆವರ್ಗೆ । ಅನವರತ ಆಯುರಾರೋಗ್ಯ ಐಶ್ವರ್ಯ
ವನು ।

ಹರನೊಲಿದು ಕರುಣಿಸನು ಶರಧಿ ಗಿರಿ ತಾರೆ ಹಿಮಕರ ತರಣಿ
ಯುಳ್ಳನಕ ।
ಸ್ಥಿರವಾದ ಕೃತಿಯು । ಅಂತು ಸಂಧಿ ೮ಕ್ಕಂ ಪದನು ೧೨೦೦ಕ್ಕಂ
ಮಂಗಳಂ ।

Remarks :

ಪ್ರತಿಯ ಕಾಲ ಸಿದ್ಧಾರ್ಥಿ ಸಂವತ್ಸರ ಮಾಘ ಶುದ್ಧ ತ್ರಿತೀಯ ಸೋಮವಾರ. ಇದು 8 ಸಂಧಿ, 1200 ಪದ್ಯಗಳಿರುವ ಒಂದು ಯಕ್ಷಗಾನ ಕೃತಿಯಾಗಿದೆ. ಈ ಪ್ರತಿಯನ್ನು ಕೊಣಿತೆಂಬಿಗೆ ಮಠದ ಬಸಲಿಂಗಯ್ಯನು ಬರೆದು ಸಿಡೆನೂರ ಸಿದ್ದಪ್ಪನಿಗೆ ಕೊಟ್ಟಂತೆ ಹೇಳಿದೆ.

The work is a 'Yakṣagāna'. There are 8 sandhis and 1200 padyas. The story of two sons Citraśēkhara and Sōmaśēkhara of Vajramukuṭarāya is narrated here. First 10 pages of the MS. are missing.

Sl. No. 214. ಜಲಶಿಲ್ಪಿ

JALAŚILPI

MS. No. 1/4 (A). Author : Raṭṭa (?) Form : Prose. Substance : Paper. Size : 8″ × 6″. Character : Kannaḍa. Folios : 7. Lines on a page : 14. Letters in a line : 15. Appearance : Not old. Condition : Good. Complete or incomplete : Complete.

Beginning : folio 1

ಅತ್ತಿಮರನು ಇದ್ದಲ್ಲಿ ಮೂರುಮೊಳದಿಂದ ಮ್ಯಾಲಕ್ಕೆ ಅಗಳಲು
ಒಂದು
ಪುರುಷ ಪ್ರಮಾಣದಲ್ಲಿ ಹಾಂವು ಇದ್ದಿತು. ಅಲ್ಲಿಂದ ಕೆಳಗೆ ಕರಿಯ
ಕಲ್ಲುತೋರಿ ಅಲ್ಲಿಂದ

ಕೆಳಗು ಪುರುಷ ಪ್ರಮಾಣದಲ್ಲಿ ಅಗಳಲು ಅಲ್ಲಿ ಮಸಿಯ ಬಣ್ಣದ ಕಪ್ಪಿ ಇರುವದು. ಅಲ್ಲಿಂದ
ಮತ್ತೆ ತೊಳಲಿ ಬಣ್ಣದ ಮಣ್ಣು ಬಿಳಿಯ ಕಲ್ಲು ಇರುವದು. ಅಲ್ಲಿಂದ ಕೆಳಗೆ ಎರಡು
ಪುರುಷ ಪ್ರಮಾಣದಲ್ಲಿ ಬಡಗಲ ನೀರದಾರಿ ಬರುವುದು ॥೬॥

End: folio 13, 14

ಹೊಸ ಸುಣ್ಣದ ನೀರು ಹೊಯ್ದು ನಿಂಬಿಯ ಗಿಡದ ತೊಪ್ಪಲ ಸುಡುವುದು.
ಅದರಿಂದ ಕಲ್ಲು ಮೆತ್ತಗೆ ಆಗುವುದು। ಕದಳಿಯ ಬೂದಿ ಹುಳಿ ಮಜ್ಜಿಗೆಯಲ್ಲಿ ಕಲಸಿ
ಇಟ್ಟು ಒಂದು ರಾತ್ರಿಯಲ್ಲಿ ಅದನ್ನು ಕಲ್ಲಿಗೆ ಹಾಕಿ ತುಳಿದು ಭೇದಿಸಲು ಕಲ್ಲು
ಶಿಡಲಾಗಿ (?) ಒಡವುದು। ಇದನ್ನು ರಟ್ಟ ಪೇಳಿದನು। ಇಲ್ಲಿಗೆ ಜಲಶಿಲ್ಪಿ ಸಮಾಪ್ತಂ.

Remarks :

ಗ್ರಂಥ 6ನೆಯ ವಚನದಿಂದ ಆರಂಭವಾಗಿದೆ. ನೆಲದೊಳಗೆ ನೀರು ದೊರೆಯುವುದನ್ನು ಕುರಿತು 27 ಪ್ರಯೋಗ ಹೇಳಿದೆ.

The work deals with the underground water in 27 different experiments.

Sl. No. 215. ಜೈಮಿನಿ ಭಾರತ

JAIMINI BHĀRATA

MS. No.155/1. Author: Lakṣmīs'a. Form: Ṣaṭpadi. Substance: Paper. Size: 9″ × 6″. Character: Kannaḍa. Folios: 24. Lines on a page: 24. Letters in a line: 22. Appearance: Not old. Condition: Defective. Complete or incomplete: Incomplete. See K.K. Vol. II, p. 523.

Beginning: folio 26

ಶ್ರೀಪಾದವೇ ಗತಿ। ಜೈಮಿನೀ ಪದ ಬರೆಯುವುದಕ್ಕೆ ಶುಭಮಸ್ತು

। ವಾ. ಷ. । ಶ್ರೀವಧುವಿನಂಬಕಚಕೋರಕಂ ಪೊರೆಯೆ ಭ ।
ಕ್ತಾವಳಿಯ ಹೃತ್ಕುಮುದಕೋರಕಂ ಬಿರಿಯೆ ಜಗ ।
ತೀವಲಯದಮಲಸೌಭಾಗ್ಯರತ್ನಾಕರಂ ಪೆರ್ಚಿನಿಂ ಮೇರೆ
ವರಿಯೆ ॥

ಆವಗಂ ಸರಸ ಕರುಣಾಮೃತದ ಕಲೆಗಳಿಂ ।
ತೀವಿದೆಳನಗೆಯ ಬೆಳ್ದಿಂಗಳಂ ಪಸರಿಸುವ ।
ದೇವಪುರನಿಲಯ ಲಕ್ಷ್ಮೀರಮಣನಾಸ್ಯಚಂದ್ರಾನಂದವೆಮ
ಗೀಯಲಿ ॥೧॥

End: folio 41

ಕೇಳಿ ನೃಪನುತ್ಸವದೊಳಾವ್ರಜಂ ಸತ್ಕರಿಸಿ ।
ಬೀಳುಕೊಡಲರಸಿಯರ ತಂಡದಾರುತಿಗಳನಿ ।
ವಾಳಿಗಳ ಸಡಗರದೊಳರಮನೆಗೆ ಬಂದು ಪಾಂಚಾಲಿಗೀ ಸಂಗತಿ
ಯನೂ ॥

ಹೇಳಿ ಮುರಹರನ ಮಂದಿರಕೆ ನಡೆತಂದು ನಿಜ ।
ಭಾಳಮಂ ಚರಣದೊಳ್ಚಾಚಿ ತಮ್ಮಯ ವಿಜಯ ।
ದೇಳಿಗೆಯನೊರೆಯಲ್ಕೆ ಮನ್ನಿಸಿದನಾತನಂ ದೇವಪುರ ಲಕ್ಷ್ಮೀ
ಶನೂ ॥೭೩॥

ಅಂತು ಸಂಧಿ ೪ಕ್ಕಂ ಪದನು ೧೮೩ಕ್ಕಂ ಮಂಗಳಂ

Remarks:

ಈ ಪ್ರತಿಯಲ್ಲಿ ಜೈಮಿನಿ ಭಾರತದ ಮೊದಲ ನಾಲ್ಕು ಸಂಧಿಗಳಿವೆ. ಒಟ್ಟು ಪದ್ಯಗಳ ಸಂಖ್ಯೆ 183.

The MS. pages 26-41 contain Jaimini Bhārata. Only the first four sandhis having 183 padyas are here. The remaining pages have some minor songs. Corners of some pages are torn.

Sl. No. 216. ಜೈಮಿನಿ ಭಾರತ

JAIMINI BHĀRATA

